UNIVERSAL
LIBRARY
OU_200812
UNIVERSAL
LIBRARY

ಅಷ್ಟಭಾಷಾ ಕವಿ ಚಂದ್ರಶೇಖರ
ವಿರಚಿತ

ಪಂಪಾಸ್ಥಾನ ವರ್ಣನಂ

ಶರಣ ಸಾಹಿತ್ಯ ಗ್ರಂಥಮಾಲೆ.

K 81.6.   K. 3455.
45P. ಚಂದ್ರಶೇಖರ ಕವಿ.
ಸಂಖ್ಯಾಜ್ಞಾನವರ್ಣನ /1955
13.11.61 P422

ವಿಜ್ಞಾಪನೆ.

ಅದ್ಭುತರಾಮಾಯಣವೆಂಬ ಪುಸ್ತಕವನ್ನು ಕಾಲೇಜುವಿದ್ಯಾರ್ಥಿಗಳಿಂದ ಓದಿಸುತ್ತಿರುವಾಗ, ಅದರಲ್ಲಿರುವ ಒಂದು ಸಣ್ಣ ಕಥೆಯನ್ನು ನಾಟಕರೂಪವಾಗಿ ಬರೆಯಬೇಕೆಂದು ತೋರಿ, ಅದರಮೇಲೆ ಒಂದುಪುಟದಲ್ಲಿ ಅಡಗಿದ್ದ ಆ ಕಥೆಯನ್ನು ಹೀಗೆ ನೂರುಪುಟಗಳಾಗಿ ವಿಸ್ತರಿಸಿ ಬರೆದಿದೆ. ಇದರಲ್ಲಿ ಒಂದೆರಡುಕಡೆಯಲ್ಲಿಮಾತ್ರ, ಸಂದರ್ಭಾನುಸಾರವಾಗಿ ಬೇರೆ ಕವಿಗಳ ವಾಕ್ಯಶೈಲಿಯು ಸೇರಿಸಲ್ಪಟ್ಟಿದೆ. ಇದು ಸಣ್ಣಪುಸ್ತಕವಾಗಿದ್ದರೂ ಆಮೂಲಾಗ್ರವಾಗಿ ಹುಡುಕಿನೋಡಿದಪಕ್ಷದಲ್ಲಿ ಗುಣಗ್ರಾಹಿಗಳಿಗೆ, ಒಂದೆರಡು ಗುಣಾಂಶಗಳು ಸಿಕ್ಕದಿರಲಾರವೆಂದು ನಂಬುತ್ತೇನೆ.

ಎಮ್. ಡಿ. ಅಳಸಿಂಗರಾಚಾರ್.

FOREWORD.

BY

B. Rama Rao, M.A., L.L.B. (Senior Translator to the Government of Madras and Chairman of the Board of Studies in Kanarese, University of Madras.)

I write these few lines at the request of the author, more with a view to give a brief history of the origin of this dramatic piece than to introduce to the Kannada reading public, my learned friend, already a familiar figure in the field of Kannada Literature. This excellent play is the outcome of a keen desire on the part of the Kannada members of the Suguna Vilasa Sabha, Madras, who wished to stage a short Kannada drama, specially written for the occasion, on the "Kannada Members' Day" during the annual Dasara celebrations of the Sabha in 1917. Short as it was, the play attracted wide attention and elicited favourable comment when staged, and the author, at the request of some of us, has, after considerable revision and amplification, brought it out in book form. The Kanarese section of the Suguna Vilasa Sabha will, it need hardly be doubted, take the earliest opportunity to put the same on the boards, as a public performance, and regale the Madras Kannada public with a bit of what would remind them of their own "Home, Sweet Home" in this land of their 'exile.'

It is rather strange that, in spite of the fact that the Kannada people have exhibited high histrionic talents,

the number of original dramas in Kannada possessing real merit is very small. We have, of course, a large number of translations, both from English and Sanskrit, excellently executed by expert writers, but that is another matter. The publication of the present drama, therefore, cannot but be welcomed by all those interested in the development of Kannada dramatic literature. I may, without fear of contradiction, assert that both in point of language and matter "Srimati Parinayam," is undoubtedly a production of a very high order, and with this brief foreword, I commend the book to the kind patronage of the cultured Kannada public.

MADRAS,
July, 1918.

B. RAMA RAO.

ಶ್ರೀರಸ್ತು.

ಶ್ರೀಮತೀ ಪರಿಣಯ ನಾಟಕಂ.

—:(o):—

(ಸೂತ್ರಧಾರನು ಪ್ರವೇಶಿಸುವನು.)

ನಾಂದೀವೃತ್ತಂ.

* ಶ್ರೀಲಕ್ಷ್ಮೀ ಕುಚ ಕುಂಕುಮಾಂಕಿತ ವಿಶಾಲೋರಸ್ಥಲಂ ಸತ್ಕೃಪಾ ।
ಲೋಲಂ ಕಾಲನಿಯಂತ್ರಿತಾಖಿಲ! ಜಗಜ್ಜಾಲಂ ಘನಶ್ಯಾಮಲಂ ।
ಬಾಲೇಂದುಪ್ರತಿಮಾನಫಾಲನಮಲಂ ತ್ರೈಲೋಕ್ಯ ರಂಗಸ್ಥಲೀ ।
ಲೀಲಾನಾಟಕ ಸೂತ್ರಧಾರನೆಮಗೀಗಾನಂದಸಂದೋಹಮಂ ॥

(ಪುಷ್ಪಾಂಜಲಿಯನ್ನಿರಚಿ ಸುತ್ತಲೂ ನೋಡಿ) ಆಹಾ ! ಏನೀ ಪ್ರಭಾತದ ಸೊಗಸು !

ರಾಗ— ಕೇದಾರ ; ರೂಪಕತಾಳ.

(ಭಜನ ಸೇಯವೇ ವೋ ಮನಸ) ಎಂಬಂತೆ

ಭಜಿಪೆನೈ ಸದಾ ಶ್ರೀ ಹರಿಯ । ಸುಜನಾರ್ತಿಹಾರಿಯ ॥ಪ॥
ಭುಜಗಭೂಷಣಾದಿ ವಿಬುಧ । ಪೂಜಿತಪದಸರೋಜನ ॥ಅ॥
ಕಪಟನಾಟಕ ಸೂತ್ರಧಾರಿಯ । ವಿಪುಲಕೀರ್ತಿಯ । ಪುಣ್ಯಮೂರ್ತಿಯ ।
ಅಪರಿಮಿತಕೃಪಾಕರನ । ಕಮಲಾ ಮನೋಹರನ ॥
ನಿರುಪಮಗುಣಭೂಷಿತನ । ನಿಖಿಲಜಗದೇಕನಾಥನ ।
ನಿರವಧಿ ಮಹಿಮಾಕರನ । ನಿತ್ಯಾನಂದವಿಹಾರನ ॥ ೧॥

ಕಂ|| ದಿನಲಕ್ಷ್ಮಿಯುದಿಸೆ ತದ್ದ
ರ್ಶನದಿಂ ವ್ಯಾಮೋಹವಡೆದು ತಂತವೊಳಗಿ |
ರ್ಪನುರಾಗಮನರುಪುವವೋ
ಲಿನಶಶಿಗಳ ಬಿಂಬಮಹಹ ! ಸಂಧ್ಯಾರುಣಿತಂ ||

(ವಿದೂಷಕನು ಸಂಭ್ರಾಂತನಾಗಿ ಓಡಿ ಬರುವನು.)

ವಿದೂ—ಭರತಾಚಾರ್ಯ್ಯಾ ! ಏನು ! ಏನು ! ಏನಾಯಿತು? ಹೀಗೇಕೆ ಕೂಗಿ ಕೊಳ್ಳುವೆ ? ಅಪಾಯವೇನೂ ಇಲ್ಲವಷ್ಟೆ ?

ಸೂತ್ರ—(ನಗುತ್ತ) ಆರ್ಯ ಮಾಣವಕಾ ! ಏನಿದು! ನಿಷ್ಕಾರಣವಾಗಿ ನಿನಗೆ ಇಷ್ಟು ಸಂಭ್ರಮವೇಕೆ ? ಏನಾದರೂ ದುಸ್ಸ್ವಪ್ನವನ್ನು ಕಂಡೆಯೇನು ?

ವಿದೂ—ಆಚಾರ್ಯ್ಯಾ ! ಅದೇನೂ ಇಲ್ಲ ! ಈಗಲೇ ನೀನು ಏನೋ ಒಂದು ವಿಧವಾದ ಆರ್ತಧ್ವನಿಯಿಂದ ಕೂಗಿಕೊಂಡಂತೆ ಕೇಳಿಸಿತು. ಆ ಗದ್ದಲವನ್ನು ಕೇಳಿಯೇ ನಾನು ಭಯಪಟ್ಟು ಓಡಿಬಂದೆನು.

ಸೂತ್ರ—ಭಲೆ! ನೀನಲ್ಲವೇ ರಸಿಕಶಿಖಾಮಣಿ ! ನಾನು ಈ ತಾಳಮೃದಂಗಗಳೊಡನೆ ಹಾಡಿದ ಆಲಾಪನಧ್ವನಿಯನ್ನು ನೀನು ಆರ್ತಧ್ವನಿಯೆಂದು ತಿಳಿದೆಯಾ ?

ವಿದೂ—(ತಲೆಯನ್ನು ಚಚ್ಚಿಕೊಳ್ಳುತ್ತ) ಅಯ್ಯೋ! ನಿಜವಾಗಿ ನೀನು ಆಲಾಪನವನ್ನು ಮಾಡಿದೆಯಾ? ಸ್ವಲ್ಪವಾದರೂ ಸಂಗೀತಜ್ಞಾನವಿಲ್ಲದ ಮೊದ್ದುಬುದ್ಧಿಯುಳ್ಳ ನಾನು, ಘಟಘಟನೆ ಹೊಡೆಯುತಿದ್ದ ಈ ಮೃದಂಗಧ್ವನಿಯನ್ನೂ, ನಿನ್ನ ಕೂಗಾಟವನ್ನೂ ಕೇಳಿ, ಯಾರೋ ನಿನ್ನ ಕಪಾಲಕ್ಕೆ ಹೊಡೆದುದರಿಂದ ನೀನು ಅಳುತ್ತಿರುವೆಯೆಂದು ಭ್ರಮಿಸಿ, ಮಲಗಿದ್ದವನು ಹಾಗೆಯೇ ಇಲ್ಲಿಗೆ ಓಡಿಬಂದೆನು.

ಸೂತ್ರ—ಮಿತ್ರನೆ! ಈ ಪರಿಹಾಸವು ಸಾಕು! ಈಗ ನಮ್ಮಮೇಲೆ ದೊಡ್ಡ ಕಾರ್ಯಭಾರವು ಬಿದ್ದಿರುವುದು. ಆ ವಿಚಾರಕ್ಕಾಗಿ ನಿನ್ನನ್ನೇ ನಿರೀಕ್ಷಿಸುತಿದ್ದೆನು. ನೀನಾಗಿ ಬಂದುದು ಅನುಕೂಲವಾಯಿತು.

ವಿದೂ—ಭರತಾಚಾರ್ಯಾ! ನಮಗೆ ಬೇರೆ ಕಾರ್ಯವೇನಿದೆ ? ಬಾಯಿತುಂಬ ಊಟ ! ಕಣ್ಣುತುಂಬ ನಿದ್ರೆ! ಊಟವಾದ ಮೇಲೆ ನಿದ್ರೆ!ನಿದ್ರೆಯಿಂದೆದ್ದಕೂಡಲೆ ಊಟ ! ಇವೆರಡುಹೊರತು ಪ್ರಪಂಚಕ್ಕೆ ಬೇರೆ ಯಾವ ಕಾರ್ಯವೂ ಅಷ್ಟು ಅವಶ್ಯವೆಂದು ನನಗೆ ತೋರಲಿಲ್ಲ ! ರಾತ್ರಿ ಊಟಮಾಡಿ ಸುಖವಾಗಿ ಮಲಗಿದ್ದ ನನಗೆ, ಈಗ ಬೆಳಗ್ಗೆ ನಿನ್ನ ಕೂಗಾಟದಿಂದ ನಿದ್ರಾಭಂಗವಾಗಿ ಎದ್ದು ಬಂದೆನು. ತಿರುಗಿ ಊಟಮಾಡಿ ಮಲಗಬೇಕಾದುದೊಂದೇ ನನ್ನ ಮೇಲೆ ಬಿದ್ದ ದೊಡ್ಡ ಕಾರ್ಯಭಾರವು. ಇದಕ್ಕಾಗಿ ನಾವು ನಾವು ಆಲೋಚಿಸಬೇಕಾದುದೇನಿದೆ ?

ಸೂತ್ರ—ಆರ್ಯನೆ! ಹಾಗಲ್ಲ ! ಇದೋ ! ಜಗನ್ಮಂಗಳಕರವಾದ ಈಗಿನ ನವರಾತ್ರಿಮಹೋತ್ಸವವನ್ನು ಕೊಂಡಾಡುವುದಕ್ಕಾಗಿ ;—

ಕಂ|| ಸರಸ ಕವಿತಾರಸಜ್ಞರ್
ಭರತಾಗಮ ನಿಪುಣರಖಿಲಶಾಸ್ತ್ರಾಭಿಜ್ಞರ್ |
ನೆರೆದಿರ್ಪರ್ಇಲ್ಲಿ ನಿರ್ಮ
ತ್ಸರಹೃದಯರ್ ಸದಯರೆಮ್ಮ ಪುಣ್ಯೋದಯದಿಂ||

ಆದುದರಿಂದ, ಈಗ ನಾವು ನಮ್ಮ ಗಾನನಾಟ್ಯಗಳಿಂದ ಇವರ ಮನಸ್ಸನ್ನು ಸಂತೋಷಪಡಿಸಿ ನಮ್ಮ ವಿದ್ಯೆಯನ್ನು ಸಫಲಗೊಳಿಸುವುದಕ್ಕೆ ತಕ್ಕ ಅವಕಾಶವು ದೊರೆತಿರುವುದು. ಶೃಂಗಾರ ವೀರ ರೌದ್ರಾದಿ ರಸಭರಿತವಾದ ನಾಟಕವನ್ನಾಡಿ, ಇವರ ಮನಸ್ಸನ್ನು ರಂಜಿಸುವವಿಷಯ್ಯದಲ್ಲಿ; ನನಗೆ ನಿನ್ನ ಸಹಾಯವು ಅತ್ಯವಶ್ಯವಾಗಿರುವುದು.

ವಿದೂ—ಭರತಾಚಾರ್ಯಾ! ಬಹಳ ಚೆನ್ನಾಗಿ ಹೇಳಿದೆ ! ಆಬಾಲ್ಯಬ್ರಹ್ಮಚಾರಿಯಾದ ನನಗೆ ಶೃಂಗಾರರಸದ ಗಂಧವೇ ತಿಳಿಯದು! ವೃದ್ಧ ಬ್ರಾಹ್ಮಣನಾದ ನಾನು ವೀರರೌದ್ರರಸಗಳನ್ನಭಿನಯಿಸುವುದಕ್ಕೆ ಹೋದರೆ ಅದೂ ಕೇವಲ ರಸಾಭಾಸವಾಗುವುದಲ್ಲದೆ ಬೇರೆಯಲ್ಲ! ಆದುದರಿಂದ ನನ ಂತೆ ವೈದಿಕಬ್ರಾಹ್ಮಣರ

ಚರಿತ್ರದಿಂದ ಮಿಶ್ರಿತವಾಗಿ,ಹಾಸ್ಯರಸವನ್ನು ಹೆಚ್ಚಾಗಿ ತೋರಿಸ ತಕ್ಕ ನಾಟಕವೇನಾದರೂ ಇದ್ದರೆ,ಅದನ್ನು ಪ್ರದರ್ಶಿಸುವವಿಷ ಯದಲ್ಲಿ ನಾನೂ ನನ್ನಿಂದಾಗಬಹುದಾದ ಸಹಾಯವನ್ನು ಮಾಡಬಹುದು. ಇಲ್ಲದಿದ್ದರೆ—ಉಃ! ನನ್ನ ಮುಂದೆ ಆ ಮಾತ ನ್ನೇ ಎತ್ತಬೇಡ !

ಸೂತ್ರ—(ಸಂತೋಷದಿಂದ ವಿದೂಷಕನ ಬೆನ್ನನ್ನು ತಟ್ಟಿ) ಆರ್ಯ! ಭಲೆ! ಭಲೆ! ನಾನು ಮನಸ್ಸಿನಲ್ಲಿ ಉದ್ದೇಶಿಸಿದುದನ್ನೇ ನೀನೂ ಹೇಳುತ್ತಿರುವೆ? ನಮ್ಮ ನಾಟಕವು ಜನಮನೋರಂಜಕವಾ ಗುವುದೆಂಬುದಕ್ಕೆ ಇದೇ ಶುಭಸೂಚನೆ! "ಶ್ರೀಮತೀಪರಿಣಯ" ವೆಂಬ ಒಂದು ಹೊಸನಾಕವು ಈಗಲೇ ನನ್ನ ಹಸ್ತಗತವಾಗಿರು ವುದು. ನಿನ್ನ ಇಷ್ಟದಂತೆ ಅದು ಹಾಸ್ಯರಸಪ್ರಚುರವಾಗಿ ಮಹರ್ಷಿಗಳ ಚರಿತ್ರದಿಂದ ಮಿಶ್ರಿತವಾಗಿರುವುದು. ಇತರವಿಷ ಯಗಳಲ್ಲಿ ಆ ನಾಟಕದ ಪ್ರಶಂಸೆಯನ್ನು ಕುರಿತು ನಾನು ಬೇ ರೇನೂ ಹೇಳಬೇಕಾದುದಿಲ್ಲ! ಕೇಳು !

ಕಂ|| ಲೋಕೈಕನಾಯಕನೆ ತಾ
ನೀ ಕೃತಿನಾಯಕನಶೇಷ ಜಗದೀಶ್ವರಿ ಲ |
ಕ್ಷ್ಮೀಕಾಂತೆ ನಾಯಿಕೆಯೆನ
ಲ್ಕೀ ಕಾವ್ಯದ ಮಹಿಮೆ ಬಣ್ಣಿಸಲ್ಬಂದಪುದೇ!||

ವಿದೂ—ಭರತಾಚಾರ್ಯಾ! ಚೆನ್ನಾಗಿ ಹೇಳಿದೆ! ಪೂರ್ವ ಕವಿ ರಚಿತಗಳಾದ ಎಷ್ಟೋ ನಾಟಕಗಳಿರುವಾಗ, ಅವೆಲ್ಲವನ್ನೂ ಬಿಟ್ಟು, ಅನಾ ಮಧೇಯನಾದ ಯಾವನೋ ಒಬ್ಬನಿಂದ ರಚಿತವಾದ ಈ ಹೊಸನಾಟಕದಲ್ಲಿ ಈ ಸಭಾಸದರಿಗೆ ಹೇಗೆತಾನೇ ಗೌರವ ಬುದ್ಧಿಯು ಹುಟ್ಟುವುದು ?

ಸೂತ್ರ—ಮಿತ್ರನೆ! ಹಾಗೆಣಿಸಬೇಡ !

ಕಂ|| ಪಳದು ಪೊಸತೆಂಬ ಮಾತ್ರದಿ
ನಿಳೆಯೊಳ್ ಗುಣದೋಷಗಣನೆ ಯಜ್ಞತೆಯೆನಿಕುಂ |
ತಿಳಿವುಳ್ಳರಖಿಲ ವಸ್ತುವ
ನೊಳಪೊಕ್ಕಾರಯ್ವರದರ! ಗುಣದೋಷಗಳಂ ||

ಇದಲ್ಲದೆ ಈ ನಾಟಕವನ್ನು ರಚಿಸಿದ ಕವಿಯನ್ನು ಅನಾಮಧೇಯನೆಂದು ತಿಳಿಯಬೇಡ! ಸಂಸ್ಕೃತಕರ್ಣಾಟಕಗಳೆಂಬ ಉಭಯಭಾಷೆಗಳಲ್ಲಿಯೂ ಈತನ ಕವಿತಾಲಾಲಿತ್ಯವು ಸಕಲಜನಾಭಿಂದ್ಯವೆನಿಸಿದೆ. ಆದುದರಿಂದ ಈ ನಾಟಕವು ಸರ್ವವಿಧದಿಂದಲೂ ಸಭಾಸದರ ಮನಸ್ಸನ್ನು ಸಂತೋಷಗೊಳಿಸುವುದರಲ್ಲಿ ಸಂದೇಹವಿಲ್ಲ. ಮಿತ್ರನೆ! ಇನ್ನು ಈ ನಮ್ಮ ಸಲ್ಲಾಪವು ಸಾಕು! ಹೊತ್ತು ಮೀರುವುದು. ನಾಟಕಾರಂಭಕ್ಕೆ ಮೊದಲು ಋತುವರ್ಣನವು ನಮ್ಮ ನಾಟಕಗಳಲ್ಲಿ ಪೂರ್ವಾಚಾರವು. ಆದುದರಿಂದ ಈಗಲೇ ನೀನು ಹೋಗಿ ನನ್ನ ಗೃಹಿಣಿಯನ್ನು ಇಲ್ಲಿಗೆ ಕಳುಹಿಸು! ಅವಳು ತನ್ನ ಮಧುರಗಾನದಿಂದ ಈ ಸಭಾಸದರ ಮನಸ್ಸನ್ನು ಸಂತೋಷಗೊಳಿಸಲಿ !

ವಿದೂ—(ಕೋಪದಿಂದ ದುರದುರನೆ ನೋಡುತ್ತ) ಭರತಾಚಾರ್ಯಾ ! ಏನಿದು ? ಈ ಮಹಾಸಭೆಯಮುಂದೆ ಹೀಗೆ ನನ್ನ ಗೌರವವನ್ನು ಕಳೆಯುವುದಕ್ಕಾಗಿಯೇ ನನ್ನನ್ನು ಕರೆಸಿದೆಯೇನು ?

ಸೂತ್ರ—ಆರ್ಯನೆ! ಅದೇನು ಹಾಗೆ ಹೇಳುವೆ? ಈಗ ನಿನ್ನ ಗೌರವಕ್ಕೆ ಬಂದ ಹಾನಿಯೇನು ?

ವಿದೂ—(ಮೀಸೆಯನ್ನು ಮುರಿಯುತ್ತ) ಇದೋ ! ಮುರಿಮೀಸೆಯನ್ನು ಹೊತ್ತ ಗಂಡಸು—ನಾನು—ನಿನ್ನ ಮುಂದೆ ಬೊಂಬೆಯಹಾಗೆ ನಿಂತಿರುವಾಗ, ಇಲ್ಲಿ ಹಾಡುವುದಕ್ಕಾಗಿ ನಿನ್ನ ಹೆಂಡತಿಯನ್ನು ಕರೆಯಬೇಕೆ ? ಹೆಂಗಸರಿಗಿಂತಲೂ ನಾನು ಕಡಿಮೆಯೆ ?

ಸೂತ್ರ—(ಮಂದಹಾಸದೊಡನೆ) ಆರ್ಯಾ! ಹಾಗೆಣಿಸಬೇಡ ! ನೀನು ಮೊದಲೇ ನನ್ನೊಡನೆ ಸಂಗೀತಜ್ಞಾನವಿಲ್ಲದವನೆಂದು ಹೇಳಲಿಲ್ಲವೆ ?

ಅದರಿಂದಲೇ ನಾನು ಆಕೆಯನ್ನು ಕರೆಯುವಂತೆ ಹೇಳಿದೆನು. ಈಗಲೂ ನಿನಗೆ ಶಕ್ತಿಯಿದ್ದರೆ ನೀನೇ ಹಾಡಬಹುದು! ಯಾರಾದರೇನು ?

ವಿದೂ—ಹಾಗಿದ್ದರೆ ಯಾವ ಋತುವನ್ನು ವರ್ಣಿಸಿ ಗಾನಮಾಡಲಿ! ಹೇಳು.

ಸೂತ್ರ—ಬೇರೆ ಯಾವುದು! ಈಗಿನ ಶರತ್ಕಾಲವನ್ನೇ ವರ್ಣಿಸಿ ಹಾಡು !

ವಿದೂ—ಹಾಗಿದ್ದರೆ ಕೇಳು! ನನ್ನ ಗಾನದಿಂದ ನವರಸಗಳೂ ಏಕಕಾಲದಲ್ಲಿ ಉಕ್ಕಿ ಎಲ್ಲರ ಕಣ್ಣು ಮೂಗುಗಳಲ್ಲಿಯೂ ಚೆಲ್ಲುವಹಾಗೆ ಮಾಡುವೆನು. ನನ್ನ ಸಾಮರ್ಥ್ಯವನ್ನಾದರೂ ನೋಡು !

ಸಾ ! ! ! ! ! !　　ಪಾ ! ! ! ! ! !　　ಸಾ ! ! ! ! !

ಲಾವಣಿ ಅಥವಾ ರಗಳೆ,

ರಾಗ—ಆದಿತಾಳ.

ಏನೆಂಬೆ| ನೇನೆಂಬೆ|| ಏನೆಂಬೆನು ಶರದಾಗಮದಂದವ||ನೇನೆಂಬೆ||
ಆ | ನಂದ ಜಗ ! ದಾ | ನಂದ ಪರ | ಮಾ !
ನಂದ ಬ್ರ | ಹ್ಮಾ | ನಂದವಿದ | ನೇನೆಂಬೆ | ನೇನೆಂಬೆ ||
ಹಸುರೆಲೆಯಲಿ ಮೂಸ | ರನ್ನದುಂಡೆವೋಲು ||
ಮಿಸುಗುವುವಾಗಸ | ದಲಿ ಬೆಳ್ಮುಗಿಲು || ೧||
ಹಪ್ಪಳ ಸಂಡಿಗೆ ! ಗಳನುಣಲಿಟ್ಟವೋಲ್ |
ಒಪ್ಪುವುವೀ ಶತಿ | ತಾರೆಗಳದರೊಳ್ || ೨||
ಪಟ್ಟೆಯ ನಾಮವ | ತಿದ್ದಿ ಹಣೆಯೊಳು |
ಜುಟ್ಟನು ನಿಗುರಿಸಿ | ಕಟ್ಟಿ ತಲೆಯೊಳು || ೩||
ಭೋಜನಕೋಡುವ | ಹಾರುವರಂದದಿ |
ರಾಜಹಂಸೆಗಳು | ನಲಿವುವು ನಭದಿ || ೪||
ಬಿಳಿದಾವರೆಗಳು | ಬಿಳಿಯ ಮೇಘಗಳು |
ತಿಳಿನೀರ್ಗೊಳದೊಳು | ಬಿಳಿಯ ಹಂಸೆಗಳು || ೫||
ಸುತ್ತಲು ಬಿಳುಪೇ | ರಿದ ನಾಲ್ದೆಸೆಗಳು |
ಎತ್ತ ನೋಡಿದರು | ಬಿಳಿ! ಬಿಳಿ! ಬಿಳಿ! ಬಿಳಿ !|| ದೇನೆಂಬೆ ||

ಸೂತ್ರ—(ವಿದೂಷಕನ ಬೆನ್ನನ್ನು ತಟ್ಟಿ) ಮಿತ್ರನೆ! ಭಲೆ! ಬಹಳ ಚೆನ್ನಾಗಿ ಹಾಡಿದೆ!

(ತೆರೆಯಲ್ಲಿ ನಾಟ್ಯಧ್ವನಿಯಾಗುವುದು.)

ಸೂತ್ರ—(ಕಿವಿಗೊಟ್ಟು ಕೇಳಿ) ಆಹಾ! ಏನಿದು! ಎಲ್ಲಿಯೋ ಗೀತವಾದ್ಯಗಳೊಡಗೂಡಿದ ನಾಟ್ಯಧ್ವನಿಯು ಕೇಳಿಸುತ್ತಿರುವುದು!

(ಪಾರಿಪಾರ್ಶ್ವಕನು ಸಂಭ್ರಮದಿಂದ ಬಂದು)

ಪಾರಿ—ಭಾವಾ! ತ್ವರೆಮಾಡು! ತ್ವರೆಮಾಡು! ದೇವರಾಜನಾದ ಮಹೇಂದ್ರನು, ಈಗಿನ ಶರನ್ಮಹೋತ್ಸವವನ್ನು ಅತಿವೈಭವದಿಂದ ನಡೆಸಬೇಕೆಂದುದ್ದೇಶಿಸಿ,ಆ ಉತ್ಸವಕಾರ್ಯನಿರ್ವಾಹಕ್ಕಾಗಿ ಮನ್ಮಥನನ್ನು ನಿಯಮಿಸಿರುವನು. ಇದರಿಂದ ಕಾಮದೇವನು, ಆ ಉತ್ಸವಕಾಲದಲ್ಲಿ ನಡೆಸಬೇಕಾದ ಗಾನನರ್ತನಾದಿ ಸಕಲಸನ್ನಾಹಗಳನ್ನೂ ಬಹಳ ಶ್ರದ್ಧೆಯಿಂದ ಸಿದ್ಧಗೊಳಿಸಿರುವನು. ಈ ಮಹೋತ್ಸವಾನಂದವನ್ನನುಭವಿಸುವುದಕ್ಕಾಗಿ ಸಮಸ್ತದೇವದಂಪತಿಗಳೂ ಸರ್ವಾಭರಣಭೂಷಿತರಾಗಿ ಬಂದು ನೆರೆಯುತ್ತಿರುವರು ಉತ್ಸವಾವಲೋಕನಕ್ಕಾಗಿ ನಾರದಾದಿಮಹರ್ಷಿಗಳೂ ಬರುತ್ತಿರುವರು. ಬಾ! ನಾವೂ ಹೋಗುವೆವು!

ಸೂತ್ರ—(ಸಂತೋಷದಿಂದ) ಓಹೋ! ನಮ್ಮ ನಾಟಕಾರಂಭವೇ ಇದು! ಭದ್ರಕಾ! ನಾವೂ ಪತ್ನೀಸಮೇತರಾಗಿ ಅಲ್ಲಿಗೆ ಹೊರಡುವೆವು. ನಡೆ! ಈ ವಿಚಾರವನ್ನು ನನ್ನ ಗೃಹಿಣಿಗೆ ತಿಳಿಸಿ, ಅವಳನ್ನೂ ತ್ವರೆಪಡಿಸು.

ಪಾರಿ—ಅಪ್ಪಣೆ! (ಪಾರಿಪಾರ್ಶ್ವಕನು ಹೋಗುವನು.)

ಸೂತ್ರ—ಮಿತ್ರನೆ! ಬಾ! ನಾವೂ ಅಲ್ಲಿಗೆ ಹೋಗುವೆವು!

ವಿದೂ—(ಹಿಮ್ಮೊಗನಾಗಿ ತಿರುಗಿ) ಭರತಾಚಾರ್ಯಾ! ನೀನು ಹೋಗು! ನಾನೊಲ್ಲೆನು! ಊಟಮಾಡಿ ಸುಖವಾಗಿ ಮಲಗುವೆನು.

ಸೂತ್ರ—(ವಿದೂಷಕನ ಕೈಹಿಡಿದು) ಮಿತ್ರನೆ! ಏನಿದು! ಆ ಮಹೋತ್ಸವಾನಂದವನ್ನನುಭವಿಸುವುದರಲ್ಲಿ ಒಬ್ಬೊಬ್ಬರೂ ಅ

ಷ್ಟೊಂದು ಕುತೂಹಲವನ್ನು ತೋರಿಸುತ್ತಿರುವಾಗ ನಿನಗೆ ಮಾತ್ರ ಬೇಸರವೇಕೆ ?

ವಿದೂ—ಭರತಾಚಾರ್ಯಾ ! ತಿಳಿದುತಿಳಿದೂ ನನ್ನನ್ನು ಹೀಗೆ ಪ್ರಶ್ನೆಮಾಡಿ ಹಂಗಿಸುವೆಯಲ್ಲಾ ! ಈಗಲೇ ನಿನ್ನ ಶಿಷ್ಯನು ಬಂದು ದೇವದಂಪತಿಗಳೆಲ್ಲರೂ ಅಲ್ಲಿಗೆ ಬಂದು ಸೇರುವುದಾಗಿ ಹೇಳಿರುವನು. ನೀನೂ ನಿನಗೆ ಮೊದಲೇ ನಿನ್ನ ಪತ್ನಿಯನ್ನು ಅಲ್ಲಿಗೆ ಕರೆದುಕೊಂಡು ಹೋಗುವಂತೆ ಹೇಳಿ ಕಳುಹಿಸಿರುವೆ ! ಹೀಗೆ ನೀವೆಲ್ಲರೂ ಅಲ್ಲಿ ನಿಮ್ಮ ನಿಮ್ಮ ಪತ್ನಿಯರೊಡಗೂಡಿ ಆ ಮಹೋತ್ಸವಾನಂದವನ್ನನುಭವಿಸುವಾಗ, ನಿಮ್ಮನಡುವೆ ನಾನೊಬ್ಬನುಮಾತ್ರ, ಅನಾಥಬ್ರಹ್ಮಚಾರಿಯಾಗಿ ನಿಂತು, ನಿಮ್ಮನಿಮ್ಮ ಸಂಭ್ರಮಗಳನ್ನು ನೋಡುತ್ತ, ಪರದೇಶಿಯಂತೆ ಕಣ್ಣುಕಣ್ಣು ಬಿಡುತ್ತಿರಬೇಕಲ್ಲವೆ? ಈಗಲೂ ನೀನು ಎಲ್ಲಿಯಾದರೂ ಒಂದುಹೆಣ್ಣನ್ನು ತಂದು ನನಗೆ ಮದುವೆಮಾಡಿದಪಕ್ಷದಲ್ಲಿ, ನಾನೂ ಸಂತೋಷದಿಂದ ಸಪತ್ನೀಕನಾಗಿ ಅಲ್ಲಿಗೆ ಬಂದು ನಿಮ್ಮೊಡನೆ ಕುಣಿದಾಡುವೆನು.

ಸೂತ್ರ—(ನಗುತ್ತ) ಓ ವೃದ್ಧಬ್ರಾಹ್ಮಣಾ! ಈ ವಯಸ್ಸಿನಲ್ಲಿಯೂ ನಿನಗೆ ಹೆಣ್ಣಿನಾಸೆಯೆ ? ನಿಮ್ಮಂತಹ ವೃದ್ಧರು ಈ ವಯಸ್ಸಿನಲ್ಲಿ ಮದುವೆಮಾಡಿಕೊಂಡು, ಯಾವ ಸುಖವನ್ನು ಪಡೆಯಬಲ್ಲರು ? ವೃದ್ಧವಿವಾಹವಿಷಯವಾದ ಚಾಟೂಕ್ತಿಯನ್ನು ಕೇಳಿಲ್ಲವೆ ?

ಕಂ|| ಕರದೊಳ್ ಪಿಡಿದೊಲವಿಂದೆ ಪುರ
ಸ್ಕರಿಸುತೆ, ಸುಸ್ನೇಹದಿಂದೆ ಪೆರ್ಚಿಸಿದೊಡಮೇಂ !
ಕರದೀಪಿಕೆಯಂತಿರೆ ವೃ
ದ್ಧರ ನಾರಿ ಪರಪ್ರಯೋಜನಾರ್ಥಮೆ ! ಸಲ್ಗುಂ ||

ಆದುದರಿಂದ ಆಬಾಲ್ಯಬ್ರಹ್ಮಚಾರಿಯಾಗಿದ್ದ ನಿನಗೆ ಈಗಲೂ ಮದುವೆಯ ಚಿಂತೆಯೆ? ಬಾ! ಹೋಗುವೆವು.

(ಎಂದು ಕೈಹಿಡಿದು ಎಳೆದುಕೊಂಡು ಹೋಗುವನು.)

ಇದು ಪ್ರಸ್ತಾವನೆ.

(ಆಸ್ಥಾನ—ಇಂದ್ರಸಭೆ.)

(ಅನೇಕದೇವತೆಗಳ ಮತ್ತು ದೇವರ್ಷಿಗಳ ಸಭಾಮಧ್ಯದಲ್ಲಿ ದೇವೇಂದ್ರನು ಸಿಂಹಾಸನಾಸೀನನಾಗಿರುವನು. ಮನ್ಮಥನು ಪುರೋವರ್ತಿಯಾಗಿ ರಂಭಾದ್ಯಪ್ಸರಸ್ತ್ರೀಯರಿಂದಲೂ, ಗಂಧರ್ವರಿಂದಲೂ ಗಾನನರ್ತನಾದಿಗಳನ್ನು ನಡೆಸುವನು.)

ಮನ್ಮಥಂ— *ದೇವರಾಜಾ! ಈ ಮಹೋತ್ಸವ ವೈಭವಗಳನ್ನೆಲ್ಲಾ ನೋಡುತ್ತಿರುವೆಯಲ್ಲವೆ? ಅದೋ! ಅಲ್ಲಿ ರಂಭಾದ್ಯಪ್ಸರಸ್ತ್ರೀಯರೆಲ್ಲರೂ ಉತ್ಸಾಹದಿಂದ ಗಾನನರ್ತನಗಳನ್ನಾರಂಭಿಸಿರುವರು. ನೋಡು! ಇವೆಲ್ಲಾ ಹಾಗಿರಲಿ! ನಮ್ಮೀ ಶಾರದೋತ್ಸವ ಸಂಸಂಭ್ರಮಗಳನ್ನು ನೋಡಿ ಈ ಶರಚ್ಚಂದ್ರನೂ ಉತ್ಸಾಹದಿಂದ ಕಳೆಯೇರಿದಂತೆ ಈಗ ಒಂದು ಅಪೂರ್ವಕಾಂತಿಯಿಂದ ಪ್ರಕಾಶಿಸುವನು ನೋಡು!

ಕಂ|| ಶರದಿಂದುಬಿಂಬವಿದು ನಿಜ
ಪರಿಶುಭ್ರತೆಯಿಂ ಸುವೃತ್ತದಿಂದಂ ಮುನಿವ |
ವ್ವರನೇಡಿಸಿ ತಚ್ಚಿತ್ತದ
ವಿರಕ್ತಿಗಿದೊ! ಸೊನ್ನೆ ಸುತ್ತಿದಂತೆವೊಲೆಸೆಗುಂ ||

ರಾಗ—ಮೋಹನ.

* ಶಾರದೋತ್ಸವ ಸಂಭ್ರಮಂಗಳ ನೀಂ| ನೋಡು ನೋಡು ||
ಮೇರೆಮೀರಿದ ಮೋಹರಸದ | ಧಾರೆಯು ಸುರಿವಂತೆ ತೋರ್ಪ್ಪ ||
ಝುಗಝುಗಿಸುವ ಮಣಿತೋರಣ | ಮಘಮಘಿಪ ಸುಗಂಧಸೇಚನ |
ಸೊಗಸುಮೀರುವ ಗಾನನರ್ತನ |ಅಗರುಧೂಪ ವಿತಾನದಲಿ ||

ಮಾನನಸದಭಿಮಾನದಿಂದ | ಮೇರೆ ಮೀರುವ ಮಹಾನಿಜನವ |
ಮಾನಗೆಡಿಸಿ | ಮೋಹಗೊಳಿಪ | ಮಾನಿನಿಯರ | ವಿಲಾಸದಿ || ೧|

ಪರ್ವತಂ—(ನಾರದನಿಗೆ ಸನ್ನೆಮಾಡಿ) ಮಿತ್ರನೆ! ಕೇಳಿದೆಯಾ! ಈ ಕಂದರ್ಪನ ದರ್ಪದ ಮಾತುಗಳನ್ನು ?

ನಾರದಂ—ಮಿತ್ರನೆ! ಹೋಗಲಿ! ಸುಮ್ಮನಿರು! ಇದು ನಮ್ಮ ಕೋಪಕ್ಕೆ ಸಮಯಲ್ಲ!

ಇಂದ್ರಂ—(ಗಾನ ನರ್ತನಗಳನ್ನು ನೋಡಿ ಸಂತೋಷಪರವಶನಾಗಿ,ಮುಂದೆ!ಬಂದು ಮನ್ಮಥನ ಕೈಯನ್ನು ಹಿಡಿದು).

* ಕಂ|| ಸ್ಮರವೀರ ನಿನ್ನ ಕಾರ್ಯಕೆ
ಪರಿತೋಷವನಾಂತೆನದರಿನೀಗಳೆ ನಿನ್ನಂ ||
ಸುರಸಭೆಯೊಳ್ ಭೂಷಿಪೆನೀ
ಸುರುಚಿರ ಮಂದಾರ ಕುಸುಮಮಾಲಿಕೆಯಿಂದಂ ||

ಈ ದೇವಸಭಾಮಧ್ಯದಲ್ಲಿ ಇದು ನಿನಗೆ ಅಗ್ರಪೂಜೆ!
(ಮನ್ಮಥನ ಕೊರಲಿಗೆ ಮಾಲೆಯನ್ನು ಹಾಕುವನು.)

ನಾರದಂ—(ಕೋಪದಿಂದ ಮೇಲೆದ್ದು ಇಂದ್ರನನ್ನು ದುರುದುರನೆ ನೋಡುತ್ತ) ದೇವೇಂದ್ರಾ! ಏನಿದು! ನಿನ್ನ ಪದವಿಯೇನು? ನಿನ್ನ ಗೌರವವೇನು? ನೀನು ಮಾಡತಕ್ಕ ಕಾರ್ಯವೇನು? ಈ ಮಹಾಸಭೆಯಲ್ಲಿ ಈ ಮನ್ಮಥನಿಗೆ ಅಗ್ರಪೂಜೆಯೆ? ಕೇವಲಕಾಮಮದದಿಂದ ಉನ್ಮತ್ತರಾದ ಪ್ರಾಕೃತಜನರಂತೆ ನೀನು ನಿನ್ನ ಗೌರವವನ್ನೂ, ಪದವಿಯನ್ನೂ ಯೋಚಿಸದೆ, ಕಾಮುಕರನ್ನು ವಂಚಿಸತಕ್ಕ ಈ ಮನ್ಮಥನ ಆಟಕ್ಕೆ ಮರುಳಾಗಿ ಅವನನ್ನು ಕರೆತಂ

---

* ರಾಗ—ಮಧ್ಯಮಾವತಿ—ರೂಪಕತಾಳ.
(ಅಲಕಲಲ್ಲಲಾಡಗ ಗನಿ ಎಂಬಂತೆ)

ಪರಮಹರ್ಷವಾಂತೆನು ಸ್ಮರ । ವೀರಾಗ್ರಣಿ ನಿನ್ನ ಕಾರ್ಯಕೆ ।
ಸರಸಗುಣಾ ಕರ ನಿನ್ನ । ಮಹಿಮೆಗೆ ಸರಿಗಾಣೆ ಜಗದಿ ||
ತ್ರಿಭುವನ ಜಯ ಜಾತಕೀರ್ತಿ । ವಿಭವಕೆ ಕಳೆಯೇರಿಪಂದದಿ ।
ಸಭೆಯೊಳು ಭೂಷಿಪೆ ನಿನ್ನ । ಶುಭತರಮಂದಾರಸರದಿ ||

ದು ನಿನ್ನ ಅರ್ಧಾಸನದಲ್ಲಿ ಕುಳ್ಳಿರಿಸಿಕೊಳ್ಳುವೆಯಾ? ಮಹೇಂದ್ರಾ! ನೀನು ಈಗ ಕುಳಿತಿರತಕ್ಕ ಸ್ಥಾನವೆಂತದೆಂಬುದನ್ನು ಬಲ್ಲೆಯಾ? ಭೂಲೋಕದಲ್ಲಿ ಪರಮಧರ್ಮಾತ್ಮರೆನಿಸಿಕೊಂಡ ಸಗರಾದಿಚಕ್ರವರ್ತಿಗಳು, ಎಷ್ಟೋ ಕಷ್ಟಪಟ್ಟೂ ಈ ಪದವಿಯನ್ನು ಪಡೆಯಲಾರದೆ ವಿಫಲಪ್ರಯತ್ನರಾಗಿರುವರು. ಒಂದಲ! ಎರಡಲ್ಲ!! ಭೂರಿದಕ್ಷಿಣೆಗಳುಳ್ಳ ನೂರಶ್ವಮೇಧಯಾಗಗಳನ್ನು ಸಂಪೂರ್ಣವಾಗಿ ಮುಗಿಸಿದವರಿಗಲ್ಲದೆ ಇದು ಲಭಿಸಲಾರದು! ನಿನ್ನ ಅನೇಕಜನ್ಮಗಳ ಸುಕೃತವಿಶೇಷದಿಂದ ನಿನಗೆ ಈ ಪದವಿಯು ಲಭಿಸಿರುವುದೆಂದು ತಿಳಿ! ಹೀಗಿರುವಾಗಲೂ ನೀನು ನಿನ್ನ ಸ್ಥಾನಗೌರವವನ್ನು ತಿಳಿಯದೆ, ಈ ಮನ್ಮಥನಾಟಕ್ಕೆ ಮರುಳಾಗಿ, ಇವನಿಗೆ ಸಲ್ಲದ ಗೌರವವನ್ನು ತಂದಿಡುವೆಯಲ್ಲಾ! ಅದೂ ಹೋಗಲಿ! ಇವನನ್ನು ನೀನು ಮಿತ್ರನೆಂದು ಕರೆದು ಆಲಿಂಗಿಸಿದೆಯಲ್ಲವೆ? ಹಿಂದೆ ಈ ಮನ್ಮಥನ ದುಷ್ಪ್ರೇರಣೆಯಿಂದ ನಿನಗೂ, ನಿನ್ನಂತೆ ಇಂದ್ರಪದವಿಯನ್ನೇರಿದ ನಹುಷನಿಗೂ ಸಂಭವಿಸಿದ ದುರವಸ್ಥೆಯನ್ನು ಆಗಲೇ ಮರೆತುಬಿಟ್ಟೆಯಾ?

ವೃ॥ನೆನೆ! ನೀಂ ಗೌತಮಧರ್ಮಪತ್ನಿಯೊಳಹಲ್ಯಾದೇವಿಯೊಳ್ ಮೋಹದಿಂ।
ಮುನಿಶಾಪಕ್ಕೆಡೆಯಾದುದಂ ನಹುಷನುಂ ನಿನ್ನಂತೆಪೌಲೋಮಿಯಂ॥
ಮನದೊಳ್ ಮೋಹಿಸಿ ಸರ್ಪರೂಪದಿನಧಃಪಾತಕ್ಕೆ ಪಕ್ಕಾದುದಂ।
ನೆನೆ! ಸಂಕ್ರಂದನ! ನೀನನರ್ಥವಿನಿತಕ್ಕಂ ಮೂಲನೀಮನ್ಮಥಂ॥

ಹೀಗೆ ನಿನಗೆ ಅಂತಶ್ಶತ್ರುವಾಗಿ, ಮಹಾನರ್ಥವನ್ನು ತಂದಿಟ್ಟ ಈ ಮನ್ಮಥನನ್ನು ಪರಮಾಪ್ತನೆಂದು ತಿಳಿದಿರುವೆಯಾ? (ದೇವೇಂದ್ರಾ! ಹೀಗೆ ಈ ಕಾಮನನ್ನೇ ಪರದೈವವೆಂದು ಭಾವಿಸುವುದು ಕಾಮುಕರ ಕೆಲಸವೇಹೊರತು, ನಿನ್ನಂತವನಿಗೆ ಯೋಗ್ಯವಲ್ಲ.

ಇಂದ್ರಂ—(ವಿನಯದಿಂದ) ಮುನೀಂದ್ರಾ! ಇದು ನನ್ನ ಮನಸ್ಸಂತೋಷಕ್ಕಾಗಿ ನಡೆಸಿದ ಉತ್ಸಾಹಕಾರ್ಯವೇ ಹೊರತು, ನಿಮ್ಮಂತಹ ಮಹಾತ್ಮರಲ್ಲಿ ತಿರಸ್ಕಾರಬುದ್ಧಿಯಿಂದ ನಾನು ಇವನನ್ನು ಗೌರವಿಸಿದವನಲ್ಲ! ಈಗ ನಡೆಸಿದ ಶಾರದೋತ್ಸವವು ಕೇವಲ ಭೋಗಪ್ರಧಾನವಾದುದರಿಂದ, ಈ ಕಾಮದೇವನು ಇದಕ್ಕೆ ತಕ್ಕ ಸಾಧನಸಾಮಗ್ರಿಗಳನ್ನೊದಗಿಸಿ ಕಾಲೋಚಿತವಾಗಿ ಮಾಡಿದ ಸಹಾಯಕ್ಕಾಗಿ ನಾನು ಸಂತೋಷಪಟ್ಟು, ಆ ನನ್ನ ಸಂತೋಷಕ್ಕೆ ಸೂಚಕವಾಗಿಯೂ, ಈ ಮನ್ಮಥನ ಶ್ರಮಕ್ಕೆ ಪ್ರತಿಫಲವಾಗಿಯೂ ನಾನು ಇವನನ್ನು ಸನ್ಮಾನಿಸಿದೆನು. ಈ ಸ್ವಲ್ಪ ವಿಚಾರಕ್ಕಾಗಿ ತಾವು ನನ್ನಲ್ಲಿ ಕೋಪಿಸದೆ ಮನ್ನಿಸಬೇಕು.

ನಾರದಂ—ಮಹೇಂದ್ರಾ! ಪಾತ್ರಾಪಾತ್ರಗಳನ್ನರಿತು ಅವರವರ ಸ್ಥಿತಿಗೆ ತಕ್ಕಂತೆ ಗೌರವಿಸಬೇಕೇಹೊರತು, ಅಪಾತ್ರದಲ್ಲಿ ಅಧಿಕಗೌರವವನ್ನು ತೋರಿಸುವುದು ಅನರ್ಥಕಾರಣವೆಂಬುದನ್ನು ನೀನು ಯೋಚಿಸಬೇಡವೆ? ಈ ಕಾಮನಿಗೆ ಸ್ವಲ್ಪಮಾತ್ರ ಅವಕಾಶವನ್ನು ತೋರಿಸಿದರೆ, ಇವನು ಅವರ ತಲೆಯನ್ನು ಮೆಟ್ಟಿ ನಿಲ್ಲುವನು. ಇದಕ್ಕಾಗಿಯೇ ತಪಸ್ಸಿದ್ಧರಾದ ಯೋಗಿಗಳು ಇವನನ್ನು ಮನಸ್ಸಿನಿಂದಲೂ ಸ್ಮರಿಸಲಾರರು! ನಿನ್ನ ಸ್ಥಿತಿಯೇನು! ಅವನ ಸ್ಥಿತಿಯೇನು? ಯಜ್ಞಾರಾಧ್ಯನೆನಿಸಿಕೊಂಡ ನೀನು ನಿನ್ನ ಗೌರವವನ್ನು ತಿಳಿಯದೆ ಹೀಗೆ :—

ಕಂ|| ಸುರಪತಿ! ಕೇಳ್ ಕಪಿಯೊಂದಂ |
ಕರೆತಂದುತ್ತುಂಗಭದ್ರಪೀಠಾಗ್ರದೆ ಕು |
ಳ್ಳಿರಿಸಿದವೊಲಾಯ್ತು! ದಿಟಮೀ |
ಸ್ಮರನಂ ನಿಲಿಸಿದುದು ನೀಂ ನಿಜಾರ್ಧಾಸನದೊಳ್ ||

ಕಾಡುಕಪಿಯನ್ನು ತಂದು ಭದ್ರಾಸನದಲ್ಲಿ ಕುಳ್ಳಿರಿಸಿದಂತೆ, ಇವನನ್ನು ನಿನ್ನ ಅರ್ಧಾಸನದಲ್ಲಿ ಕುಳ್ಳಿರಿಸುವುದೆಂದರೇನು ?

ನಾರದಂ —ದೇವೇಂದ್ರಾ! ಏನಿದು? ಕಾಡುಕಪಿಯನ್ನು ಭದ್ರಾಸನದಲ್ಲಿ ಕುಳ್ಳಿರಿಸಿದಂತೆ, ಈ ಮನ್ಮಥನನ್ನು ನಿನ್ನ ಅರ್ಧಾಸನದಲ್ಲಿ ಕುಳ್ಳಿರಿಸುವೆಯಾ ?

ಪರ್ವತಂ :—ಕರಡಿಯ ಕಂಠಕ್ಕೆ ಕಾಂಚನಮಾಲಿಕೆಯನ್ನಿಟ್ಟಂತೆ ಈ ಕಾಮನ ಕಂಠಕ್ಕೆ ಮಂದಾರಮಾಲಿಕೆಯೆ !

ಪರ್ವತಂ|| (ಕೈತಟ್ಟಿ ಅಟ್ಟಹಾಸದಿಂದ ನಕ್ಕು) ಮಿತ್ರನೆ ! ಶಹಬಾಸ್ ! ಚೆನ್ನಾಗಿ ಹೇಳಿದೆ !

ವೃ|| ಹರಿಚರಣಾರವಿಂದ ಯುಗಳಾರ್ಚನೆಗರ್ಹತೆಯಾಂತು ಶೋಭಿಪಾ |
ಸುರುಚಿರಪಾರಿಜಾತಸುಮಮಾಲೆಯನೀ ಕಲುಷಾತ್ಮಕಾಮನಾ |
ಕೊರಲೊಳಮರ್ಚ್ಚೆ ಮನ್ನಿಸಿದೆ ! ನೀನವಿವೇಕದನಿಂತಿದಿಲ್ಲಿ ಕಾ
ಳ್ಕರಡಿಯಕಂಠದೊಳ್ ಕನಕಮಾಲೆಯನಿಕ್ಕಿದ ರೀತಿಯಾಯ್ತಲೇ ||

ಕರಡಿಯ ಕಂಠಕ್ಕೆ ಕಾಂಚನಮಾಲಿಕೆಯನ್ನಿಟ್ಟಂತೆ, ಸಾಕ್ಷಾತ್ಪರಮಪುರುಷನ ಪಾದಾರವಿಂದಗಳಲ್ಲಿ ಅರ್ಪಿಸುವುದಕ್ಕೆ ಯೋಗ್ಯವಾದ ಮಂದಾರಮಾಲಿಕೆಯನ್ನು ತಂದು ಇವನ ಕಂಠದಲ್ಲಿಕ್ಕುವೆಯಾ?

ಮನ್ಮಥಂ—(ನಾರದನನ್ನು ನೋಡಿ ಹಾಸ್ಯಪೂರ್ವಕವಾಗಿ) ಓ ನಾರದಮುನೀಂದ್ರಾ ! ನಿಷ್ಕಾರಣವಾದ ಈ ನಿನ್ನ ಆಗ್ರಹವು, ನಿನ್ನ ಅಸೂಯಾಸ್ವಭಾವವನ್ನೂ, ಕಲಹಪ್ರಿಯತ್ವವನ್ನೂ ಹೊರಪಡಿಸುವುದೇ ಹೊರತು ಬೇರೆಯಲ್ಲ! ದೇವೇಂದ್ರನು ನನ್ನನ್ನು ಗೌರವಿಸಿದಮಾತ್ರಕ್ಕೆ ನಿಮ್ಮ ಗೌರವಕ್ಕೆ ಬಂದ ಹಾನಿಯೇನು? ಯುಕ್ತಾಯುಕ್ತ ವಿವೇಚನಪರನಾದ ಈತನು ಕಾಲೋಚಿತವಾಗಿಯೇ ನಡೆಸಿರುವನು. ಇಂತಹ ಸಭೆಗಳಲ್ಲಿ ನಡೆಯಬೇಕಾದ ಅಗ್ರಪೂಜೆಗೆ ನಾನೇ ಬಾಧ್ಯನು ! ಇಲ್ಲಿ ನಡೆಯುತ್ತಿರುವ ಶಾರದೋತ್ಸವವು ಕೇವಲ ಭೋಗಪ್ರಧಾನವಾದುದು! ರೂಪವತಿಯರಾದ ಈ ಅಪ್ಸರಸ್ತ್ರೀಯರು ! ಆನಂದಕರಗಳಾದ ಇವರ ಗಾನ ನರ್ತನಗಳು ! ಈ ಸುಗಂಧ ಸಾಮಗ್ರಿಗಳು ! ಈ ಹಂಸತೂಲಿಕಾತಲ್ಪಗಳು! ಹೀಗೆಯೇ ಇಂದ್ರಿಯತೃಪ್ತಿಗಾಗಿ ಏರ್ಪಟ್ಟಿರುವ ಭೋಗಸಾಮಗ್ರಿಗಳೆಲ್ಲವೂ ನನ್ನ ಸೇನಾಪರಿಕರಗಳು? ಇವಕ್ಕೆಲ್ಲಾ ನಾನೇ ನಿರ್ವಾಹಕನು. ಇಲ್ಲಿ ನಡೆಯಬೇಕಾದ ಸನ್ಮಾನವೂ ನನಗಲ್ಲದೆ ನಿನ್ನಂತಹ ಯೋಗಿಗಳಿಗಲ್ಲ ! ನನ್ನ ಗೌರವಸ್ಥಾನವೇ ಬೇರೆ ! ನಿಮ್ಮ ಗೌರವಸ್ಥಾನವೇ ಬೇರೆ !

ವೈದಿಕಗೋಷ್ಠಿಗಳಲ್ಲಿ, ಯಜ್ಞಶಾಲೆಗಳಲ್ಲಿ, ಋಷ್ಯಾಶ್ರಮಗ
ಳಲ್ಲಿ, ದೇವಾಲಯಗಳಲ್ಲಿ ನಿಮಗೆ ನಡೆಯಬೇಕಾದ ಗೌರವ
ಗಳೆಲ್ಲವೂ ನಡೆಯಲಿ! ಸರ್ವೇಶ್ವರನಾದ ಆ ಪರಮಪುರುಷನ
ಆಜ್ಞಾನುಸಾರವಾಗಿ ಒಬ್ಬೊಬ್ಬರು ಒಂದೊಂದು ಕಾರ್ಯಕ್ಕೆ
ನಿರ್ವಾಹಕರಾಗಿರುವರು ಕೇಳು.

ವೃ|| ಧರೆಯಂ ಪುಟ್ಟಿಸಿದಾತನೊರ್ವ್ವನದನಾಂತಿರ್ಪ್ಪಾತನೊರ್ವ್ವಂಕರಂ |
ಪೊರೆವಾತಂ ಪೆರನೊರ್ವ್ವನಂತದನೆತಾಂ ಕೊಲ್ವಾತನೊರ್ವ್ವಂ ಪರಾ
ವರ ಸರ್ವ್ವೇಶ್ವರನಾಜ್ಞೆಯಿಂದವರವರ್ ಸ್ವಸ್ವಾಧಿಕಾರಂಗಳಾಂ|
ತಿರೆ ನೀಂ ಭಕ್ತಿವಿರಕ್ತಿನಿರ್ಣಯಕೆ ನಾಂ ಕಾಮಕ್ಕೆ ನಿರ್ವಾಹಕಂ ||

ನಾರದಂ—(ಸೋಪಹಾಸವಾಗಿ) ಮನ್ಮಥಾ! ಸಾಕು ಸುಮ್ಮನಿರು! ನಿನ್ನ ನಿರ್ವಾಹಶಕ್ತಿಯನ್ನು ನಾನು ಬಲ್ಲೆನು! ನಿನ್ನನ್ನು ನಂಬಿದವರಿಗೆ ನೀನೇ ಅಂತಶ್ಶತ್ರುವಾಗಿ ಅವರಿಗೆ ಅನರ್ಥವನ್ನು ತಂದಿಡುವೆಯೇ ಹೊರತು, ನಿನ್ನನು ನಂಬಿ ಶ್ರೇಯಸ್ಸನ್ನು ಪಡೆದವರೊಬ್ಬರೂ ಇಲ್ಲ!

ಮನ್ಮಥಂ—ನಾರದಮುನೀಂದ್ರಾ! ಈ ದೇವತೆಗಳು ಕೃತಜ್ಞತೆಯುಳ್ಳವರಾಗಿದ್ದರೆ ಎಂದಿಗೂ ನನ್ನ ವಿಷಯದಲ್ಲಿ ಹಾಗೆಣಿಸಲಾರರು. ಹಿಂದೆ ಅಮೃತಮಥನಕಾಲದಲ್ಲಿ,ಮೋಹಿನೀರೂಪವನ್ನು ನೋಡಿ ದಾನವರು ಕಾಮಮೋಹಿತರಾಗದಿದ್ದಪಕ್ಷದಲ್ಲಿ, ಈ ದೇವತೆಗಳಿಗೆ ಅಮೃತವೆಲ್ಲಿ ಲಭಿಸುತಿತ್ತು? ಭಸ್ಮಾಸುರನೆಂಬ ಕ್ರೂರದಾನವನು, ಭಗವಂತನ ಮೋಹಿನೀರೂಪಕ್ಕೆ ಮರುಳಾಗದಿದ್ದಪಕ್ಷದಲ್ಲಿ, ರುದ್ರನು ಇದುವರೆಗೆ ಕ್ಷೇಮದಿಂದಿರುತಿದ್ದನೆ? ಇವೆಲ್ಲಕ್ಕೂ ನಾನಲ್ಲವೇ ಪ್ರೇರಕನು! ಹೀಗೆ ಅನೇಕ ಸಂದರ್ಭಗಳಲ್ಲಿ ನಾನು ಈ ದೇವತೆಗಳನ್ನು ಅಪಾಯದಿಂದ ತಪ್ಪಿಸಿರುವಾಗ ನನ್ನನ್ನು ಇಂದ್ರನಿಗೆ ಅಂತಶ್ಶತ್ರುವೆಂದು ಹೇಳುವೆಯಲ್ಲಾ!

ನಾರದಂ—ಮನ್ಮಥಾ! ಸಾಕು! ನಿಲಿಸು! ದುರ್ಬಲಹೃದಯರನ್ನು ಸ್ವಾಧೀನಪಡಿಸಿಕೊಳ್ಳುವುದರಲ್ಲಿ ನಿನ್ನ ಸಾಮರ್ಥ್ಯವೇಹೊರತು

ಜಿತೇಂದ್ರಿಯರಮುಂದೆ ನೀನು ತಲೆಯೆತ್ತುವುದೆಂದರೇನು ?

ಕಂ|| ಕಲುಷಾತ್ಮರ ಹೃದಯಮನೇ
ಕಲಗಿಪೆ! ನೀಂ ಸತ್ತ್ವಪುಲಿಯನಿರಿವಂತಿರೆ ಕೇ
ಳಿಲೆ ಮದನ ! ಯೋಗಬಲನಿ
ಶ್ಚಲಹೃದಯರ ಮುಂದೆ ನಿನ್ನ ಬಲಮೇಗೆಯ್ಗುಂ ||

ಮನ್ಮಥಂ—ದೇವರ್ಷೀ!ಯೋಗಬಲದಲ್ಲಿಯೂ,ಇಂದ್ರಿಯಜಯದಲ್ಲಿಯೂ, ತಪಸ್ಸಿನಲ್ಲಿಯೂ ವಿಶ್ವಾಮಿತ್ರಮಹರ್ಷಿಯು ನಿಮ್ಮೆಲ್ಲರನ್ನೂ ಮೀರಿಸಿದವನಲ್ಲವೆ? ಅವನೂಕೂಡ ಮೇನಕೆಯಲ್ಲಿ ಮೋಹಪರ ಶನಾಗುವಂತೆ ಮಾಡಿದವನು ನಾನಲ್ಲವೆ ? ಮಹಾತಪಸ್ವಿಯೆನಿಸಿ ಕೊಂಡ ಆ ವಿಶ್ವಾಮಿತ್ರನ ತಪೋಜ್ವಾಲೆಯಿಂದ ಲೋಕವೆಲ್ಲ ವೂ ದಗ್ಧವಾಗುತಿದ್ದಾಗ,ಈ ಇಂದ್ರನ ಪ್ರೇರಣೆಯಿಂದ ನಾನು ಹೋಗಿ ಅವನ ಮನಸ್ಸನ್ನು ಕದಲಿಸಿದುದರಿಂದಲ್ಲವೇ ಇದು ವರೆಗೆ ಇಂದ್ರಾದಿಲೋಕಗಳೆಲ್ಲವೂ ಕ್ಷೇಮದಿಂದಿರುವಂತಾ ಯಿತು! ಆ ವಿಶ್ವಾಮಿತ್ರನ ಸಂಗತಿಯೂ ಹಾಗಿರಲಿ! ಕೇಳು.

ಕಂ|| ಪರಮತಪೋನಿಧಿಯೆನಿಸಿದ
ಹರಂಗೆ ನಾಂ ಗಿರಿಜೆಯಲ್ಲಿ ಮೋಹಾಂಕುರಮಂ
ನೆರಪದಿರಲ್ ತಾರಕಸಂ
ಹರಣಕ್ಕವಕಾಶಮಿನ್ನದೆತ್ತಣಿನಕ್ಕುಂ ? ||

ಆ ಪರಮಶಿವನು ಪಾರ್ವತಿಯನ್ನು ಮೋಹಿಸಿ, ಅವಳಲ್ಲಿ ತನ್ನ ತೇಜಸ್ಸಿನಿಂದ ಷಣ್ಮುಖನನ್ನು ಪಡೆದುದರಿಂದಲ್ಲವೇ, ಲೋಕ ಕಂಟಕನಾದ ಆ ತಾರಕಾಸುರನ ಬಾಧೆಯು ತಪ್ಪಿತು! ತ್ರೈ ಲೋಕ್ಯದಲ್ಲಿ ಆ ಪರಮಶಿವನಿಗಿಂತಲೂ ಜಿತೇಂದ್ರಿಯರು ಬೇ ರೊಬ್ಬರುಂಟೆ ? ಆ ರುದ್ರನೇ ನನ್ನ ಕಾಮಪಾಶಕ್ಕೆ ಸಿಕ್ಕಿಬಿದ್ದಿ ರುವಾಗ ಇತರರ ಮಾತೇನು! ನಾರದಮುನೀಂದ್ರಾ! ಹೆಚ್ಚು ಮಾತಿನಿಂದೇನು ? ಕಾಲವು ಅನುಕೂಲಿಸಿಬಂದರೆ ನೀನೂ ಎಂ

ದಾದರೂ ಒಮ್ಮೆ ನನ್ನ ಕಾಮಪಾಶದಲ್ಲಿ ಸಿಕ್ಕಿ ಬೀಳಬೇಕಾದ ಸಂಭವವು ಬಂದರೂ ಬರಬಹುದು. ಹರಿಹರಬ್ರಹ್ಮಾದಿಗಳೂ ಅದನ್ನು ತಪ್ಪಿಸಿಕೊಳ್ಳಲಾರರೆಂದು ತಿಳಿ!

ನಾರದಂ—(ಅತ್ಯಂತಕೋಪಾವೇಶದಿಂದ) ಮನ್ಮಥಾ! ಏನು ಹೇಳಿದೆ! ನನ್ನನ್ನೂ ನೀನು ಕಾಮಪಾಶದಲ್ಲಿ ಕಟ್ಟಿಡುವೆಯಾ?

* ಕಂ॥ ಪರಮೇಶನ ಫಾಲಾಂಬಕ।
ದುರಿಯೊಳ್ ನೀಂ ಶಲಭದಂತೆ ಬೆಂದಳಿದುದನೇಂ।
ಮರೆತೆಯೊ? ಪೇಳಲೆ ಮದನಾ!।
ಬರಿದೇತಕೆ ಬೀಗಿ ಬೆರವೆ? ಗರ್ವಾಂಧತೆಯಿಂ॥

ಮನ್ಮಥಾ; ಇನ್ನು ನಿನ್ನೊಡನೆ ಉತ್ತರಪ್ರತ್ಯುತ್ತರಗಳಿಂದೇನು? (ಇಂದ್ರನಕಡೆಗೆ ತಿರುಗಿ) ದೇವೇಂದ್ರಾ! ನೀನು ಬಾಯೆತ್ತದೆ ಸುಮ್ಮನಿರುವುದನ್ನು ನೋಡಿದರೆ, ಜಗದ್ವಂಚಕನಾದ ಈತನ ಆಟಕ್ಕೆ ಮರುಳಾಗಿ, ನೀನೂ ಅವನ ಅಭಿಪ್ರಾಯವನ್ನೇ ಅನುಮೋದಿಸುವಂತಿದೆ? ಆಗಲಿ! ಅವನ ಸಹವಾಸದಿಂದುಂಟಾಗ ಬಹುದಾದ ಫಲವನ್ನನುಭವಿಸು; ನಾವು ಹೋಗಿ ಬರುವೆವು. ಇನ್ನುಮೇಲೆ ಇಲ್ಲಿ ನಿಲ್ಲುವುದು ನಮಗೆ ಯೋಗ್ಯವಲ್ಲ; (ಹೊರಡುವನು.)

ರಾಗ - ಹಿಂದುಸ್ಥಾನಿಕಾಪಿ - ರೂಪಕತಾಳ.

* ಏನನಾಡಿದೆ। ಛೀ। ಛೀ। ಮೀನಕೇತನ॥ ಪ॥
ಮಾನವಿಲ್ಲದೆನ್ನಮುಂದೆ। ಮಾನಸಕ್ಕೆ ಬಂದ ತೆರದೊ! ಹೀನ ನಾಡಿದೇ॥
ಪರಮಶಿವನ ಫಾಲನೇತ್ರ। ದುರಿಯೊಳು ನೀಂ ಶಲಭದಂತೆ।
ಉರಿದುಬೆಂದುದ ಮರೆತೆಯೇನು। ಮೆರೆಯದಿರು ವೃಥಾಭಿಮಾನದಿ॥೧॥
ಪದುಮನಾಭನ ಪಾದವನ್ನು। ಹೃದಯಲ್ಲಿ ನೆಲಸಿರಲು।
ಮದನ! ನಿನ್ನ ಬರಿಯ ಬಾಯ। ಬೆದರಿಕೆಗಂಜುವೆನೆ।ನಾನು।ಏನ॥

ಇಂದ್ರಂ—(ಭಯದಿಂದೆದ್ದುಬಂದು ನಾರದನಮುಂದೆ ಬದ್ಧಾಂಜಲಿಯಾಗಿ) ಮುನೀಂದ್ರಾ! ಈ ಉತ್ಸವಕಾಲದಲ್ಲಿ ಉತ್ಸಾಹದಿಂದ ನಡೆಸಿದ ಈ ಕಾರ್ಯವು, ತಮ್ಮ ಮನಸ್ಸಿಗೆ ಇಷ್ಟು ಅಸಮಾಧಾನವನ್ನುಂಟುಮಾಡುವುದೆಂದು ನನಗೆ ತೋರಲಿಲ್ಲ. ಮನ್ನಿಸಬೇಕು.

ನಾರದಂ—ಐಶ್ವರ್ಯಮದಮತ್ತರಾದ ನಿಮ್ಮಂತವರಿಗೆ ಹೇಗೆ ತಾನೇ ಯುಕ್ತಾಯುಕ್ತವಿಚಾರವು ತೋರುವುದು ?

ಕಂ|| ಧನಮುಂ ಪ್ರಭುತ್ವಮುಂ ಯೌ
ವನಮೆಂಬೀ ಘೋರಸನ್ನಿಪಾತತ್ರಯದೊಳ್!
ಮನುಜಂ ಸರ್ವೇಂದ್ರಿಯಬಂ
ಧನದಿಂ ಪ್ರಜ್ಞಾವಿಹೀನನಪ್ಪುದೆ ಸಹಜಂ! ||೧೪||

ನೀನು ಯುಕ್ತಾಯುಕ್ತವಿವೇಚನಪರನಾಗಿದ್ದಪಕ್ಷದಲ್ಲಿ, ಹಿಂದೆ ದೂರ್ವಾಸಮಹರ್ಷಿಯನು, ಅನಾದರಿಸಿ ರಾಜ್ಯಭ್ರಷ್ಟನಾಗುತಿದ್ದೆಯಾ? ಆ ಅನರ್ಥಕ್ಕೂ ನಿನ್ನ ಐಶ್ವರ್ಯಮದವೇ ಕಾರಣವೆಂದು ತಿಳಿ! ದೇವೇಂದ್ರಾ! ಹೋದುದು ಹೋಗಲಿ; ಇನ್ನುಮೇಲಾದರೂ ವಿವೇಕಿಯಾಗಿರು ; ಈ ನಿನ್ನ ಪದವಿಗಾಗಿ ನೀನು ಗರ್ವಪಡಬಾರದು! ಇದನ್ನೇ ಒಂದು ದೊಡ್ಡ ಪುರುಷಾರ್ಥವೆಂದೆಣಿಸಬೇಡ! ಪುರುಷಾರ್ಥತತ್ವವನ್ನು ತಿಳಿದವರು ಈ ನಿನ್ನ ಪದವಿಯನ್ನಾಗಲಿ, ಇದಕ್ಕಿಂತಲೂ ಮೇಲಾದ ಬ್ರಹ್ಮಪದವಿಯನ್ನಾಗಲಿ, ಕೇವಲ ತುಚ್ಛವೆಂದೇ ಭಾವಿಸುವರೇ ಹೊರತು ಸ್ವಲ್ಪಮಾತ್ರವೂ ಗೌರವಿಸಲಾರರು. ಇವೆಲ್ಲವೂ ಅಶಾಶ್ವತಗಳು! ಶಾಶ್ವತ ಸುಖಹೇತುವಾದ ಮೋಕ್ಷಮಾರ್ಗಕ್ಕೂ ಪ್ರತಿಬಂಧಕಗಳು! ಆದುದರಿಂದ ಈ ಅಲ್ಪಕಾಲಸುಖಕ್ಕಾಗಿ ನೀನು ಅಹಂಕಾರಪಟ್ಟು ಸ್ವೇಚ್ಛಾಚಾರಿಯಾಗಿ ನಡೆಯಬಾರದು! ಭೂಲೋಕದಲ್ಲಿ ಐಶ್ವರ್ಯದಲ್ಲಿಯೂ, ಭೋಗಸಮೃದ್ಧಿ

ಯಲ್ಲಿಯೂ ನಿನ್ನನ್ನು ಮೀರಿಸಿದವರೆಷ್ಟೋ ಮಂದಿಯುಂಟು ; ಈಗ ಭೂಲೋಕದಲ್ಲಿ ಏಕಚ್ಛತ್ರಾಧಿಪತ್ಯದಿಂದ ರಾಜ್ಯವನ್ನಾಳುತ್ತಿರುವ ಅಂಬರೀಷರಾಜನ ಪ್ರಭಾವವನ್ನು ನೀನೂ ಕೇಳಿ ಬಲ್ಲೆಯಷ್ಟೆ? ಸಾಕ್ಷಾದ್ವಿಷ್ಣುಚಕ್ರವೇ ಅವನ ಅಧೀನವಾಗಿರುವುದು ; ನಿನಗಿಂತಲೂ ಅವನು ಅನೇಕಭಾಗದಲ್ಲಿ ಮೇಲೆನಿಸಿರುವನು. ಹಾಗಿದ್ದರೂ ಅವನು ತನ್ನ ಪದವಿಗಾಗಿ ತಾನು ಗರ್ವಪಡದೆ, ಉನ್ಮಾರ್ಗದಲ್ಲಿ ಪ್ರವರ್ತಿಸದೆ, ಎಲ್ಲರಲ್ಲಿಯೂ ವಿನೀತನಾಗಿ, ಭಗವದ್ಭಕ್ತಿಯೇ ತನ್ನ ಸರ್ವೈಶ್ವರ್ಯವೆಂದು ತಿಳಿದಿರುವನು. ಅವನು ಸಾಕ್ಷಾದ್ವಿಷ್ಣುಸಮಾನನಾದುದರಿಂದ ಅಂತವನ ದರ್ಶನವೇ, ನಮ್ಮ ತಪಸ್ಸಿಗೆ ಫಲರೂಪವಾಗಿರುವುದು. ದೇವೇಂದ್ರಾ ! ಇನ್ನು ಮೇಲಾದರೂ ನೀನು ಆ ದಾರಿಯನ್ನನುಸರಿಸು ! ಇದರಮೇಲೆ ನಿನ್ನ ಇಷ್ಟದಂತೆ ನಡೆ ! ಮಿತ್ರನೆ! ಬಾ ಹೋಗುವೆವು! ನಾರದಪರ್ವತರಿಬ್ಬರೂ ಹೋಗುವರು.)

ಇಂದ್ರಂ—(ಚಿಂತಾಕುಲನಾಗಿ ಮನ್ಮಥನನ್ನು ನೋಡಿ) ಮಿತ್ರನೆ! ನಾವು ಸರಸವಾಗಿ ಆರಂಭಿಸಿದ ಉತ್ಸವವು ಹೇಗೆ ವಿರಸವಾಗಿ ಪರಿಣಮಿಸಿತು!ನೋಡಿದೆಯಾ ? ನಿಷ್ಕಾರಣವಾಗಿ ನಾವಿಬ್ಬರೂ ಆ ಮಹರ್ಷಿಯ ಕೋಪಕ್ಕೆ ಪಾತ್ರರಾದೆವು.

ಮನ್ಮಥಂ—(ನಗುತ್ತ) ದೇವೇಂದ್ರಾ! ನನಗೇನೂ ಇದರಲ್ಲಿ ಪ್ರಮಾದವು ತೋರಲಿಲ್ಲ! ಯೋಗಿಗಳಿಗೂ, ನನಗೂ ಜನ್ಮದ್ವೇಷವೆಂಬುದು ಸಹಜವಾಗಿಯೇ ಇರುವುದು! ಇದಕ್ಕಾಗಿ ಚಿಂತೆಯೇಕೆ ?

ಇಂದ್ರಂ—ಮಿತ್ರನೆ ! ಹಾಗಲ್ಲ ! ಈಗ ನನ್ನ ಮನಸ್ಸಿಗೆ ಸಮಾಧಾನವಿಲ್ಲ. ಈ ಉತ್ಸವಸಂಭ್ರಮಗಳನ್ನು ಇಷ್ಟಕ್ಕೇ ನಿಲ್ಲಿಸುವವು.

ಮನ್ಮಥಂ—ಪ್ರಭುವಿನ ಇಷ್ಟದಂತಾಗಲಿ !

(ತೆರೆಯು ಬೀಳುವುದು.)

ಇದು ಪ್ರಥಮಾಂಕವು.

ದ್ವಿತೀಯಾಂಕಂ.

(ಮನ್ಮಥನೂ, ವಸಂತನೂ ಪ್ರವೇಶಿಸುವರು-)

ಮನ್ಮಥಂ—ಮಿತ್ರ ವಸಂತಾ! ನನ್ನ ಪ್ರಯತ್ನವೆಲ್ಲಾ ಎಷ್ಟು ವಿರಸವಾಗಿ ಪರಿಣಮಿಸಿತು ನೋಡಿದೆಯಾ ?

ವಸಂತಂ—ಹೌದು! ಮುಖ್ಯವಾಗಿ ನಮ್ಮ ದೇವೇಂದ್ರನದೇ ತಪ್ಪು! ಕೇವಲ ಭೋಗಪ್ರಧಾನವಾದ ಇಂತಹ ಉತ್ಸವಕಾಲಗಳಲ್ಲಿ ಶೃಂಗಾರದ ಗಂಧವನ್ನೇ ಅರಿಯದ ವೈದಿಕರನ್ನು ತಂದು ಮುಂದೆ ಕುಳ್ಳಿರಿಸಿದರೆ ಅವರಿಗೆ ಇದೆಲ್ಲಾ ಸಹಿಸುವುದೆ?

ಮನ್ಮಥಂ—ಅದೂ ನಿಜವೇ ! ವೈದಿಕರನ್ನು ಅಲ್ಲಿಗೆ ಕರೆಸಬಾರದಾಗಿತ್ತು. ಅದರಲ್ಲಿಯೂ ಕಲಹಪ್ರಿಯನಾದ ನಾರದನು ಬಂದಮೇಲೆ ಹೇಳಬೇಕಾದುದೇನು?ಆದುದಾಯಿತು! ಇನ್ನು ಮುಂದಿನ ಕಾರ್ಯವನ್ನು ಯೋಚಿಸೋಣ (ಶ್ರಾಂತಿಯನ್ನಭಿನಯಿಸಿ ನಿಟ್ಟುಸಿರು ಬಿಟ್ಟು) ಮಿತ್ರನೆ! ಆ ಋಷಿಗಳಿಬ್ಬರೂ ಎಲ್ಲಿ ಹೋದರೆಂದು ತಿಳಿಯಲಿಲ್ಲ ! ಸುತ್ತಿ ಸುತ್ತಿ ಸಾಕಾಯಿತು ! ಇನ್ನೂ ಚೆನ್ನಾಗಿ ಬೆಳಗಾದಂತೆ ತೋರಲಿಲ್ಲ! ಅದೋ! ಶರಚ್ಚಂದ್ರನು ಇನ್ನೂ ಆಕಾಶದಲ್ಲಿ ಹೇಗೆ ಪ್ರಕಾಶಿಸುತ್ತಿರುವನು ನೋಡು!

ಕಂ|| ಶರದಭ್ರಸರಿತ್ತಟದೊಳ್
ಪರಿಶುದ್ಧಾಂಬರ ಪರೀತ ನಿಜಮೂರ್ತಿ! ನಿಶಾ
ಕರಮುನಿ ಜಪನಿಷ್ಠನವೊಲ್
ಮೆರೆವಂ ಕರವಿಧೃತ ತಾರಕಾಕ್ಷಾವಳಿಯಿಂ || ೧೫||

ವಸಂತಂ—(ನಕ್ಕು) ಮಿತ್ರನೆ! ಚೆನ್ನಾಯಿತು! ಏನಿದು? ಯೋಗಿಗಳನ್ನು ಜಯಿಸುವುದರಲ್ಲಿ ನಮಗೆ ಮುಖ್ಯಸಹಾಯಕನಾದ ಚಂದ್ರನೂ ಈಗ ನಿನ್ನ ಕಣ್ಣಿಗೆ ಒಬ್ಬ ಯೋಗಿಯಂತೆಯೇ ಕಾಣುವನೆ?

ನಾರದಪರ್ವತರು ನಿನಗೆ ಹಿಡಿಸಿದ ಬೆಜ್ಜರದಿಂದ, ಎಲ್ಲಿ ನೋಡಿದರೂ, ಯಾವುದನ್ನು ಕಂಡರೂ, ನಿನಗೆ ಆ ಋಷಿಸ್ವರೂಪವೇ ಗೋಚರಿಸುವಂತಿದೆ ?

ಮನ್ಮಥಂ—ಮಿತ್ರನೆ! ನೀನು ಹೇಳಿದುದು ನಿಜ ! ನನಗೆ ಅವರಲ್ಲಿರುವ ಆ ತ್ಯಾಕ್ರೋಶವು, ಅವರು ಸದಾ ನನ್ನ ಕಣ್ಣೆದಿರಾಗಿಯೇ ನಿಂತಿರುವಂತೆ ಭಾವನೆಯನ್ನುಂಟುಮಾಡುವುದು. ಅನವರತವೂ ಅದೇ ಚಿಂತೆಯಿಂದ ನನ್ನ ಮನಸ್ಸು ಕುದಿಯುತ್ತಿರುವುದು.

ವಸಂತಂ—ಹಾಗಿದ್ದರೆ, ಭ್ರಮರಕೀಟ ನ್ಯಾಯದಂತೆ ಅಂತಹ ಸ್ಥಿರ ಭಾವನೆಯಿಂದ, ನೀನೂ ಯೋಗಿಯಾಗಿಬಿಟ್ಟರೆ ಆಗ ನಮ್ಮ ಗತಿಯೇನು?

ಮನ್ಮಥಂ—ಮಿತ್ರನೆ! ಪರಿಹಾಸವು ಸಾಕು. ಇದೋ ! ಇದೇ ಅಂಬರೀಷ ರಾಜನ ಅರಮನೆಯೆಂದು ತೋರುವುದು. ನಾವು ಊಹಿಸಿದಂತೆ ಆ ಯೋಗಿಗಳಿಬ್ಬರೂ ಇಲ್ಲಿಗೆ ಬಂದಿರಬಹುದೆ?

ವಸಂತಂ—ಅವರು ಇಂದ್ರಸಭೆಯಿಂದ ಹೊರಟುಬರುವಾಗ ಹೇಳಿದ ಮಾತುಗಳಿಂದ, ಅವರಿಬ್ಬರೂ ಇಲ್ಲಿಗೇ ಬಂದಿರಬೇಕು. ಅದರಲ್ಲಿ ಸಂದೇಹವಿಲ್ಲ. (ಮುಂದೆ ನೋಡಿ) ಮಿತ್ರನೆ ! ಅದೋ ! ಯಾವನೋ ವೃದ್ಧನೊಬ್ಬನು ತನಗೆ ತಾನೇ ಗುಣಗುಟ್ಟುತ್ತ ಇತ್ತಲಾಗಿ ಬರುತ್ತಿರುವನು. ಅವನು ರಾಜಸೇವಕನಂತೆ ತೋರುವುದು. ನಾವು ಇಲ್ಲಿಯೇ ಕಣ್ಮರೆಯಾಗಿದ್ದು ಅವನು ಹೇಳುವುದನ್ನು ಕೇಳುವೆವು.

ಮನ್ಮಥಂ—ಸರಿ! ಹಾಗೆಯೇ ಮಾಡುವೆವು. (ಮರೆಯಾಗಿ ನಿಲ್ಲುವರು ವೃದ್ಧಕಂಚುಕಿಯು ಪ್ರವೇಶಿಸುವನು.)

ಕಂಚುಕಿ—(ನಡೆಯಲಾರದೆ ನಿಟ್ಟುಸಿರುಬಿಟ್ಟು ಶ್ರಾಂತಿಯನ್ನಭಿನಯಿಸಿ) ಆಹಾ ! ರಾಜಸೇವೆಯೆಂಬುದೇ ಬಹಳ ಕಷ್ಟ ! ಅದರಲ್ಲಿಯೂ ಈಗ ನನ್ನ ಸ್ಥಿತಿಯೋ !

ವೃತ್ತ|| ಬಡವಾಯ್ತಂಗಂಗಳೆಲ್ಲಂ ! ಬಲಮುಡುಗಿತು! ಮೇಣ್
ಮಂಜುಮೂಡಿತ್ತು ಕಣ್ಗೊಳ್!
ನುಡಿಯಲ್ ಮೇಲುಬ್ಬಸಂ ಬಂದಡರ್ವುದು !
ನಡುಗುತ್ತಿರ್ಪುದೀ ಜಾನುಯುಗ್ಮಂ |
ನಡೆಯಲ್ ಕಾಲ್ ಬಾರದೇಳಲ್ ನಡು ಮುರಿಯುವವೊಲ್
ತೋರ್ಕುರ್ಗವಿಂತಾದೊಡಂ ಕೋ|
ಲ್ಪಿಡಿದಾಶಾಪಾಶಬದ್ಧಂ ಜಠರಪಿಠರಮಂ
ತುಂಬಲಿಂತಾಂ ತೊಳಲ್ವೆಂ ||೧೬||

ಅಯ್ಯೋ! ನನಗೆ ಇದರಿಂದ ವಿಶ್ರಾಂತಿಯೆಂದೋ ತಿಳಿಯಲಿಲ್ಲ! ಅಥವಾ ನಮಗೆ ವಿಶ್ರಾಂತಿಯೆಂದರೇನು ? ಅಂತಃಪುರಸೇವೆ ಯಲ್ಲಿರುವ ಕಂಚುಕಿಗಳ ಅವಸ್ಥೆಯೇ ಇದು! ಏಕೆಂದರೆ.

ಕಂ|| ದೊರೆವುದು ವಿಶ್ರಾಂತಿ ವಯಃ |
ಪರಿಣತಿಯಿಂದಿತರ ರಾಜಭೃತ್ಯರ್ಗೆಲ್ಲಂ ||
ಜರೆ ಮುತ್ತಿದನಿತುಮಂತಃ ||
ಪುರಕಾರ್ಯದ ಭಾರಮೆಮಗೆ ಪೆರ್ಚುಗತೆ ಪೋಕುಂ ||೧೭||

(ಸುತ್ತಲೂ ನೋಡಿ ಭೀತಿಯನ್ನಭಿನಯಿಸಿ) ಓಹೋ! ಏನಿದು ! ಆಗಲೇ ಸೂರ್ಯೋದಯಸಮಯವಾಯಿತು ! ಇನ್ನೇನು ಗತಿ ? ದೇವಿಯು ಶ್ರೀಮತೀಕುಮಾರಿಯ ಅಭ್ಯುದಯಕಾರಣಕ್ಕಾಗಿ ಈ ದಿನ ವರಲಕ್ಷ್ಮೀಪೂಜೆಯನ್ನು ನಡೆಸುವುದಾಗಿ ನಿಶ್ಚಯಿಸಿ, ಬೆಳಗಾಗುವಮೊದಲೇ ಅದಕ್ಕೆ ಬೇಕಾದ ಸಮಸ್ತಸಂಭಾರ ಗಳೂ ಸಿದ್ಧವಾಗಿರಬೇಕೆಂದು ನಿನ್ನೆಯ ದಿನವೇ ಸಮಸ್ತ ಸೇವ ಕರಿಗೂ ಆಜ್ಞೆಮಾಡಿದ್ದಳು. ವಾರ್ಧಕದಶೆಯಿಂದ ಏಳಲಾರದೆ ನಾನು ಹೊತ್ತುಮೀರಿ ಮಲಗಿಬಿಟ್ಟೆನು. ಈಗೇನು ಮಾಡಲಿ ? (ಅತ್ತಿತ್ತ ತಿರುಗಿ ನೋಡಿ) ಅದೋ? ಅತ್ತಲಾಗಿ ಯಾವಳೋ

ಹೆಂಗಸಿನ.ಕಾಲಂದುಗೆಯ ಧ್ವನಿಯು ಕೇಳಿಸುವುದು. (ಚೆ ನ್ನಾಗಿ ನೋಡಿ) ಓಹೋ ! ನಮ್ಮ ಅರಮನೆಯ ಮಾಲೆಗಾರ್ತಿ ಯಾದ ಮಂಜರಿಕೆಯೆಂಬವಳು! ಇವಳು ಇಷ್ಟು ಸಂಭ್ರಮ ದಿಂದ ಬರಲು ಕಾರಣವೇನೆಂದು ತಿಳಿಯಲಿಲ್ಲ. ಇರಲಿ! ವಿಚಾರಿ ಸುವೆನು. ಮಂಜರಿಕೆ! ನಿಲ್ಲು! ಇಷ್ಟಾತುರವೇಕೆ?

ಮಂಜರಿಕೆ—(ಪ್ರವೇಶಿಸಿ) ಆರ್ಯನೆ ! ಇದೇನು? ಇನ್ನೂ ನೀನು ಇಲ್ಲಿಯೇ ತಡವರಿಸುತ್ತಿರುವೆಯಲ್ಲ!ಆಗಲೇ ವಸಂತೋದ್ಯಾನದಲ್ಲಿ ಪೂಜೋ ಪಕ್ರಮವಾಯಿತು! ಇಷ್ಟರಲ್ಲಿ ದೇವರ್ಷಿಗಳಾದ ನಾರದಪರ್ವ ತರು ನಮ್ಮ ಅರಮನೆಯಕಡೆಗೆ ಬರುತ್ತಿರುವುದನ್ನು ಕೇಳಿ ದೇವಿ ಯು ಈ ಸಂಗತಿಯನ್ನು ಮಹಾರಾಜನಿಗೆ ತಿಳಿಸುವುದಕ್ಕಾಗಿ ನನ್ನನ್ನು ಕಳುಹಿಸಿದಳು.

ಕಂಚುಕಿ—ಹಾಗಿದ್ದರೆ ಈಗ ಮಹಾರಾಜನು ಎಲ್ಲಿರುವನು?

ಮಂಜರಿಕೆ—ಧರ್ಮಾಸನಕ್ಕೆ ಹೊರಡುವುದರಲ್ಲಿದ್ದನು. ಇಷ್ಟರಲ್ಲಿ ಹೋಗಿರ ಬಹುದು!

ಕಂಚುಕಿ —ಒಳ್ಳೇದು ! ನೀನು ಹೋಗಿ ದೇವಿಯ ಸಮೀಪದಲ್ಲಿರು ! ನಾನು ಈಗಲೇ ರಾಜಾಸ್ಥಾನಕ್ಕೆ ಹೋಗಿ ತಿಳಿಸುವೆನು.

ಮಂಜರಿಕೆ—ಒಳ್ಳೇದು ! (ಇಬ್ಬರೂ ಹೋಗುವರು.)

(ಮರೆಯಾಗಿದ್ದ ಮನ್ಮಥ ವಸಂತರಿಬ್ಬರೂ ಸಂತೋಷದಿಂದ ಮುಂದೆ ಬಂದು.)

ವಸಂತಂ—ಮಿತ್ರನೆ! ನಾವು ಊಹಿಸಿದಂತೆಯೇ ಆಯಿತು! ನಾರದ ಪರ್ವ ತರು ಇಲ್ಲಿಗೇ ಬಂದಿರುವರು.

ಮನ್ಮಥಂ—ನಾವೂ ಇಲ್ಲಿಯೇ ಸಮಯವನ್ನು ಕಾದಿದ್ದು ಅವರನ್ನು ಹೇ ಗಾದರೂ ಕಾಮವಶರನ್ನಾಗಿ ಮಾಡಬೇಕು.

ವಂತಂ—ಹಾಗೆಯೇ ಆಗಲಿ! ನಡೆ! ಅದೃಶ್ಯರಾಗಿ ಅವರನ್ನು ಹಿಂಬಾಲಿ ಸುವೆವು. (ಹೋಗುವರು.)

ಇದು ವಿಷ್ಕಂಭವು.

ಆಸ್ಥಾನ—ಅಂಬರೀಷರಾಜನ ಸಭಾಮಂಟಪ.

(ಮಂತ್ರಿಸೇನಾಧಿಪತಿಗಳೂ, ವಸಿಷ್ಠಾದಿಮಹರ್ಷಿಗಳೂ ನೆರೆದಿರುವರು.)

ತೆರೆಯಲ್ಲಿ—ರಾಜಾಧಿರಾಜ ಪರಾಕ್ ಎಚ್ಚರಿಕೆ! (ದಂಡಧಾರಿಯಾದ ಕಂಚುಕಿಯು ದಾರಿಯನ್ನು ತೋರಿಸುತ್ತ ಬರುವನು. ಛತ್ರಚಾಮರಾದಿಬಿರುದುಗಳೊಡನೆ ರಾಜನು ಸಭಾಸ್ಥಾನವನ್ನು ಪ್ರವೇಶಿಸುವನು. ಸಭೆಯಲ್ಲಿದ್ದವರೆಲ್ಲರೂ ಎದ್ದು ನಿಲ್ಲುವರು. ರಾಜನು ಎಲ್ಲರಿಗೂ ಅಭಿವಂದಿಸಿ ಸಿಂಹಾಸನದ ಬಳಿಯಲ್ಲಿ ನಿಲ್ಲುವನು.)

ರಾಜಂ—ಪೂಜ್ಯರೆ! ಕುಲಕ್ರಮಾಗತವಾದ ಈ ಧರ್ಮಾಸನವನ್ನೇರಿ ರಾಜಕಾರ್ಯವನ್ನಾರಂಭಿಸುವುದಕ್ಕೆ ಮೊದಲು ದೇವದೇವನಾದ ಶ್ರೀಹರಿಯನ್ನು ಧ್ಯಾನಿಸುವೆವು.

ವಸಿಷ್ಠಂ—ಆಹಾ! ಅದಕ್ಕೆ ತಡೆಯೇನು? ಯಾವ ಕಾರ್ಯಕ್ಕೂ ಮೊದಲು ನಡೆಸಬೇಕಾದ ಪೂರ್ವರಂಗವೇ ಇದು!

(ಎಲ್ಲರೂ ಕೈಮುಗಿದು ಪ್ರಾರ್ಥಿಸುವರು.)

ರಾಗ. ತಾಳ.

*ಕಂ|| ಲೋಕತ್ರಯೈಕನಾಥಂ
ಶ್ರೀಕಾಂತಂ ಸಕಲಭೂತರಕ್ಷಾನಿರತಂ |
ನಾಕೇಶ ಮುಖ್ಯ ಸುರವರ
ಲೋಕಾರ್ಚಿತನಸುರವೈರಿ ರಕ್ಷಿಕೆ ನಮ್ಮಂ || ೧೮ ||

(ದೇವ ಜಗದಾಧಾರ) ಎಂಬಂತೆ.

* ದೇವದೇವ ಮುರಾರೀ | ಜಯ | ಪಾವನಾತ್ಮಕ ಶೌರೀ |
ಶ್ರೀವನಿತಾವರ | ಸಕಲಾಧಾರ || ದೇವ ||
ಕರುಣಾ | ಭರಣಾ | ಸುರಗಣಶರಣಾ |
ವರಮುನಿಸನ್ನುತ | ದಿವ್ಯಚರಣಾ || ದೇವ|| || ೧ ||
ನವನೀರದನೀ | ಲ ಶುಭಾವಯವಾ |
ಭವ ಭಯ ಹರ ಪರ | ವಾಸುದೇವಾ || || ೨ ||

(ರಾಜನು ಆಸನದಲ್ಲಿ ಕುಳಿತಮೇಲೆ ಎಲ್ಲರೂ ಕುಳ್ಳಿರುವರು.)

ರಾಜಂ—ಎಲೈ ಮಂತ್ರಿಶ್ರೇಷ್ಠರೆ! ಈ ಸಿಂಹಾಸನಾರೋಹಣವೆಂಬುದು ನನಗೆ ಕೇವಲ ಔಪಚಾರಿಕವೇ ಹೊರತು, ನಾನು ಈ ಧರ್ಮಾಸನವನ್ನೇರಿ ಕುಳಿತು ನಡೆಸಬೇಕಾದ ಕಾರ್ಯವೊಂದೂ ತೋರಲಿಲ್ಲ! ಏಕೆಂದರೆ.—

ಇರಿಯಲ್ ವೈರಿಗಳಿಲ್ಲ! ದಾನಮೆಸಗಲ್ ದಾನಾರ್ಥಿಯಿಲ್ಲಾರ್ತರಂ |
ಪೊರೆಯಲ್ಕಾರ್ತರುಮಿಲ್ಲ! ನಿತ್ಯಸುಖದಂ ನಿಷ್ಕಂಟಕಂ ನೋಡಲೀ |
ಧರೆ! ನಾನೆನ್ನಯ ರಾಜಕಾರ್ಯಧುರದೊಳ್ನಿಶ್ಚಿಂತನಾಗಿರ್ದೊಡಂ |
ಧರಣೀಶರ್ಗಿದು ಕೃತ್ಯಮೆಂದಡರ್ದನಾಸೀಪೀಠಮಂ ಪ್ರತ್ಯಹಂ ||೧೯||

ಮಂತ್ರಿ—ರಾಜೇಂದ್ರಾ! ಇವೆಲ್ಲಾ ಧರ್ಮಮೂರ್ತಿಯಾದ ನಿನ್ನ ಪ್ರಭಾವವೇ!

ಸೇನಾಪತಿ—ರಾಜೇಂದ್ರಾ! ನಮ್ಮಲ್ಲಿರುವ ಸೈನ್ಯದುರ್ಗಾದಿಗಳುಕೂಡ ನಿನಗೆ ನೆಪಮಾತ್ರದ ರಾಜಚಿಹ್ನಗಳಾಗಿರುವುವೇಹೊರತು, ಅವುಗಳಿಂದ ಸಾಧಿಸಬೇಕಾದ ಕಾರ್ಯಗಳೇನೂ ಇಲ್ಲ! ಏಕೆಂದರೆ.

ಕಂ|| ನಿನ್ನಯ ತೇಜೋಬಲಮೇ |
ತಾನ್ನೀಗಿಪುದಿಳೆಗನಿಷ್ಟದೋಷಮನೆಲ್ಲಂ |
ನಿನ್ನ ಮನಸಂಕಲ್ಪಮೆ |
ಮುನ್ನೆರವುಗುಮಖಿಲಜನದಭೀಷ್ಟಾರ್ಥಗಳಂ.|| ೨೦||

ರಾಜಂ—ಎಲೈ ಮಂತ್ರಿಸೇನಾಪತಿಗಳಿರಾ! ಪ್ರಜಾಕ್ಷೇಮಚಿಂತೆಯಲ್ಲಿ ನೀವೆಲ್ಲರೂ ನನಗೆ ಸಹಾಯಕರಾಗಿರುವಾಗ ಯಾವವಿಧದಲ್ಲಿಯೂ ಕೊರತೆಯಿಲ್ಲ! ಆದರೂ ಈಗ ನಾನು ಈ ಸ್ಥಾನಗಾರವಕ್ಕಾಗಿ ನಿಮಗೆ ಒಂದೆರಡು ಮಾತುಗಳನ್ನು ಹೇಳಬೇಕಾಗುವುದು. ಪ್ರಜೆಗಳಿಂದ ನಮಗೆ ಸಲ್ಲತಕ್ಕ ರಾಜಾದಾಯಗಳೆಲ್ಲವೂ, ಆ ಪ್ರಜೆಗಳ ಕ್ಷೇಮಕ್ಕಾಗಿಯೇ ಹೊರತು, ನಮ್ಮ ಭೋಗಾರ್ಥವಲ್ಲ! ನಮ್ಮ ಸೇನಾಪರಿಕರಗಳೆಲ್ಲವೂ ಶತ್ರುಚೋರಾದಿಬಾಧೆ

ಗಳಿಲ್ಲದಹಾಗೆ ಪ್ರಜೆಗಳನ್ನು ಕ್ಷೇಮದಿಂದಿರಿಸುವುದಕ್ಕಾಗಿಯೇ ಹೊರತು ಲೋಭಬುದ್ಧಿಯಿಂದ ರಾಜ್ಯವನ್ನು ಹೆಚ್ಚಿಸುವುದಕ್ಕಲ್ಲ! ಈ ವಿಚಾರವನ್ನು ನೀವು ನೆನಪಿನಲ್ಲಿಟ್ಟು, ನಿಮ್ಮನಿಮ್ಮ ಅಧಿಕಾರಗಳನ್ನು ನಡೆಸುತ್ತ ಬರಬೇಕು.

ವಸಿಷ್ಠಂ—ರಾಜೇಂದ್ರಾ! ಸಾಕ್ಷಾನ್ನಾರಾಯಣನಿಗೆ ಅಸಾಧಾರಣಚಿಹ್ನವಾದ ಸುದರ್ಶನಚಕ್ರವೇ ನಿನಗೆ ಬೆಂಬಲವಾಗಿರುವಾಗ, ಲೋಕದಲ್ಲಿ ನಿನಗಿಂತಲೂ ಪರಮಧನ್ಯರಾರುಂಟು!

ಕಂ|| ಘನಮುನಿಗಳ್ಗಂ ನಿಜದ ।
ರ್ಶನಮಾತ್ರಮನೀಯದಖಿಲಜಗದಧಿನಾಥಂ ।
ನಿನಗಿತ್ತಂ ತನ್ನ ಸುದ ।
ರ್ಶನಮನೆನಲ್ ಧನ್ಯರಾರೊ! ನಿನ್ನವೊಲಿಳೆಯೊಳ್? ೨೦||

* ರಾಜಂ—ಅಮಾತ್ಯರೆ! ನಿಮ್ಮ ಪ್ರಿಯವಚನಗಳಿಗಾಗಿ ನಾನು ಕೃತಜ್ಞನಾಗಿರುವೆನು. ವಾಸ್ತವದಲ್ಲಿ ಆ ಭಗವಂತನ ಅಸಾಧಾರಣಕೃಪೆಗೆ ನಾನು ಪಾತ್ರನೆಂಬುದರಲ್ಲಿ ಸಂದೇಹವಿಲ್ಲ. ಆದರೇನು? ಕೇವಲಸ್ವಾರ್ಥಪರನಂತೆ ಈ ನನ್ನ ಭಾಗ್ಯಕ್ಕಾಗಿ ನಾನೇ ಸಂತೋಷ ಪಡುತ್ತಿರುವುದರಲ್ಲಿ ನನಗೆ ಅಷ್ಟಾಗಿ ಮನಸ್ತೃಪ್ತಿಯಿಲ್ಲ! ನನ್ನಂತೆಯೇ ನನ್ನ ಸಕಲ ಪ್ರಜೆಗಳೂ ಆ

---

* ರಾಗ, ಜುಂಝೂಟಿ ತಾಳ.
(ಘನವಸಂತ) ಎಂಬಂತೆ

ಅಹಹ ನಾನೇ। ಧನ್ಯನಖಿಲ। ಲೋಕಮಾನ್ಯನು ।
ಮಹಿಯೊಳೆನ್ನ । ಭಾಗ್ಯಕಾವುದೆಣೆಯೊ । ಕಾಣೆನು।।ಅ।।
ಎನ್ನ ಜನ್ಮ । ವೆನ್ನ ಜೀವನ । ವೆನ್ನ ಭಾಗ್ಯವು ।
ಸನ್ನುತಾಂಗನ । ಸೇವೆಯಿಂದ । ಸಫಲವಾದುದು ।। ೧ ।।
ಸರಸಿಜಾಕ್ಷನ । ಸುಗುಣಕೀರ್ತನ । ಸುಧೆಯ ಸವಿಯುವ ।
ಪರಮಭಾಗ್ಯವೆ । ಭಾಗ್ಯವೆಣಿಸಲಖಿಲಲೋಕಕೆ ।। ೨ ।।

ಶ್ರೀಹರಿಯ ಪರಮಾನುಗ್ರಹಕ್ಕೆ ಪಾತ್ರರಾಗಿ, ಸುಖದಿಂದಿರಬೇಕೆಂಬುದೇ ನನ್ನ ಕೋರಿಕೆ ! ಆದುದರಿಂದ ಎಲೈ ಮಂತ್ರಿವರ್ಯರೆ ! ನಮ್ಮ ದೇಶದ ಗ್ರಾಮಗ್ರಾಮಗಳಲ್ಲಿಯೂ, ಪ್ರಜೆಗಳೆಲ್ಲರೂ ಸದಾ ಹರಿಕೀರ್ತನಪರರಾಗಿದ್ದು, ನಿಷ್ಕಲ್ಮಷವಾದ ಭಕ್ತಿಯಿಂದ ಆ ಭಗವದನುಗ್ರಹಕ್ಕೆ ಪಾತ್ರರಾಗುವಂತೆ ಮಾಡಬೇಕಾದುದು ನಮ್ಮ ಪ್ರಧಾನಕಾರ್ಯವು. ಆ ಶ್ರೀಹರಿಯನ್ನೊಲಿಸುವುದಕ್ಕೆ ಭಕ್ತಿಯೋಗಕ್ಕಿಂತಲೂ ಮೇಲಾದ ಉಪಾಯವಿಲ್ಲ. ಯಜ್ಞ, ಯಾಗ, ಜಪ, ತಪಸ್ಸುಗಳೆಲ್ಲವೂ ಆ ಹರಿಕೀರ್ತನೆಯೊಂದರಲ್ಲಿಯೇ ಅಡಗಿರುವುವು. ಆದುದರಿಂದ.

ಕಂ|| ಹರಿಚರಣಸ್ಮೃತಿಯೆ ತಪಂ !
ಹರಿಗುಣಕೀರ್ತನಮೆ ಸಕಲಮಂತ್ರಜಪಂ! ಶ್ರೀ ||
ಹರಿಪೂಜೆಯೇ ವ್ರತಾವಳಿ !
ಹರಿಸೇವೆಯೆ ಯಜ್ಞಮೆಂದು ಭಾವಿಪುದನಿಬರ್ || ೨೨ ||

* ಆದರೆ ಯಜ್ಞಯಾಗಾದಿಕರ್ಮಗಳಿಗಿಂತಲೂ ಈ ಭಕ್ತಿಯೋಗವನ್ನು ಸುಲಭವಾಗಿ ಸಾಧಿಸಬಹುದಾದರೂ, ದೃಢಮನಸ್ಸಿಲ್ಲದವರಿಗೆ ಇದೂ ಸಿದ್ಧಿಸಲಾರದು. ಹಾಗಿದ್ದರೆಮಾತ್ರವೇ ಭಕ್ತಿ

ರಾಗ - ಆರಭಿ - ಆದಿತಾಳ.

* "ಸಾಮಾನ್ಯವಲ್ಲ ಶ್ರೀ । ಹರಿಸೇವೆ । ಪಾಮರಮನುಜಗೆ । ಸಾ || ಪ ||
ನೇಮನಿಷ್ಠೆ ಬಿಡ। ದಂದದಲನುದಿನ।ಸಾಮಜವರದನ।ಪ್ರೇಮದಿ ಭಜಿಪುದು|| ಅ||
ಅಂತರಂಗಮಲವೆಲ್ಲವನಳಿದು । ಸಂತತಮನದಲಿ ಶ್ರೀ ।
ಕಾಂತನ ಚರಿತೆಯ । ಕೇಳುತ ನಲಿದು । ಸಂತಸವನು ತಳೆದು ।
ಸಂತರ ಸಂಗದಿ।ಸಂತತವಿದ್ದು ನಿ। ರಂತರ ಹರಿಯನು।ಚಿಂತಿಸಬೇಕು ||ಸಾ||
ಜ್ಞಾನಕರ್ಮದಿಂ । ದ್ರಿಯಗಳ ನಿಗ್ರಹಿಸಿ। ಜ್ಞಾನವ ಸಂಗ್ರಹಿಸಿ।
ಹಾನಿವೃದ್ಧಿಗಳಿ । ವೆರಡನು ತಾ ಸಹಿಸಿ । ದೀನತ್ವವ ವಹಿಸಿ ।
ಮಾನಾವಮಾನಸ।ಮಾನಗಳೆಂದುನಿ।ದಾನದಿ ಹರಿಗುಣ।ಧ್ಯಾನವ ಮಾಳ್ಪುದು||"

ಯು ಪರಿಪಕ್ವವಾಗುವುದು. ಮೊದಲು ಇವೆಲ್ಲಕ್ಕೂ ಸತ್ಸಹವಾಸವೇ ಮೂಲವು. ಅತಿಥಿಗಳಾಗಿ ಬಂದ ಹರಿಭಕ್ತೋತ್ತಮರನ್ನು ಯಥೋಚಿತವಾಗಿ ಸತ್ಕರಿಸಿ, ಅವರ ಅನುಗ್ರಹಕ್ಕೆ ಪಾತ್ರರಾಗಬೇಕು. ದೇವರ್ಷಿಯಾದ ನಾರದನೂಕೂಡ ವಿಷ್ಣುಭಕ್ತರ ಸಹವಾಸಬಲದಿಂದಲ್ಲವೇ ವೈಷ್ಣವಾಗ್ರಣಿಯೆನಿಸಿಕೊಂಡು ಲೋಕಪೂಜ್ಯನಾದನು !

* (ತೆರೆಯಲ್ಲಿ ಗಾನಧ್ವನಿ.)

(ನಾರದಪರ್ವತರಿಬ್ಬರೂ ಹರಿಕೀರ್ತನೆಯೊಡನೆ ನರ್ತಿಸುತ್ತಾ ಬರುವರು ಸಭಾಸದರೆಲ್ಲರೂ ಇದಿರೆದ್ದು ನಿಲ್ಲುವರು. ! ರಾಜನು ಆಸನದಿಂದ ಕೆಳಗಿಳಿದು ಬಂದು.)

ರಾಜಂ—ಪೂಜ್ಯರಾದ ದೇವಮುನಿಗಳಿಗೆ ವಂದಿಸುವೆನು

ನಾರದಂ—ವಿಜಯೀಭವ !

ಪರ್ವತಂ—ಕಲ್ಯಾಣಮಸ್ತು !

ರಾಜಂ—(ಪೀಠವನ್ನು ತೋರಿಸಿ)ಪೂಜ್ಯರೆ!ಈ ಪೀಠಗಳನ್ನಲಂಕರಿಸಬೇಕು

(ಎಲ್ಲರೂ ಕುಳ್ಳಿರುವರು.)

---

* ರಾಗ (ಮುರಾರಿ ದಾನವ) ಎಂಬಂತೆ.

ನಾರಾಯಣಾ! ಭಕ್ತ । ಪರಾಯಣಾ । ಭಯನಿವಾರಣಾ । ಲೋಕಕಾರಣಾ
ಸುರವರೇಣ್ಯ । ನತಶರಣ್ಯ । ಭುವನಮಾನ್ಯ । ಭವಭಯತಾರಣಾ ॥ ೧ ॥
ಸರೋಜಸಂಭವ। ಪುರಾರಿಮುಖಸುರ। ವರಾರ್ಚಿತಾಂಘ್ರಿಸ। ರೋರುಹಾ।
ಖಲವಿದಾರ । ನಿಗಮೋದ್ಧಾರ । ಭಕ್ತಮಂದಾರ । ವರಕರುಣಾಕರಾ ॥೨॥
ವಿನಾಶಿತಾಖಿಲ । ಘನಾಘಸಂಕುಲ । ಕೃಪಾಲವಾಲ ಸು । ನಿರ್ಮಲಾ।
ಭವವಿನಾಶ । ಶುಭವಿಲಾಸ । ಜಯ ಪರೇಶ । ಪಂಕಜಲೋಚನಾ ॥ ೩ ॥

ರಾಜಂ--ಮುನಿವರ್ಯರೆ! ಮಹಾತ್ಮರಾದ ನಿಮ್ಮ ಪಾದಸ್ಪರ್ಶದಿಂದ ಈಗ ನನ್ನಗೃಹವು ಪಾವನವಾಯಿತು. ನಿಮ್ಮ ದರ್ಶನದಿಂದ ನಾನು ಕೃತಾರ್ಥನಾದೆನು.ಆದರೆ ಆಕಸ್ಮಿಕವಾದ ತಮ್ಮ ಆಗಮನಕ್ಕೆ ಕಾರಣವೇನೆಂದು ತಿಳಿಯಲು ನನ್ನ ಮನಸ್ಸು ಕುತೂಹಲಪಡುತ್ತಿರುವುದು! ಮಹರ್ಷಿಗಳ ತಪಸ್ಸಿಗಾಗಲಿ. ಗೋಬ್ರಾಹ್ಮಣರಿಗಾಗಲಿ, ಅವರವರ ವರ್ಣಾಶ್ರಮಧರ್ಮಗಳಿಗಾಗಲಿ ವಿಘಾತವೇನೂ ಇಲ್ಲವಷ್ಟೆ?

ಪರ್ವತಂ—ಕಂ|| "ನೃಪ ನೀಂ ಪಾಲಕನಾಗಿರೆ |
ತಪಸ್ವಿಗಳ ತಪಕೆ ವಿಘ್ನಮೆತ್ತಣಿನಕ್ಕುಂ |
ತಪನಂ ಪ್ರಜ್ವಲಿಸುತ್ತಿರೆ
ವಿಪುಲಾಮಂಡಲದೆ ತಿಮಿರಮೆಂತುದ್ಭವಿಕುಂ?||" ೨೩||

ನಾರದ—ರಾಜೇಂದ್ರಾ! ನಿನ್ನ ತೇಜಃಪ್ರಭಾವದಿಂದಲೇ ತಪೋವಿಘ್ನಗಳೆಲ್ಲವೂ ನಾಶವಾಗುವುವು.ಭಗವಂತನ ಸುದರ್ಶನಚಕ್ರವು ನಿನ್ನ ಹಸ್ತಗತವಾಗಿರುವುದರಿಂದ,ಚಕ್ರಪಾಣಿಯಾದ ಆಶ್ರೀಮನ್ನಾರಾಯಣನ ಸಾಕ್ಷಾದ್ದರ್ಶನದಂತೆ ನಿನ್ನ ದರ್ಶನವೇ ನಮ್ಮ ತಪಸ್ಸಿಗೆ ಫಲರೂಪವಾಗಿರುವುದು.

ಪರ್ವತ—ಈ ನಿನ್ನ ಅದ್ಭುತಕೀರ್ತಿಯನ್ನು ಕೇಳಿಯೇ ನಾವೂ ನಿನ್ನ ದರ್ಶನದಿಂದ ಧನ್ಯರಾಗಬೇಕೆಂದು ;ಇಲ್ಲಿಗೆ ಬಂದವರೇಹೊರತು, ಬೇರೆ ಯಾವ ಕಾರ್ಯೋದ್ದೇಶದಿಂದಲೂ ಬಂದವರಲ್ಲ. ರಾಜೇಂದ್ರಾ! ನಿನಗೂ ನಿನ್ನ ರಾಜ್ಯಾಂಗಗಳಿಗೂ,ನಿನ್ನ ಪ್ರಜೆಗಳಿಗೂ ಕುಶಲವಷ್ಟೆ?

ರಾಜನೆ—ಪೂಜ್ಯರೆ! ನಿಮ್ಮಂತಹ ಮಹಾತ್ಮರ ಪೂರ್ಣಾನುಗ್ರಹಕ್ಕೆ ಪಾತ್ರನಾಗಿರುವಾಗ, ನನ್ನ ಕ್ಷೇಮಕ್ಕೆ ಯಾವ ಭಾಗದಲ್ಲಿ ಕೊರತೆಯುಂಟು? ಹಾಗಿದ್ದರೂ, ಭಗವನ್ಮಾಯೆಯ ಪ್ರಭಾವವನ್ನೂ, ಪ್ರಕೃತಿಬದ್ಧವಾದ ಈ ಪ್ರಪಂಚದ ಸ್ಥಿತಿಗತಿಗಳನ್ನೂ ಕರತ

ಲಾಮಲಕದಂತೆ ಸಾಕ್ಷಾತ್ಕರಿಸಬಲ್ಲ ನಿಮಗೆ, ಈಗ ನಾನು ಹೊಸದಾಗಿ ತಿಳಿಸಬೇಕಾದುದೇನು ? ಲೋಕದಲ್ಲಿ ಸಂಸಾರಿಯಾದ ಮನುಷ್ಯನು, ಎಷ್ಟೇ ಭಾಗ್ಯಶಾಲಿಯಾಗಿರಲಿ! ಎಷ್ಟೇ ಬಲಪರಾಕ್ರಮವುಳ್ಳವನಾಗಿರಲಿ! ಪುತ್ರಕಳತ್ರಾದಿಮೋಹಬಂಧದಲ್ಲಿ ಸಿಕ್ಕಿರುವವರೆಗೆ ಅವನಿಗೆ ಕ್ಷೇಮವೆಂಬ ಮಾತೇ ಸುಳ್ಳು! ಅವನ ಮನಸ್ಸು ಅನವರತವೂ ಯಾವುದಾದರೂ ಒಂದು ಚಿಂತೆಯಿಂದ ಕುದಿಯುತ್ತಲೇ ಇರುವುದು!

ನಾರದಂ—ಆಹಾ! ಏನಿದು! ಭಗವದ್ಗುಣಾಮೃತಪಾನದಿಂದ ನಿತ್ಯಸಂತೋಷಿಯಾದ ನಿನಗೂ ಕುಟುಂಬಚಿಂತೆಯೆ ? ನಿನ್ನ ಚಿಂತೆಗೆ ಕಾರಣವೇನು ?

ರಾಜಂ—ಪೂಜ್ಯರೆ !

ಕಂ|| ಕ್ಷಿತಿಯೊಳಗೆಣಿಸಲ್ "ಕನ್ಯಾ |
ಪಿತೃತ್ವಮತಿ ದುಃಖ ಹೇತು" ವೆಂಬುದು ದಿಟಮೂ|
ರ್ಜಿತ ನಿಖಿಲ ಭೋಗಭಾಗ್ಯಾ !
ನ್ವಿತನಾಗಿಯುಮನಿಶದುಃಖಕೀಡಾಗಿಪ್ಪೆಂ || ೨೪||

ಪೂಜ್ಯರೆ! ನನಗೆ ಶ್ರೀಮತಿಯೆಂಬ ಕನ್ಯೆಯೊಬ್ಬಳಿರುವಳು. ನನ್ನ ಪುಣ್ಯಫಲವೇ ಮೂರ್ತೀಭವಿಸಿದಂತೆ,ಸಕಲಗುಣಸಂಪನ್ನೆಯಾದ ಆ ಕನ್ಯಾಮಣಿಗೆ ವಿವಾಹಕಾಲವು ಅತಿಕ್ರಮಿಸುತ್ತ ಬಂದಿರುವುದು. ದೇಶದೇಶಗಳನ್ನು ಹುಡುಕಿದರೂ ಅವಳ ರೂಪಗುಣಾದಿಗಳಿಗೆ ಅನುರೂಪನಾದ ವರನೊಬ್ಬನೂ ನಮ್ಮ ಕ್ಷತ್ರಿಯಕುಲದಲ್ಲಿ ಇದುವರೆಗೂ ಲಭಿಸಲಿಲ್ಲ! ಆಕೆಯ ವಿವಾಹವಿಷಯವಾದ ಚಿಂತೆಯು ನನ್ನನ್ನು ಬಹಳವಾಗಿ ಬಾಧಿಸುತ್ತಿರುವುದು.

(ಸುಂದರಕನೆಂಬ ರಾಯಭಾರಿಯು ಚಿತ್ರಪಟಗಳೊಡನೆ ಪ್ರವೇಶಿಸುವನು.)

ಸುಂದರಕ—ಮಹಾರಾಜನಿಗೆ ವಿಜಯವಾಗಲಿ ! ರಾಜೇಂದ್ರಾ ! ನಿನ್ನ ಆಜ್ಞಾನುಸಾರವಾಗಿ ನಾನು ಹೊರಟು ಸುತ್ತಿಬಂದ ದೇಶಗಳಲ್ಲಿ,

ನನಗೆ ಉತ್ತಮವೆಂದು ತೋರಿದ ಈ ಭಾವಚಿತ್ರಗಳನ್ನು ತಂದಿರುವೆನು. ಇವುಗಳನ್ನು ಪರಾಮರ್ಶಿಸಬೇಕು.

* ಇವನಂಗಾಧಿಪನಾತ್ಮರೂಪವಿಜಿತಾನಂಗಂ ಮಹೋತ್ತುಂಗ ವೈ।
ಭವನೀತಂ ರವಿತೇಜನೂರ್ಜಿತಯಶಂ ಕಾಂಭೋಜಭೂಪಾತ್ಮಜಂ ।
ಇವನಾವಾರಿಧಿವಿಸ್ತೃತಾವನಿತಲಂ ಪಾಂಚಾಲರಾಜೇಂದ್ರನಿಂ ।
ತಿವನುದ್ದಂಡಬಲಾಢ್ಯಪಾಂಡ್ಯನಿವರಂನೋಡಿಲ್ಲಿ! ನೀಂಚಿತ್ರದೊಳ್ ॥

ರಾಜಂ—(ಬೇಸರದಿಂದ) ಸುಂದರಕಾ! ಇವುಗಳನ್ನು ನನಗೆ ತೋರಿಸಿ ಫಲವೇನು ? ನಮ್ಮ ಶ್ರೀಮತೀ ಕುಮಾರಿಯು ನೋಡಿ ಮೆಚ್ಚಿದರಲ್ಲವೇ ನಾವು ಮುಂದಿನ ಪ್ರಯತ್ನಗಳನ್ನು ಮಾಡಬಹುದು! ಆದುದರಿಂದ ನೀನು ಈ ಚಿತ್ರಪಟಗಳನ್ನೆಲ್ಲಾ ತೆಗೆದುಕೊಂಡು ಹೋಗಿ ಕುಮಾರಿಗೆ ತೋರಿಸಿ, ಅವಳ ಅಭಿಪ್ರಾಯವನ್ನು ತಿಳಿದುಬಾ! ಅವಳ ರೀತಿಯನ್ನು ನೋಡಿದರೆ, ಅವಳು ಈ ಭೂಲೋಕದಲ್ಲಿ ಯಾರನ್ನೂ ಮೆಚ್ಚುವಹಾಗಿಲ್ಲ. ಅವಳಿಗೆ ಭಗವಂತನು ಯಾರನ್ನು ಪತಿಯನ್ನಾಗಿ ಸಂಕಲ್ಪಿಸಿರುವನೋ ಕಾಣೆನು ! ಇನ್ನು ನಮ್ಮ ವರಾನ್ವೇಷಣಪ್ರಯತ್ನವು ಸಾಕು ! ದೈವೇಚ್ಛೆಯಿದ್ದಂತಾಗಲಿ !

ನಾರದಂ— (ನಕ್ಕು) ರಾಜೇಂದ್ರಾ ! ಈ ಸ್ವಲ್ಪವಿಚಾರಕ್ಕಾಗಿ ನೀನು ಹೀಗೆ ಚಿಂತಿಸಬಹುದೆ? ಸೃಷ್ಟಿಕರ್ತನು ಮೊದಲು ವರನನ್ನು

ರಾಗ ತಾಳ.

* ಲಾಲಿಸೈ। ರಾಜವಂಶ। ಮೌಳಿ ಲೋಕಮಾನಿತ ನೀ ॥ಪ॥
ತೋಳಲಿ ದೇಶಂಗಳ । ತಂದೆನೀ ಚಿತ್ರಗಳ ॥ ಅ ॥
ಮಗಧಭೂಮಿ । ಪಾಲನಿವ । ನಗಣಿತಸೌ । ಭಾಗ್ಯದಿಂದ ।
ಜಗದಲ್ಲಿ ಸುವಿಖ್ಯಾತ । ಕೀರ್ತಿ ಸುಂದರಮೂರ್ತಿ ॥ ೧ ॥
ಇವನೆ ಕಾಂಭೋಜನು । ರವಿಸಮಾನತೇಜನು
ಭುವನವಿದಿತಪರಮವೈ । ಭವದಿ ರಾಜಿಸುವನು ॥ ೨ ॥
ಅಂಗಜಾ । ಕಾರನಿವ । ನಂಗಭೂಮಿಪತಿ ತನ್ನ ।
ತುಂಗವೀರ್ಯದಿಂದ ವೈರಿ । ಭಂಗವನ್ನೆಗೈದವನು ॥ ೩ ॥

ಸೃಷ್ಟಿಸಿದಮೇಲಲ್ಲವೇ ಕನ್ಯೆಯನ್ನು ಸೃಷ್ಟಿಸಿರಬೇಕು! ನಿನ್ನ ಮಗಳು ಹುಟ್ಟುವುದಕ್ಕೆ ಮೊದಲೇ ಅವಳಿಗೆ ತಕ್ಕ ವರನು, ಎಲ್ಲಿಯೋ ಹುಟ್ಟಿರಬೇಕು. ಈ ಸೂಕ್ಷ್ಮಾಂಶವನ್ನು ನೀನು ಯೋಚಿಸಬೇಡವೆ? ಭಗವಂತನು ಸಂಕಲ್ಪಿಸಿರುವ ವರನಾವನೆಂಬುದನ್ನು ತಿಳಿಯಲಾರದುದಕ್ಕಾಗಿ ಒಂದುವೇಳೆ ನೀನು ಚಿಂತಿಸಬಹುದೇಹೊರತು, ಈ ಪ್ರಪಂಚದೊಳಗಾಗಿ ನಿನ್ನ ಮಗಳಿಗೆ ತಕ್ಕ ವರನೇ ಇಲ್ಲವೆಂದು ಕೊರಗುವುದು ತಪ್ಪು! ಅಘಟಿತಘಟನಾಸಮರ್ಥನಾದ ಆ ಭಗವಂತನ ಸಂಕಲ್ಪವನ್ನು ಹೀಗೆಂದು ತಿಳಿಯುವುದು ಯಾರಿಗೆ ತಾನೇ ಸಾಧ್ಯವು! ಕೇಳು!

ವೃ|| ಜನನಿಯ ಗರ್ಭಕೋಟರದೆ ಮೆಯ್ಯುಡುಗಿರ್ಪ್ಪ ಕಿಶೋರಕಕ್ಕೆ ಕಾ|
ನನದೊಳನಾಕುಲಂ ಕೆಡೆದು ಮೆಯ್ಮರೆದಿರ್ಪ್ಪ ಮಹಾಹಿಗಳ್ಗೆ ಜೀ|
ವನಮನೆ ಕಲ್ಪಿಸುತ್ತೆ ಸುಖದಿಂ ಪರಿಪೋಷಿಸುತಿರ್ಪನಾವನಾ|
ವನರುಹನಾಭನೇ ಘಟಿಯಿಸಲ್ಕೆರವಂನೆರೆದುರ್ಘಟಕಾರ್ಯವರ್ಗಮಂ||

ಪರ್ವತಂ—ರಾಜಾ! ಗುಣವತಿಯಾದ ನಿನ್ನ ಕನ್ಯೆಗೆ ಈ ಮನುಷ್ಯಲೋಕದಲ್ಲಿಯೇ ತಕ್ಕ ವರನು ಲಭಿಸಲಾರನೆಂದು ಭ್ರಮಿಸುವೆಯಲ್ಲವೆ? ಅದು ನಿಜವಾಗಿದ್ದಪಕ್ಷದಲ್ಲಿ, ಆ ಶ್ರೀಹರಿಯೇ ತಾನಾಗಿ ವರರೂಪದಿಂದ ಬಂದು, ನಿನ್ನ ಮಗಳನ್ನು ವರಿಸಿದರೂ ವರಿಸಬಹುದು. ಆತನ ಸಂಕಲ್ಪವನ್ನಿದಿರುನೋಡುತ್ತಿರಬೇಕಾದುದೊಂದೇ ನಿನ್ನಕಾರ್ಯವು.

ರಾಜಂ—ಪೂಜ್ಯರೆ! ನಿಮ್ಮ ಹಿತವಾದಗಳನ್ನು ಶಿರಸಾವಹಿಸಿದೆನು.

(ಕಂಚುಕಿಯು ಪ್ರವೇಶಿಸಿ.)

ಕಂಚುಕಿ—ಮಹಾರಾಜನಿಗೆ ವಿಜಯವಾಗಲಿ! ಶ್ರೀಮತೀಕುಮಾರಿಯು, ಉತ್ತಮಪತಿಪ್ರಾಪ್ತಿಗಾಗಿ, ನಮ್ಮ ಗೃಹೋದ್ಯಾನದಲ್ಲಿ ವರ

ಲಕ್ಷ್ಮೀಪೂಜೆಯನ್ನು ನಡೆಸುತ್ತಿರುವಳು. ಆ ವ್ರತಸಮಾಪ್ತಿ ಕಾಲಕ್ಕೆ ಅತಿಥಿಗಳಾಗಿ ಬಂದಿರುವ ಮಹಾತ್ಮರಾದ ನಾರದ ಪರ್ವತರನ್ನೂ ಸಂಗಡ ಕರೆದುಕೊಂಡು ಮಹಾರಾಜನು ಅ ಲ್ಲಿಗೆ ಬರಬೇಕೆಂದು ದೇವಿಯರು ಅಪೇಕ್ಷಿಸುತ್ತಿರುವರು.

ರಾಜಂ—(ಸಂತೋಷದಿಂದ) ನಾವು ಅವಶ್ಯವಾಗಿ ಅಲ್ಲಿಗೆ ಬರುವೆವೆಂದು ತಿಳಿಸು ಹೋಗು ! (ನಾರದಪರ್ವತರನ್ನು ನೋಡಿ) ಪೂಜ್ಯರೆ ! ತಾವೂ ಅಲ್ಲಿಗೆ ಬಂದು, ನನ್ನ ಮಗಳನ್ನು ಆಶೀರ್ವದಿಸಿ ಹೋ ಗಬೇಕು,

ನಾರದಂ—ರಾಜೇಂದ್ರಾ ! ನಿನ್ನ ಇಷ್ಟಂತೆಯೇ ಆಗಲಿ !

ರಾಜಂ—(ಕಂಚುಕಿಯನ್ನು ಕುರಿತು) ಜಯಂಧರಾ ! ಮಹಾತ್ಮರಾದ ಈ ನಾರದ ಪರ್ವತರಿಬ್ಬರನ್ನೂ ನೀನು ಈಗಲೇ ಅಲ್ಲಿಗೆ ಕರೆದು ಕೊಂಡು ಹೋಗು ! ನಾನೂ ಈ ಉಡುಪುಗಳನ್ನು ಮಾರಿಸಿ, ಅಲ್ಲಿ ಪೂಜಾಸಮಯಕ್ಕೆ ಉಚಿತವಾದ ವಸ್ತ್ರಗಳನ್ನು ಧರಿಸಿ ಬರುವೆನು. ಶೀಘ್ರದಲ್ಲಿಯೇ ಬಂದುಸೇರುವೆನೆಂದು ದೇವಿಗೆ ತಿಳಿಸುಹೋಗು.

ಕಂಚುಕಿ—ಅಪ್ಪಣೆ (ಹೋಗುವನು.)

ತೆರೆಯು ಬೀಳುವುದು.

ಇದು ದ್ವಿತೀಯಾಂಕವು.

ಅಸ್ಥಾನ:—ಅರಮನೆಯ ಉದ್ಯಾನದ ಮುಂದಿನ ಬಯಲು.

(ಮನ್ಮಥನು, ಕಬ್ಬಿನ ಬಿಲ್ಲನ್ನೂ, ಪುಷ್ಪಬಾಣಗಳನ್ನೂ ಹಿಡಿದು, ಆತುರದಿಂದ ಪ್ರವೇಶಿಸುವನು.)

ಮನ್ಮಥಂ—ಆಹಾ! ಬಹಳ ಹೊತ್ತಿನಿಂದ ನಿರೀಕ್ಷಿಸುತ್ತಿದ್ದ ನನಗೆ ಈಗ ತಕ್ಕ ಅವಕಾಶವು ಸಿಕ್ಕಿರುವುದು! ಈಗ ಆ ಮುನಿಗಳು ಈ ಉದ್ಯಾನವನವನ್ನು ಪ್ರವೇಶಿಸುವರು. ಸಹಜವಾಗಿಯೇ ಇಲ್ಲಿನ ಸನ್ನಿವೇಶಗಳು ಎಂತಹ ಜಿತೇಂದ್ರಿಯರಿಗಾದರೂ ಕಾಮೋದ್ದೀಪನವನ್ನುಂಟುಮಾಡುವಂತಿರುವುವು. ಇದರಮೇಲೆ ನಾನೂ ನನ್ನ ಪ್ರಿಯಮಿತ್ರನಾದ ವಸಂತನನ್ನು ಈಗಲೇ ಪ್ರೇರಿಸಿ, ನಾರದನು ಅಲ್ಲಿಗೆ ಬರುವಷ್ಟರಲ್ಲಿ ಪುಷ್ಪಪಲ್ಲವಾದಿ ಸಮೃದ್ಧಿಗಳಿಂದ ಅದಕ್ಕೆ ಮತ್ತಷ್ಟು ಕಳೆಯೇರಿಸುವಂತೆ ಮಾಡುವೆನು. ಆ ಸನ್ನಿವೇಶವನ್ನು ಕಣ್ಣಿಂದ ನೋಡುವಾಗಲೇ ಸರ್ವೇಂದ್ರಿಯಗಳೂ ಕದಲುವುವು. ಅದೇಸಮಯದಲ್ಲಿ ನಾನೂ ಕಣ್ಮರೆಯಾಗಿದ್ದು, ಈ ನನ್ನ ಪುಷ್ಪಬಾಣಗಳನ್ನು ಪ್ರಯೋಗಿಸುವೆನು. ಅವನ ಮನಸ್ಸು ಹೇಗೆ ಮೋಹಾಕುಲವಾಗದಿರುವುದೋ ನೋಡುವೆನು!

ವೃ||ಲಲಿತೋದ್ಯಾನದ ಲಕ್ಷ್ಮಿಯಿಂ ಶುಕಪಿಕಪ್ರಧ್ವಾನದಿಂ ಶೀತಲಾ
ನಿಲಸುಸ್ಪರ್ಶನದಿಂ ಪ್ರಕೃಷ್ಟಸುಮನಸ್ಸಾಗಂಧ್ಯದಿಂ ಸತ್ಫಲಾ |
ವಳಿಯಿಂದಾಮುನಿಯಂಮರುಳ್ಗೊಳಿಸುತಂಪಂಚೇಂದ್ರಿಯಕ್ಷೋಭದಿಂ
ಸಲೆ ವೈರಾಗ್ಯದ ಬೀಡೆನಿಪ್ಪ ಮನದೊಳ್ ಸ್ತ್ರೀಮೋಹಮಂ ಬಿತ್ತುವೆಂ||

ಆಹಾ ! ದೇವೇಂದ್ರನು ನನಗೆ ಮಾಡಿದ ಗೌರವವನ್ನು ಸಹಿಸಲಾರದೆ, ದೇವಸಭೆಯಲ್ಲಿ ನನ್ನನ್ನು ನಿಂದಿಸಿ ಅವಮಾನಪಡಿಸಿದ ಆ ನಾರದಪರ್ವತರಿಬ್ಬರಿಗೂ ತಕ್ಕ ಪ್ರತಿಕ್ರಿಯೆಯನ್ನು ಮಾಡದೆ ತೀರದು! ಹರಿಹರಬ್ರಹ್ಮಾದಿಗಳನ್ನೂ ಮೋಹಪಾಶ

ದಲ್ಲಿ ಬಂಧಿಸಿ, ತ್ರೈಲೋಕ್ಯವಿಜಯಿಯೆಂಬ ಖ್ಯಾತಿಯನ್ನು ಹೊಂದಿದ ನಾನು ಆ! ಬಡಯೋಗಿಯನ್ನು ನನ್ನ ಕಾಮಪಾಶ ದಲ್ಲಿ ಕಟ್ಟಲಾರದೆಹೋದರೆ ಈ ಧನುರ್ಬಾಣಗಳನ್ನು ಹೊತ್ತು ಫಲವೇನು! ? ಇರಲಿ! ಅವರನ್ನು ಕ್ಷಣಮಾತ್ರವಾದರೂ ನನ್ನ ಕಾಮಪಾಶದಲ್ಲಿ ಬಂಧಿಸದೆ ಬಿಡುವವನಲ್ಲ! ಆ ನಾರದಪರ್ವತ ರಿಬ್ಬರನ್ನೂ ಈ ನನ್ನ ಪುಷ್ಪಬಾಣದಿಂದ ಏಕಕಾಲದಲ್ಲಿಯೇ ಮೋಹಗೊಳಿಸಿ ಕಾಮಪಾಶದಲ್ಲಿ ಕಟ್ಟಿ, ಅವರವರಲ್ಲಿಯೇ ಪರ ಸ್ಪರಮಾತ್ಸರ್ಯವನ್ನು ಹುಟ್ಟಿಸುವೆನು. ಇನ್ನು ಕಾಲವಿಳಂಬವು ಸಾಕು ! (ತೆರೆಯ ಕಡೆ ನೋಡಿ) ಓಹೋ! ಆ ಮುನಿಗಳಿಬ್ಬರೂ ಇದೇ ದಾರಿಯಾಗಿ ಬರುವಂತಿದೆ! ಇರಲಿ! ನಾನೂ ಮರೆಯಾಗಿ ಇಲ್ಲಿ ಕಾದಿರುವೆನು. ಹೊತ್ತು ಮೀರುವುದು! *

(ಹೋಗುವನು.)

ಆಸ್ಥಾನ:—ಅರಮನೆಯ ಗೃಹೋದ್ಯಾನ.

(ನಿಯಮನಿಷ್ಠಳಾದ ಶ್ರೀಮತಿಯು ಮಂತ್ರಕಲಶದ ಮುಂದೆ ಧೂಪದೀಪಾದಿ ಪೂಜಾಸಾಮಗ್ರಿಗಳೊಡನೆ ನಿಂತಿರುವಳು. ರಾಜ ಪತ್ನಿಯು ಅವಳ ಪಕ್ಕದಲ್ಲಿರುವಳು. ಸುಮಂಗಲಿಯರೂ. ವೃದ್ಧ ತಾಪಸಿಯರೂ ನೆರೆದಿರುವರು.)

---

* ರಾಗ - ನೋಟು - ತಾಳ.

ಇದೊ! ಪೋಗುವೆ' ನಿದೊ! ಪೋಗುವೆ। ನಿದೊ ಪೋಗಿ । ಸೇರುವೆ । ನಾ ಬೇಗ
ಸಾಗದ ಗರ್ವದೆ । ಬೀಗಿದ ನಾರದ '। ಯೋಗಿಯ ಮದವುಡುಗಿಸಲೀಗ ।
ಛಲವ ಮೀರಿ । ಬಲವ ತೋರಿ । ಮೆರೆವ ವೈರಿ। ವ್ರಜವ ಸಾರಿ।
ಭಂಗಿಪ ನನ್ನ ಶ। ರಾಳಿಯ! ಬಲುಮೆಗೆ । ನಿಲುವನೆ ಫಡಫಡ । ಬಡಜೋಗಿ
ಸ್ಸುರಾಸುರರ । ನಿರಾಕರಿಸಿ । ಪರಾಭವಿಪ । ಶರಾಸನದಿ ।। ೧ ।।
ಆ ಬ್ರಹ್ಮಮೌನಿಯ । ಭಕ್ತಿವಿರಕ್ತಿಗೆ। ಮುಕ್ತಿಯನೀಗಲೆ ।। ಕಲಿಸುವೆನು।। ೨।।



ಶ್ರೀಮತೀಕುಮಾರಿಯು ಗೃಹೋದ್ಯಾನದಲ್ಲಿ ವರಲಕ್ಷ್ಮೀಪೂಜೆಯನ್ನು ಮಾಡುತ್ತಿರುವಾಗ, ನಾರದಪರ್ವತರು ಬಂದುದು. ಆಗ ಮನ್ಮಥನು ಕಣ್ಮರೆಯಾಗಿಬಂದು ಅವರಮೇಲೆ ಪುಷ್ಪಬಾಣಗಳನ್ನು ಪ್ರಯೋಗಿಸುವುದು.

ರಾಜಪತ್ನಿ—ಕುಮಾರೀ ! ಗಂಧಪುಷ್ಪಾದಿಗಳಿಂದ ಕಲಶವನ್ನು ಪೂಜಿಸಿ, ಅಂಜಲಿಬಂಧಪೂರ್ವಕವಾಗಿ ನಿನ್ನ ಇಷ್ಟಸಿದ್ಧಿಯನ್ನು ಪ್ರಾರ್ಥಿಸು!

ಶ್ರೀಮತಿ—(ಪೂಜೆಯನ್ನು ಮುಗಿಸಿ ಕೈಮುಗಿದು ನಿಂತು ಪ್ರಾರ್ಥಿಸುವಳು.)

* ಕಂ|| ಕಮಲಮುಖಿ ! ಕಮಲಮಂದಿರೆ !
ಕಮಲೇಕ್ಷಣೆ! ಕಮಲಚರಣೆ ಕಮಲಸುಪಾಣೀ |
ಕಮಲಾಕ್ಷನರಸಿ! ತಾಯೇ
ಕಮಲೇ! ಕಾಮಿತವನಿತ್ತು ಪಾಲಿಪುದೆನ್ನಂ||

(ಕಂಚುಕಿಯು ಪ್ರವೇಶಿಸುವನು.)

ಕಂಚುಕಿ—ದೇವಿ! ಮಹಾರಾಜನು ಧರ್ಮಾಸನದಲ್ಲಿರುವನು! ದೇವರ್ಷಿಗಳಾದ ನಾರದಪರ್ವತರೊಡನೆ ಶೀಘ್ರದಲ್ಲಿಯೇ ಇಲ್ಲಿಗೆ ಬರುವುದಾಗಿರುವನು.

ರಾಜಪತ್ನಿ—(ಸಂತೋಷದಿಂದ) (ಶ್ರೀಮತಿಯನ್ನು ನೋಡಿ) ವತ್ಸೆ ಏಳೇಳು ಮಹಾತ್ಮರಾದ ನಾರದಪರ್ವತರಿಬ್ಬರೂ ಅತಿಥಿಗಳಾಗಿ ಬಂದಿರುವರು! ಲೋಕಪೂಜ್ಯರಾದ ಆ ಮಹರ್ಷಿಗಳಿಬ್ಬರೂ, ನಿನ್ನ ವ್ರತಸಮಾಪ್ತಿಕಾಲಕ್ಕೆ ಇಲ್ಲಿಗೆ ಬಂದುದು ನಮ್ಮ ಭಾಗ್ಯೋದ

---

* ಶ್ರೀರಾಗ - ಆದಿ - ತಾಳ.

*ಪಾಲಿಸಾ | ಪಂಕಜನಾಭನ ರಾಣಿ | ಗುಣಮಣಿ ಫಣಿವೇಣಿ||
ಪಾಲಿಸೆನ್ನ ಪ | ದ್ಮಾಲಯೆ ಸದಯೆ | ನೀಲವೇಣಿ ನವ | ಪಂಕಜಪಾಣಿ|
ಬಾಲಚಂದ್ರನಿಭ | ಫಾಲೆ ಸುಶೀಲೆ | ಪಾಲಿಸೆನ್ನ ನಿಗ | ಮಾಗಮವಿನುತೆ|| ೧||
ಇಂದೀವರಾಕ್ಷಿ| ಶ್ರೀವರಲಕ್ಷ್ಮಿ | ಜಗ | ದಾನಂದಕಟಾಕ್ಷಿ |
ಕುಂದಕುಸುಮಕು | ಟ್ಮಲನಿಭರದನೆ | ಮಂದಹಾಸರುಚಿ | ಸುಂದರವದನೆ|
ಮಂದರಾದ್ರಿಧರ | ಹೃದಯೋಲ್ಲಾಸಿನಿ|ವಂದಿಸಿ ನಿನ್ನನ್ನು|ಬೇಡುವೆ ಜನನಿ||೨||
ಭಾಮಾಮಂ| ಡಲಮಣಿ ಮಂಜುಲವಾಣಿ | ಭವಾರ್ಚಿತೆ ಕಲ್ಯಾಣಿ|
ಸಾಮಜಗಾಮಿನಿ | ಕಾಮಿತದಾಯಿನಿ | ಕಾಮಜನನಿ ಕಲಿ | ಕಲ್ಮಷನಾಶಿನಿ |
ಕಾಮಿತಾರ್ಥವಿ|ತ್ತೆನ್ನನುಕಾ ಕೋಮಲಾಂಗಿಯೆ | ಕರು|ಣಾಲಯೆ ತಾಯೆ||೩ ||

ಯವು ! ಇಷ್ಟರಲ್ಲಿ ನೀನು ಈ ಸುಮಂಗಲಿಯರಿಗೆ ಕುಂಕುಮ ತಾಂಬೂಲಗಳನ್ನು ಕೊಟ್ಟು ಸತ್ಕರಿಸಿ ಕಳುಹಿಸು! ಈ ವೃದ್ಧ ಸುಮಂಗಲಿಯರಿಗೆ ನಮಸ್ಕರಿಸಿ, ಅಮೋಘವಾದ ಅವರ ಆಶೀರ್ವಾದಕ್ಕೆ ಪಾತ್ರಳಾಗು! ವತ್ಸ ವಿಜಯಂಧರಾ ! ನೀನು ಹೋಗಿ ಇದೇ ಸುಸಮಯವೆಂದು ತಿಳಿಸಿ ಆ ಮಹರ್ಷಿಗಳನ್ನು ಈಗಲೇ ಕರೆದುಕೊಂಡುಬಾ! ಹೋಗು.

ಕಂಚುಕಿ—(ಹೋಗುವನು)

(ಶ್ರೀಮತಿಯು ಎಲ್ಲರಿಗೂ ಕುಂಕುಮತಾಂಬೂಲವನ್ನು ಕೊಟ್ಟು ನಮಸ್ಕರಿಸುವಳು. ಅವರಲ್ಲಿ ವೃದ್ಧತಾಪಸಿಯೊಬ್ಬಳು ಮುಂದೆ ಬಂದು ಆಶೀರ್ವದಿಸುವಳು.)

ವೃದ್ಧತಾಪಸಿ—

ಕಂ|| ಕುಲವೃದ್ಧರ ಕುಲಗುರುಗಳ
ಕುಲದೇವತೆಯರ ನಿರಂತರಾನುಗ್ರಹದಿಂ |
ಎಲೆ ಸುತೆ! ನೀಂ ದೀರ್ಘಸುಮಂ
ಗಲಿಯಾಗಿ ಚಿರಾಯುವಾಗಿ ಸುಖದಿಂ ಬಾಳೌ ||

(ಸುಮಂಗಲಿಯರೆಲ್ಲರೂ ಅಕ್ಷತೆಯನ್ನು ಹಾಕುವರು.
ಕಂಚುಕಿಯು ನಾರದಪರ್ವತರೊಡನೆ ಪ್ರವೇಶಿಸುವನು.)

ಕಂಚುಕಿ—ಪೂಜ್ಯರೆ ! ಇತ್ತ ದಯಮಾಡಿಸಬೇಕು ! ಇದೇ ಮಹಾರಾಜನ ವಸಂತೋದ್ಯಾನವು.

(ನಾರದ ಪರ್ವತರಿಬ್ಬರೂ ಪ್ರವೇಶಿಸಿ, ಉದ್ಯಾನದ ಸೌಂದರ್ಯವನ್ನು ನೋಡುತ್ತಿರುವಾಗ, ಮನ್ಮಥನು ಧನುರ್ಬಾಣಗಳೊಡನೆ ಹಿಂದಿನಿಂದ ಬಂದು, ಅವರಮೇಲೆ ಪುಷ್ಪಬಾಣಗಳನ್ನು ಕರೆಯುವನು.)

ನಾರದಂ—(ಪರ್ವತನ ಕೈಯನ್ನು ಹಿಡಿದು) ಮಿತ್ರನೆ ! ಈ ವನಸನ್ನಿವೇಶವನ್ನು ನೋಡಿದೆಯಾ ? ಇದು ಎಂತಹ ವಿರಕ್ತರಿಗೂ ವಿಷಯಾಭಿಲಾಷೆಯನ್ನು ಹುಟ್ಟಿಸುವಂತಿರುವುದು ನೋಡು !

ಪರ್ವತಂ—ಹೌದು ! ಇಲ್ಲಿಗೆ ಕಾಲಿಡುವಾಗಲೇ ನನ್ನ ಮನಸ್ಸಿಗೂ ಏನೋ ಒಂದುವಿಧವಾದ ವಿಕಾರವು ತೋರುತ್ತಿರುವುದು.

ನಾರದಂ—ಇದುವರೆಗೆ ನನ್ನಮನಸ್ಸಿಗೆ ಕೇವಲ ಅಸಹ್ಯವಾಗಿ ತೋರುತಿದ್ದ ಈ ಭೋಗಸಾಮಗ್ರಿಗಳೆಲ್ಲವೂ,ಇಲ್ಲಿ ಪ್ರಿಯವಾಗಿ ತೋರುತ್ತಿರುವುವಲ್ಲಾ : ಇದೇನಾಶ್ಚರ್ಯವು!

ಪರ್ವತಂ—ಈ ಕಾರಣದಿಂದಲ್ಲವೇ ವಿರಕ್ತರಾದ ಯೋಗಿಗಳು, ಇಂತಹ ಭೋಗಸ್ಥಾನಗಳನ್ನು ಕಣ್ಣೆತ್ತಿಯೂ ನೋಡದೆ, ನಿರ್ಜನವಾದ ಕಾಡಿನಲ್ಲಿದ್ದು ಕಾಲವನ್ನು ಕಳೆಯುತ್ತಿರುವರು.

ನಾರದಂ—ಹೌದು! ನಿಜವೆ! ಈ ಉದ್ಯಾನದ ಒಂದೊಂದು ಸನ್ನಿವೇಶವೂ ಮನಸ್ಸನ್ನಾಕರ್ಷಿಸುತ್ತಿರುವುದು.

* ಕಂ|| ಸುರುಚಿರಮಾಗಿಯುಮೀವನ
ಮರರೇ! ಪರಿಪರಿಯ ಕುಸುಮ ತರುಸಂಕುಲದಿಂ|
ಸ್ಮರನ ವಿವಿಧಾಸ್ತ್ರಶಾಲೆಯ
ತೆರದಿಂ ಕಾಮಿಗಳ ಮನಕೆ ಭೀಕರಮೆನಿಕುಂ ||

---

* ರಾಗ - ಕೇದಾರ - ರೂಪಕತಾಳ.

*ಅಂದಮಾಗಿ|ತೋರ್ಪುದೀ ವನವು | ನೆರೆ ನೋಡು ನೋಡು ನೀ || ನಂದ||
ಅಂದ|ಮಾದಳಿ | ವೃಂದ|ಝೇಂಕೃತಿ | ಯಿಂದ|ವೊಪ್ಪುವುದೀ |
ವರ | ಸುಂದ|ರೀವದ | ನೇಂದು|ಬಿಂಬದೊ |
ಲಂದ|ಮಾದರ | ವಿಂದಬೃಂದದಿ | ನಂದ || ೧||
ಶೀತ|ಲಾಂಬುಸ | ಮೇತ|ಮಾಗಿಹ | ವಾತ|ವೀಜನದಿಂ |
ಪರಿ| ಧೂತ|ಮಾಗಿಹ | ಕೇತಕೀಸುಮ |
ವ್ರಾತದಿಂದತಿ! ರಮ್ಯವಾದುದು|| ೨||
ಪಾರಿಜಾತದ | ಸೌರಭಂಗಳ | ಸಾರಮೀ ವನದೊಳ್|
ಮಿತಿ | ಮೀರಿ|ಸೌಖ್ಯವ | ನೀರ|ರೆದೆಗೆ |
ಬೀರು|ವಂತಿರೆ | ತೋರು|ತಿರ್ಪುದು | ಅಂದ || ೩||

ಪರ್ವತಂ—ಮಿತ್ರನೆ ! ನೀನು ಹೇಳಿದುದು ನಿಜ ! ಇಂತಹ ದಿವ್ಯೋದ್ಯಾನಗಳಲ್ಲಿ ವಿಹರಿಸತಕ್ಕ ಸಂಸಾರಿಗಳೇ ಭಾಗ್ಯಶಾಲಿಗಳೆಂದು ತೋರುತ್ತಿರುವುದು.

ನಾರದಂ—ಮಿತ್ರನೆ! ಕಾಮೋದ್ದೀಪಕಗಳಾದ ಈ ಸನ್ನಿವೇಶಗಳನ್ನು ನೋಡುತಿದ್ದಷ್ಟೂ ಮನಸ್ಸು ಕೆಟ್ಟುಹೋಗುವುದು. ಇವೆಲ್ಲವೂ ನಮ್ಮ ವಿರಕ್ತಿಮಾರ್ಗಕ್ಕೆ ಪ್ರತಿಬಂಧಕಗಳು. ಇವುಗಳನ್ನು ನೋಡುತ್ತಿರಬಾರದು. ಬಾ ! ಮುಂದಿನ ಕಾರ್ಯವನ್ನು ನೋಡುವೆವು. (ಸ್ವಲ್ಪಮುಂದೆ ಹೋಗಿ) ಆಹಾ ! ಈ ಕಮಲಸರೋವರದಲ್ಲಿ ಚಕ್ರವಾಕಪಕ್ಷಿಯು, ಆಗಾಗ ತನ್ನ ಪ್ರಿಯೆಯನ್ನು ಮುದ್ದಿಸುತ್ತ ಎಷ್ಟುಸಂತೋಷದಿಂದಿರುವುದು ನೋಡು !

ಪರ್ವತಂ—ನಾನೂ ಅದನ್ನೇ ನೋಡುತ್ತಿರುವೆನು. ಛೀ ! ವಿರಕ್ತರಾದ ನಮಗೆ ಇವುಗಳಿಂದೇನು! ಮುಂದೆ ಬಾ! (ಮುಂದೆ ಹೋಗಿ) ಮಿತ್ರನೆ ! ಈ ಲತಾಗೃಹವನ್ನು ನೋಡಿದೆಯಾ! ಇಲ್ಲಿ ಸ್ತ್ರೀಸಮೇತರಾಗಿ ವಿಹರಿಸತಕ್ಕವರು ಎಷ್ಟು ಧನ್ಯರೋ !

ನಾರದಂ—ಅಂತವರು ಪರಮಭಾಗ್ಯಶಾಲಿಗಳೆಂಬುದನ್ನು ಕೇಳಬೇಕೆ ?

ಪರ್ವತಂ—ಮಿತ್ರನೆ! ಇದೊಂದಾಶ್ಚರ್ಯವನ್ನು ನೋಡಿದೆಯಾ? ಇದೋ ! ಇತ್ತಲಾಗಿ ಒಂದು ದುಂಬಿಯು ಕಠಿನವಾದ ಒಂದು ಬಿದಿರನ್ನು ಕೊರೆದು ರಂಧ್ರಮಾಡುತ್ತಿರುವುದು. ಅದೋ ಅತ್ತಲಾಗಿ ಮತ್ತೊಂದು ದುಂಬಿಯು ಬಹಳ ಮೃದುವಾದ ಕಮಲದ ಮೊಗ್ಗಿನಲ್ಲಿ ಮಕರಂದಪಾನಕ್ಕಾಗಿ ಬಿದ್ದು, ಅಲ್ಲಿ ಸೆರೆಸಿಕ್ಕಿ ತಪ್ಪಿಸಿಕೊಂಡು ಬರಲಾರದೆ ತತ್ತಳಿಸುವುದು.

ನಾರದಂ—ಇದರಲ್ಲಿ ಆಶ್ಚರ್ಯವೇನಿದೆ ? ಯಾರಿಗಾದರೂ ಮೋಹಪಾಶವೆಂಬುದು ಅಷ್ಟು ಬಲವತ್ತರವಾದುದು! ಕೇಳು.

ಕಂ|| ತೆರತೆರದ ಬಂಧನಂಗಳೊ
ಳರರೇ! ಪಿರಿದಲ್ತೆ ಮೋಹಪಾಶದ ಬಂಧಂ
ಮರನಂ ಕೊರೆವ್ರೀಡಮಾರಡಿ
ಸೆರೆವೀಳ್ಗುಂ ಕಮಲಕೋಶ ಬಂಧದೊಳಲ್ತೆ ||

(ಇಷ್ಟರಲ್ಲಿ ಹಿಂದಿನಿಂದ ರಾಜನು ಪ್ರವೇಶಿಸುವನು.)

ರಾಜಂ.—ಪೂಜ್ಯರೆ! ಮುಂದೆ ದಯೆಮಾಡಿಸಿ ಈ ಪೀಠವನ್ನಲಂಕರಿಸಬೇಕು

(ನಾರದಪರ್ವತರಿಬ್ಬರೂ ಕುಳ್ಳಿರುವರು.

ರಾಜಂ—(ಶ್ರೀಮತಿಯನ್ನು ಕರೆದು) ಕುಮಾರೀ ! ಇದೋ ! ಲೋಕಪೂಜ್ಯರಾದ ನಾರದಪರ್ವತರಿಬ್ಬರೂ ನಮ್ಮ ಭಾಗ್ಯೋದಯದಿಂದ ನಿನ್ನ ವ್ರತಸಮಾಪ್ತಿಕಾಲಕ್ಕೆ ಸರಿಯಾಗಿ ಅತಿಥಿಗಳಾಗಿ ಬಂದಿರುವರು. ಇವರ ಪಾದಾಭಿವಂದನವನ್ನು ಮಾಡಿ, ಅವರ ಅಮೋಘವಾದ ಆಶೀರ್ವಾದಕ್ಕೆ ಪಾತ್ರಳಾಗು !

ರಾಜಂ—ಪೂಜ್ಯರೆ ! ಈಕೆಯೇ ನನ್ನ ಮಗಳು ! ಅನುಗ್ರಹಿಸಬೇಕು.

ನಾರದಂ—ಕುಮಾರೀ ! ಉತ್ತಮಪತಿಯನ್ನು ಹೊಂದುವಳಾಗು.

ಪರ್ವತಂ—ದೀರ್ಘಸುಮಂಗಲೀ ಭವ ! (ಕೈಯೆತ್ತಿ ಆಶೀರ್ವದಿಸುವರು.

(ಶ್ರೀಮತಿಯು ಎದ್ದು ನಿಂತಮೇಲೆ, ನಾರದಪರ್ವತರಿಬ್ಬರೂ ಅವಳ ರೂಪಾತಿಶಯವನ್ನು ನೋಡಿ ಬೆರಗಾಗುವರು)

ಪರ್ವತಂ—(ಸ್ವಗತಂ) ಆಹಾ ! ಏನೀ ಅದ್ಭುತಸೌಂದರ್ಯವು !

ಕಂ|| ಇವಳೇಂ ಮನ್ಮಥರಾಜನ
ನವಮೋಹನಮಂತ್ರವಿದ್ಯೆಯೋ! ಮಾನವರೂ !
ಪವನಾಂತ ವಿಷ್ಣುಮಾಯೆಯೊ!
ಭುವನತ್ರಯಭಾಗ್ಯಲಕ್ಷ್ಮಿಯೋ! ನಾನರಿಯೆಂ ||

ಇವಳ ರೂಪಲಾವಣ್ಯಗಳನ್ನು ನೋಡಿದರೆ ಸಾಮಾನ್ಯಮನುಷ್ಯಸ್ತ್ರೀಯಂತೆ ತೋರುವುದಿಲ್ಲ! ಇವಳ ಅಸಾಧಾರಣಸೌಂದ

ರ್ಯವು ನನ್ನಮನಸ್ಸನ್ನೂ ಮೋಹಪಾಶದಲ್ಲಿ ಕಟ್ಟಿಬಿಡುವಂತೆ ತೋರುವುದಲ್ಲಾ! ಆದರೇನು? ಇರಲಿ! ಕಾಲವಶದಿಂದ ಒ ಮ್ಮೊಮ್ಮೆ ಎಂತಹ ವಿರಕ್ತರಿಗಾದರೂ ಮನಸ್ಸು ಕಲಗುವು ದುಂಟು! ಆ ಸ್ಥಿತಿಯಲ್ಲಿಯೂ ಇಂದ್ರಿಯಚಾಪಲ್ಯಕ್ಕೊಳಗಾಗ ದಂತೆ ಮನಸ್ಸನ್ನು ತಡೆದಿಡುವುದಲ್ಲವೇ ಜಿತೇಂದ್ರಿಯರ ಲಕ್ಷ ಣವು? ಇದಕ್ಕಾಗಿ ಧೈರ್ಯಗೆಡಬಾರದು. (ಯೋಚಿಸಿ) ಆದರೇನು?

ಕಂ|| ಅವನಿಯೊಳಿಂತುತ್ತಮ ಭೋ
ಗ್ಯವಸ್ತುಗಳ್ ದೈವಸೃಷ್ಟಮಾಗಿರಲೆನ್ನಂ |
ತೆವೊಲೀ ವಿರಕ್ತಮಾರ್ಗಮ
ನವಲಂಬಿಪುದಕಟ! ಭಾಗ್ಯಹೀನತೆಯಲ್ತೆ ||

ಇಂತಹ ಭೋಗ್ಯವಸ್ತುಗಳಿರುವಾಗ ನನ್ನಂತೆ ಇಂದ್ರಿಯಜಯ ವೆಂಬ ವ್ರತವನ್ನು ಹಿಡಿಯುವುದು ಕೇವಲ ದೌರ್ಭಾಗ್ಯದ ಫಲವೆಂದೇ ನನಗೆ ತೋರುವುದು.!

(ಪ್ರಕಾಶಂ) ರಾಜೇಂದ್ರಾ! ಈಕೆಯೇ ನಿನ್ನ ಮಗಳೆ?

ರಾಜಂ—ಪೂಜ್ಯರೆ! ಹೌದು! ಇವಳೇ ನನ್ನ ಮಗಳು,

ನಾರದಂ—ರಾಜಾ! ಇವಳಿಗಾಗಿಯೇ ನಿನ್ನ ವರಾನ್ವೇಷಣಪ್ರಯತ್ನವಲ್ಲವೆ?

ರಾಜಂ—ಹೌದು! ಇವಳಿಗಾಗಿಯೇ!

ನಾರದಂ—ರಾಜಾ! ನೀನು ಈ ಕನ್ಯೆಗೆ ತಕ್ಕ ವರನಿಲ್ಲವೆಂದು ಚಿಂತಿಸುವುದು ಯುಕ್ತವೇ! ಇವಳ ರೂಪಲಾವಣ್ಯಸಂಪತ್ತಿಯನ್ನು ನೋಡಿದ ರೆ, ಈ ಭೂಲೋಕದಲ್ಲಿಯಾಗಲಿ, ಕೊನೆಗೆ ದೇವಲೋಕದಲ್ಲಿ ಯಾಗಲಿ, ಇವಳಿಗೆ ಅನುರೂಪನಾದ ವರನು ಸಿಕ್ಕಲಾರನೆಂದೇ ನನಗೂ ತೋರುವುದು. ಅಷ್ಟೇಕೆ!

ವೃ|| ಅನುಪಮದಿವ್ಯಮೂರ್ತಿ! ಶುಭಕೀರ್ತಿ! ಸುರಾಸುರಚಕ್ರವರ್ತಿಯೆಂ |
ದೆನಿಸಿದ ತನ್ಮಹಾಪುರುಷನಲ್ಲದೆ ಲೋಕದೊಳನ್ಯಪೂರುಷರ್ |
ತನುಜೆಯಿವಳ್ಗೆ ತಕ್ಕ ವರಸಾಮ್ಯಮನೊಂದುವರಿಲ್ಲ! ನಿಶ್ಚಯಂ |
ಮನದನುಮಾನವಿಲ್ಲದೆ! ಬಿಡಿನ್ನು! ವರಾನಯನಪ್ರಯತ್ನಮಂ ||

ಪರ್ವತಂ—ಹೌದು! ನಿಜ! ನನಗೂ ಹಾಗೆಯೇ ತೋರುವುದು.

ರಾಜಂ—ಪೂಜ್ಯರೆ ನಾನು ಆಗಲೇ ಆ ಪ್ರಯತ್ನವನ್ನು ಬಿಟ್ಟು ದೈವ ಸಂಕಲ್ಪವಿದ್ದಂತಾಗಲೆಂದು ಭಗವಂತನಮೇಲೆ ಭಾರವನ್ನಿಟ್ಟು ಸುಮ್ಮನಿರುವೆನು! ಹಾಗಿದ್ದರೂ ಲೋಕಪದ್ಧತಿಯನ್ನನುಸರಿಸಿ ಕನ್ಯೆಯರಿಗೆ ಅನುರೂಪನಾದ ವರನನ್ನು ಹುಡುಕಿ ವಿವಾಹಕಾರ್ಯವನ್ನು ನಿರ್ವಹಿಸತಕ್ಕ ಭಾರವು ತಾಯಿತಂದೆಗಳಮೇಲೆ ಬಿದ್ದಿರುವುದರಿಂದ, ಆವಳ ವಿವಾಹಚಿಂತೆಯು ನನ್ನನ್ನು ಬಿಡದೆ ಬಾಧಿಸುತ್ತಿರುವುದು.

ನಾರದಂ—ಹೌದು! ಅದೇನೋ ವಾಸ್ತವವೇ! ಹಾಗಿದ್ದರೂ ನೀನು ಇದಕ್ಕಾಗಿ ಚಿಂತಿಸಿ ಕೊರಗುವುದರಿಂದ ಫಲವೇನು? ರಾಜೇಂದ್ರಾ! ಇವಳು ನಿನ್ನ ಗರ್ಭದಲ್ಲಿ ಹುಟ್ಟಿದ್ದರೂ, ಯಾವಳೋ ದೇವಾಂಶದವಳಾಗಿರಬೇಕಲ್ಲದೆ ಮನುಷ್ಯಕನ್ಯೆಯಂತೆ ನನ್ನ ಮನಸ್ಸಿಗೆ ತೋರಲಿಲ್ಲ! ಓ ರಾಜೇಂದ್ರಾ! ನಿನ್ನ ಭಾಗ್ಯಪರಿಪಾಕವೇ ಈ ಕನ್ಯಾರೂಪದಿಂದ ಹುಟ್ಟಿರಬೇಕೇಹೊರತು ಬೇರೆಯಲ್ಲ!

ರಾಜಂ—ಪೂಜ್ಯರೆ! ಇವೆಲ್ಲವೂ ತಮ್ಮಂತಹ ಮಹಾತ್ಮರ ಅನುಗ್ರಹ ವಿಶೇಷವೆಂದೇ ಭಾವಿಸುವೆನು.

ರಾಜಪತ್ನಿ—ಲೋಕೋತ್ತರಸೌಂದರ್ಯವುಳ್ಳ ದೇವಾಂಗನೆಯರ ರೂಪವನ್ನೂ ಕೇವಲಹೇಯವಾಗಿ ಭಾವಿಸುತ್ತಿರುವ ನಿಮ್ಮಿಂದ ಈ ನಮ್ಮ ಕುಮಾರಿಯು ಇಷ್ಟು ಪ್ರಶಂಸಾರ್ಹಳಾದಮೇಲೆ ಇವಳು ಪರಮ ಭಾಗ್ಯವತಿಯೆಂಬುದರಲ್ಲಿ ಸಂದೇಹವೇನಿದೆ?

ನಾರದಂ—(ಭಯದಿಂದ ತನ್ನಲ್ಲಿ ತಾನು) ಅಯ್ಯೋ! ಇದೇನು? ಈ ರೂಪಕ್ಕೆ ಮರುಳಾಗಿ ನನ್ನನ್ನೇ ನಾನು ಮರೆತುಹೋದೆನಲ್ಲಾ! ನಿಜವಾಗಿಯೂ ಈಕೆಯ ರೂಪಲಾವಣ್ಯಗಳು ನನ್ನ ಮನಸ್ಸನ್ನು

ಕಲಗಿಸಿ ಬಿಟ್ಟುವು. ಹೀಗೆಯೇ ಪ್ರಸ್ತಾವವಶದಿಂದ ನನ್ನ ಮನೋಭಿಪ್ರಾಯವು ಬಾಯಿಂದ ಹೊರಬಿದ್ದರೆ, ಆಗ ನಾನು ಇವರ ಮುಂದೆ ಕೇವಲ ಹಾಸ್ಯಾಸ್ಪದನಾಗುವೆನು. ಬೇರೆ ಯಾವುದಾದರೂ ವ್ಯಾಜಾಂತರದಿಂದ ಅದನ್ನು ಮರೆಸುವೆನು.

(ಪ್ರಕಾಶಂ)—ರಾಜೇಂದ್ರಾ! ಅದು ಹಾಗಿರಲಿ! ದೇವಾಂಗನೆಯರ ಹೆಸರನ್ನೆತ್ತಿದುದರಿಂದ ನೆನಪಿಗೆ ಬಂದಿತು. ಈಗಲೇ ನಾನು ದೇವಸಭೆಯಿಂದ ಬರುವಾಗ,ಅಲ್ಲಿ ನಡೆದ ಒಂದು ಅಕ್ರಮವನ್ನು ನೋಡಿ ನನ್ನ ಮನಸ್ಸಿಗೆ ಬಹಳ ಪರಿತಾಪವುಂಟಾಯಿತು. ಕುಲ,ರೂಪ, ಯೌವನ, ಧನಸಂಪತ್ತಿ, ಪ್ರಭುತ್ವ, ಮುಂತಾದ ವೈಭವಗಳಲ್ಲಿ ಯಾವುದೊಂದಿದ್ದರೂ, ಮನುಷ್ಯನಿಗೆ ವಿವೇಕಜ್ಞಾನವನ್ನು ಕೆಡಿಸಿ, ಅವನನ್ನು ಉನ್ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡುವುದೆಂಬುದು ಸಹಜವು! ಈ ಸಮಸ್ತಭಾಗ್ಯಗಳೂ ನಿನ್ನಲ್ಲಿ ಒಂದಾಗಿ ಕಲೆತಿರುವಾಗಲೂ, ನೀನು ಸನ್ಮಾರ್ಗವನ್ನು ಬಿಡದೆ, ಜಿತೇಂದ್ರಿಯನಾಗಿ! ಕೇವಲ ವಿಷ್ಣುಭಕ್ತಿಪರಾಯಣನಾಗಿರುವುದು ಆಶ್ಚರ್ಯವನ್ನುಂಟುಮಾಡದಿರಲಾರದು.

ಪರ್ವತಂ—ಇದರಮೇಲೆ ರೂಪಲಾವಣ್ಯಗಳಿಂದ ಲೋಕವೋಹನೆಯಾದ ಇಂತಹ ಕನ್ಯಾರತ್ನವು ಭಾಗ್ಯಲಕ್ಷ್ಮಿಯಂತೆ ಮನೆಯಲ್ಲಿ.— (ಎಂದು ಅರ್ಧೋಕ್ತಿಯಲ್ಲಿ ಭಯದಿಂದ ತನ್ನಲ್ಲಿ ತಾನು.)ಆಹಾ! ಇದೇನು!ಅಸಂದರ್ಭವಾಗಿ ನಾನು ಈಕೆಯ ರೂಪವನ್ನು ವರ್ಣಿಸುವುದಕ್ಕಾರಂಭಿಸಿದೆನು! ಈ ವ್ಯಕ್ತಿಯು ಕಣ್ಣಿಗೆ ಬೀಳುತ್ತಿರುವವರೆಗೂ, ವೋಹಾಕುಲವಾದ ನನ್ನಮನಸ್ಸನ್ನು ತಡೆಯಲಾರೆನು. ಆದುದರಿಂದ ಇವರಿಬ್ಬರನ್ನೂ ಇಲ್ಲಿಯೇ ಮಾತಿಗೆ ತಗುಲಿಸಿಬಿಟ್ಟು,ನಾನು ಇಲ್ಲಿಂದ ಮೆಲ್ಲಗೆ ಸಡಿಲಿ, ಸ್ವಲ್ಪಹೊತ್ತಿನವರೆಗೆ ಬೇರೆಲ್ಲಿಯಾದರೂ ಹೋಗಿ ಬರುವುದೊಳ್ಳೆಯದು. ಹಾಗಿಲ್ಲದಿದ್ದರೆ, ಇವರೆಲ್ಲರ ಮುಂದೆ ನನ್ನ ಸ್ಥಿತಿಯು ಹಾಸ್ಯಾ

ಸ್ಪದವಾಗುವುದು. (ಪ್ರಕಾಶಂ) ಮಹಾರಾಜಾ! ಈಗ ನಾರದನು ಹೇಳತೊಡಗಿದ ಇಂದ್ರಸಭಾವೃತ್ತಾಂತವನ್ನು ನೀನು ಅವಶ್ಯವಾಗಿ ಕೇಳಬೇಕಾದುದೇ |

ರಾಜಂ—(ಆತುರದೊಡನೆ) ಮುನೀಂದ್ರಾ! ಅದೇನು? ಇಂದ್ರಸಭೆಯಲ್ಲಿ ನಡೆದ ಆಕ್ರಮವೇನು? (ಪರ್ವತನು ಉದ್ಯಾನವನ್ನು ನೋಡುತ್ತಿರುವವನಂತೆ ಕಣ್ಮರೆಯಾಗುವನು)

ನಾರದಂ—ಅದನ್ನೇ ಹೇಳುವೆನು ಕೇಳು! ದೇವೇಂದ್ರನು ನಿನ್ನೆರಾತ್ರಿ ಶಾರದೋತ್ಸವವನ್ನಾರಂಭಿಸಿ, ಅದಕ್ಕಾಗಿ ಇಷ್ಟಮಿತ್ರರೆಲ್ಲರನ್ನೂ ಕರೆಸಿದ್ದನು.

ರಾಜಂ—ನ್ಯಾಯವೇ!

ನಾರದಂ—ನಾವೂ ಅದನ್ನು ನೋಡಬೇಕೆಂಬ ಕುತೂಹಲದಿಂದ ಅಲ್ಲಿಗೆ ಹೋದೆವು. ಹೀಗೆ ಮಹಾಸಭೆಯು ನೆರೆದಿರುವಾಗ ಇಂದ್ರನು ಅದರಲ್ಲಿ ಮನ್ಮಥನ ಕಾರ್ಯನಿರ್ವಾಹನೈಪುಣ್ಯಕ್ಕೆ ಮೆಚ್ಚಿ, ಅವನನ್ನು ತನ್ನ ಅರ್ಧಾಸನದಲ್ಲಿ ಕುಳ್ಳಿರಿಸಿ, ಅವನ ಕಂಠಕ್ಕೆ ಮಂದಾರಮಾಲಿಕೆಯನ್ನು ಹಾಕಿ, ಅಗ್ರಪೂಜೆಯನ್ನೂ ಮಾಡಿದನು.

ರಾಜಂ—(ಆಶ್ಚರ್ಯದಿಂದ) ಏನು? ದೇವೇಂದ್ರನು ಈ ಅಲ್ಪಸಂತೋಷಕ್ಕಾಗಿ ಮನ್ಮಥನನ್ನು ತನ್ನ ಅರ್ಧಾಸನದಲ್ಲಿ ಕುಳ್ಳಿರಿಸಿದನೆ? ಮಹಾತ್ಮರಾದ ನೀವೆಲ್ಲರೂ ನೆರೆದಿರುವಾಗ, ಅವನಿಗೆ ಅಗ್ರಪೂಜೆ ಮಾಡಿದನೆ? ವಿಷಯಸುಖದಲ್ಲಿ ಮೈಮರೆತಿರುವಾಗ, ವಿವೇಕಜ್ಞಾನವು ಕೆಡುವುದೆಂಬ ಮಾತು ನಿಜವೇ! ಈ ಸಾಮ್ರಾಜ್ಯಪದವಿಯಲ್ಲಿ ನಾನಾಕಡೆಯಿಂದ ಇಂದ್ರಿಯಗಳನ್ನೆಳೆದು ಮನಸ್ಸನ್ನು ಕೆಡಿಸತಕ್ಕ ಭೋಗಸಾಮಗ್ರಿಗಳು ತುಂಬಿದ್ದರೂ, ತಮ್ಮಂತಹ ಮಹಾತ್ಮರ ಅನುಗ್ರಹದಿಂದಲೂ, ಭಗವತ್ಕೃಪೆಯಿಂದ

ಲೂ, ನನ್ನಮನಸ್ಸು ಹಾಗೆ ವೋಹಾಕುಲವಾಗದಿರಬೇಕೆಂಬು ದೇ ನನ್ನಕೋರಿಕೆ !

ನಾರದಂ—(ಲಜ್ಜೆಯಿಂದ ಸ್ವಗತಂ) ಆಯ್ಯೋ! ಈ ರಾಜನು ತನ್ನ ಮನಸ್ಸು ನಿಷ್ಕಲ್ಮಷವಾಗಿರುವುದಕ್ಕೆ, ನನ್ನ ಅನುಗ್ರಹವನ್ನು ಕಾರಣವಾಗಿ ಹೇಳುತ್ತಿರುವನು. ಈಗ ನಾನೇ ಕಾಮಪರವಶನಾಗಿ ಕಳವಳಿಸುತ್ತಿರುವೆನಲ್ಲಾ! (ಪ್ರಕಾಶಂ) ರಾಜೇಂದ್ರಾ! ಅಧರ ಮೇಲೆ ನನಗೆ ಅಲ್ಲಿ ನಿಲ್ಲುವುದಕ್ಕಿಷ್ಟವಿಲ್ಲದೆ, ಇಲ್ಲಿ ನಿನ್ನನ್ನು ನೋಡಿಹೋಗುವುದಕ್ಕಾಗಿ ಬಂದೆನು.

ರಾಜಂ—ಇದು ನನ್ನ ಭಾಗ್ಯವಿಶೇಷವು !

(ಕಂಚುಕಿಯು ಪ್ರವೇಶಿಸುವನು.)

ಕಂಚುಕಿ—ಮಹಾರಾಜನಿಗೆ ಜಯವಾಗಲಿ! ವ್ರತಾನಂತರದಲ್ಲಿ ಶ್ರೀಮತೀ ಕುಮಾರಿಯೊಡನೆ ತಮ್ಮನ್ನು ಗೃಹದೇವತಾಸಾನ್ನಿಧ್ಯಕ್ಕೆ ಕರೆತರುವಂತೆ ಕುಲಗುರುಗಳಾದ ವಸಿಷ್ಠರ ಆಜ್ಞೆಯಾಗಿರುವುದು

ನಾರದಂ—(ಸಂತೋಷದಿಂದ ಸ್ವಗತಂ) ಆಹಾ ದೈವಾಧೀನದಿಂದ ಇದೊಂದು ನೆಪವು ಏರ್ಪಟ್ಟಿತು ! ನಾನು ಈ ಕನ್ಯೆಯನ್ನು ನೋಡುತ್ತ, ಇಲ್ಲಿಯೇ ಇರುತ್ತಿದ್ದರೆ, ಕಾಮಪರವಶನಾದ ನನ್ನ ಮನೋಭಿಪ್ರಾಯವು ಹೇಗಾದರೂ ಹೊರಬಿದ್ದು, ನನ್ನ ಸ್ಥಿತಿಯು ಕೇವಲ ಹಾಸ್ಯಾಸ್ಪದವಾಗುವುದು. ಸ್ವಲ್ಪಹೊತ್ತಿನವರೆಗೆ ವಿವಿಕ್ತವಾಗಿದ್ದ ಹೊರತು ಈ ವ್ಯಾವೋಹವನ್ನು ತಪ್ಪಿಸುವುದು ಸಾಧ್ಯವಲ್ಲ- (ಪ್ರಕಾಶಂ) ರಾಜೇಂದ್ರಾ! ವ್ರತಸಮಾಪ್ತಿಯಲ್ಲಿ ಗೃಹದೇವತಾ ನಮಸ್ಕಾರವು ಅವಶ್ಯವಾಗಿ ನಡೆಸಬೇಕಾದ ಕಾರ್ಯವೇ! ಇನ್ನು ನೀವು ಹೊರಡಿರಿ !

ರಾಜಂ—ತಾವೂ ಸಂಗಡ ಬಂದು ಅಲ್ಲಿಯೇ ಗೃಹದಲ್ಲಿ ಆತಿಥ್ಯವನ್ನು ಸ್ವೀಕರಿಸಿ ಹೋಗಬೇಕು.

ನಾರದಂ—ಈಗಲೇ ನಾವು ದೂರಪ್ರಯಾಣದಿಂದ ಬಹಳವಾಗಿ ಬಳಲಿರುವೆವು. ಸ್ವಲ್ಪಹೊತ್ತು ಇಲ್ಲಿಯೇ ವಿಶ್ರಮಿಸಿಕೊಂಡಿದ್ದು, ನಾವಿಬ್ಬರೂ ಸೇರಿ ನಿನ್ನಲ್ಲಿಗೆ ಬರುವೆವು.

ರಾಜಂ—ತಮ್ಮ ಇಷ್ಟದಂತೆಯೇ ಆಗಲಿ ! ತಮ್ಮನ್ನು ಕರೆದುಕೊಂಡು ಹೊಗುವುದಕ್ಕಾಗಿ, ನಾನೇ ಮತ್ತೊಮ್ಮೆ ಇಲ್ಲಿಗೆ ಬರುವೆನು. ಅದುವರೆಗೆ ತಾವು ಇಲ್ಲಿ ಸುಖವಾಗಿ ವಿಶ್ರಾಂತಿಯನ್ನು ತೆಗೆದುಕೊಳ್ಳಬಹುದು! ಕುಮಾರೀ! ಬಾ! ಹೋಗುವೆವು,

(ನಾರದನೊಬ್ಬನುಹೊರತು ಉಳಿದವರೆಲ್ಲರೂ ಹೋಗುವರು).

ನಾರದಂ—(ಅತ್ತಿತ್ತ ತೆರೆಯಕಡೆಗೆ ನೋಡಿ ನಿಟ್ಟುಸಿರನ್ನು ಆಸನದಮೇಲೆ ಕುಳಿತು ಸ್ವಲ್ಪಹೊತ್ತಿನವರೆಗೆ ಚಿಂತಿಸಿ) ಆಹಾ! ಹೀಗೇಕೆ ನನ್ನ ಬುದ್ಧಿಯು ವಿಪರೀತವಾಗಿ ಪ್ರವರ್ತಿಸಿತು ! ಆ ಕನ್ಯೆಯು ಸಾಮಾನ್ಯಸ್ತ್ರೀಯಾಗಿದ್ದರೆ, ಎಂದಿಗೂ ಹೀಗಾಗಲಾರದು! ದೇವಸಭೆಯಲ್ಲಿರೂಪಲಾವಣ್ಯಗಳಿಂದ ಲೋಕಪ್ರಖ್ಯಾತರಾದ ರಂಭೆ, ಊರ್ವಶಿ, ತಿಲೋತ್ತಮೆ,ಮೊದಲಾದ ಅಪ್ಸರಸ್ತ್ರೀಯರಮುಂದೆ ನಿಂತು, ಅನೇಕಾವರ್ತಿ ಅವರ ಗಾನನರ್ತನಗಳನ್ನು ನೋಡುತ್ತಿ

ರಾಗ ಕಲ್ಯಾಣಿ—ರೂಪಕ—ತಾಳ

ಲೋಕಮೋಹನೆಯೀ । ಮಾನಿನೀ ಮನೋಹಾರಿಣಿ ॥
ನಾಕಲೋಕದ ನಾರಿಯೋ । ನಾಗಕನ್ಯೆಯೊ । ಲೋಕ॥ ೧॥

ಸರಸಿಜಾತ।ಸದೃಶನೇತ್ರಿ । ಸರಸಕೋಮಲ।ಮಂಜುಗಾತ್ರಿ ।
ನಿರುಪಮಲಾ।ವಣ್ಯಮೂರ್ತಿ । ನೀರೆ ನೀರಜಾನನೆ ॥ ೨॥

ಕುಂದಕುಟ್ಮ।ಲಾಭರದನೆ । ಮಂದಹಾಸ।ರುಚಿರವದನೆ ॥
ಸುಂದರೀಮಣಿ!ರತಿಯ ರೂಪವ । ಕುಂದುಗೊಳಿಪ।ಚಂದದಿಂದಲಿ ॥ ೩॥

ದ್ದಾಗಲೂ ಸ್ವಲ್ಪಮಾತ್ರವೂ ಕದಲದ ನನ್ನಮನಸ್ಸು, ಈ ಸ್ತ್ರೀವ್ಯಕ್ತಿಯನ್ನು ಒಂದಾವರ್ತಿ ನೋಡಿದಮಾತ್ರಕ್ಕೆ, ಹಿಂದೆ ಯಾವಾಗಲೂ ಕಂಡುಕಾಣದ ಕಾಮವಿಕಾರದಿಂದ ಕುದಿಯುತ್ತಿರುವುದಲ್ಲಾ! ಲೋಕದಲ್ಲಿ ನನಗಿಂತಲೂ ವಿರಕ್ತರಿಲ್ಲವೆಂದು ತಿಳಿದಿದ್ದ ನನ್ನ ಗರ್ವವನ್ನು ಮುರಿಯಬೇಕೆಂದೆಣಿಸಿ, ನನ್ನನ್ನು ಮೋಹಪಾಶದಲ್ಲಿ ಕಟ್ಟಿಡುವುದಕ್ಕಾಗಿ ಭಗವನ್ಮಾಯೆಯೇ ಈ ಆಕಾರದಿಂದ ನನ್ನ ಕಣ್ಣಿಗೆ ಕಾಣಿಸಿರಬಹುದೆ? ಹೌದು! ಹಾಗೆಯೇ ಇರಬೇಕು! ಸಂದೇಹವಿಲ್ಲ!

ಈಗ ನಾನು ಯಾವವಿಧದಲ್ಲಿ ನನ್ನಮನಸ್ಸನ್ನು ಶಾಂತಿಹೊಂದಿಸಲಿ! (ಚಿಂತಿಸುತ್ತ) ಯಾವ ವಿಧದಿಂದಲೂ ಸಾಧ್ಯವಲ್ಲ? ಆಹಾ! ಸಮಸ್ತಲೋಕಕ್ಕೂ ವಿಷಯವೈರಾಗ್ಯವನ್ನುಪದೇಶಿಸತಕ್ಕ ನಾನೇ ಹೀಗೆ ಕಾಮಪಾಶದಲ್ಲಿ ಕಟ್ಟುಬಿದ್ದಮೇಲೆ, ಈ ನನ್ನ ವೇಷಗಳೆಲ್ಲವೂ ಕೇವಲ ಕಪಟವೆನಿಸುವುದಿಲ್ಲವೆ?

ವೃ॥ಎನಗೀಶುದ್ಧಜಪಾಕ್ಷಮಾಲೆಕರದೊಳ್! ವ್ಯಕ್ತೋರ್ಧ್ವಪುಂಡ್ರಂಗಳಾ
ನನದೊಳ್! ಮಸ್ತಕದಲ್ಲಿ ದುರ್ಭರಜಟಾಭಾರಂ! ತಪೋವೇಷಮಿಂ ।
ತಿನಿತುಂ ಬಾಹ್ಯವಿಡಂಬಮಲ್ತೆ! ಮದನವ್ಯಾಮೋಹಿತಾತ್ಮಂಗೆ! ಕಾಂ ।
ಚನದಿಂದೊಪ್ಪಮನಿಟ್ಟಯಃ ಪ್ರತಿಮೆಯಂತಾಯ್ತನ್ನಬಾಳಕ್ಕಟಾ!॥

ಆಹಾ! ಮುಖ್ಯವಾಗಿ ಮನ್ಮಥನು ನನ್ನನ್ನು ಕಾಮಪಾಶಲ್ಲಿ ಕಟ್ಟಿಬಿಟ್ಟನು! ಜಿತೇಂದ್ರಿಯನೆಂದು ಲೋಕಪ್ರಸಿದ್ಧವಾದ ನನ್ನ ಖ್ಯಾತಿಗೆ ಕುಂದುಬಂದಿತು! ಎಲ್ಲರಿಗೂ ನಾನು ಹಾಸ್ಯಾಸ್ಪದನಾಗುವ ಕಾಲವೂ ಬಂದಂತೆ ತೋರುವುದು! ಆ ಪರ್ವತನೂ ನನ್ನಂತೆ ಇವಳ ರೂಪವನ್ನು ಕಣ್ಣಾರೆ ನೋಡಿದವನಾದರೂ,ಅವನು,ಈ ದುರವಸ್ಥೆಗೊಳಗಾದಂತೆ ತೋರಲಿಲ್ಲ!ವಿರಕ್ತಿಮಾರ್ಗಕ್ಕೆ ನನ್ನನ್ನೇ ಮೇಲುಪಜ್ಕ್ತಿಯೆಂದು ತಿಳಿದು, ನನ್ನಮಾರ್ಗವನ್ನು ಹಿಂಬಾಲಿಸುತಿದ್ದ ಆ ಪರ್ವತನು, ಈಗ ನನ್ನ ಸ್ಥಿತಿಯನ್ನು ತಿಳಿ

ದರೆ ಎಷ್ಟು ಹಾಸ್ಯಮಾಡುವನು! ಈಗ ಯಾವ ಉಪಾಯದಿಂದ ಮೋಹಾಕುಲವಾದ ಈ ಮನಸ್ಸನ್ನು ನಿಗ್ರಹಿಸಲಿ! (ಚಿಂತೆಯಿಂದ ನಿಟ್ಟುಸಿರನ್ನು ಬಿಟ್ಟು)ಯಾವ ಉಪಾಯದಿಂದಲೂ ಸಾಧ್ಯವೆಂದು ತೋರಲಿಲ್ಲ! ಅಥವಾ ಇದಕ್ಕಾಗಿ ನಾನೇಕೆ ಚಿಂತಿಸಬೇಕು! ಆ ಭಗವಂತನ ಸಂಕಲ್ಪಕ್ಕನುಸಾರವಾಗಿ ಮನುಷ್ಯನ ಮನಸ್ಸು ಪ್ರೇರಿಸಲ್ಪಡುವುದೇಹೊರತು, ಯಾವ ಪ್ರಾಣಿಗಳೂ, ಯಾವವಿಷಯದಲ್ಲಿಯೂ ಸ್ವತಂತ್ರವಲ್ಲ! ಇದುವರೆಗೆ ಎಂತಹ ವಿಷಯಗಳಲ್ಲಿಯೂ ಮನಸ್ಸುಕಲಗದೆ ಜಿತೇಂದ್ರಿಯನಾಗಿದ್ದ ನನಗೆ, ಈಗ ಈ ಕಾಮೋದ್ರೇಕವುಂಟಾಗಬೇಕಾದರೆ, ಇದು ದೈವವ್ಯಾಪಾರವಲ್ಲದೆ ಬೇರೇನು? ಮುಂದೆ ನನಗೋ, ಅಥವಾ ಇತರರಿಗೋ ಕ್ಷೇಮಕ್ಕಾಗಿಯೇ ಹೀಗೆ ನನ್ನ ಬುದ್ಧಿಯು ಚಲಿಸಿದ್ದರೂ ಇರಬಹುದು! ಅಥವಾ ಮನುಷ್ಯನ ಬುದ್ಧಿಯನ್ನು ಕೆಡಿಸುವುದಕ್ಕೆ ಇದಕ್ಕಿಂತಲೂ ಹೀನವಾದ ಎಷ್ಟೋ ಕಾರಣಗಳುಂಟು. ಈಗ ನನ್ನ ಸ್ಥಿತಿಯು ಹಾಗಲ್ಲ ! ಮತ್ತೊಬ್ಬನಿಗೆ ವಿವಾಹಿತೆಯಾದ ಕನ್ಯೆಯನ್ನು ನೋಡಿ ನಾನು ಕಾಮಿಸಿದವನಲ್ಲ! ಅಥವಾ ನನಗೆ ಮೊದಲಿದ್ದ ಒಬ್ಬಳು ಪತ್ನಿಯನ್ನು ವಂಚಿಸಿ, ಬೇರೊಬ್ಬಳನ್ನು ಕಾಮಿಸಿದವನಲ್ಲ! ಆ ರಾಜಕುಮಾರಿಯು ಅವಿವಾಹಿತಳಾದ ಕನ್ಯೆ! ನಾನೋ ಬ್ರಹ್ಮಚಾರಿ ! ಈ ವಿವಾಹದಲ್ಲಿ ತಪ್ಪೇನು? ಪರಸ್ತ್ರೀಕಾಮುಕರಾಗಿ ಪ್ರವರ್ತಿಸುವವರಿಗಿಂತಲೂ ನನ್ನ ಸ್ಥಿತಿಯೇ ಮೇಲಲ್ಲವೆ? ಮನುಷ್ಯನ ಮನಸ್ಸನ್ನು ಉನ್ಮಾರ್ಗದಲ್ಲಿ ಪ್ರವರ್ತಿಸದಂತೆ ತಡೆದಿಡುವುದಕ್ಕೆ ಗೃಹಸ್ಥಾಶ್ರಮವೇದುರ್ಗವೆಂದು ಹೇಳುವರು. ಆದರೆ ಇದುವರೆಗೆ ವಿರಕ್ತನಾಗಿ, ತಾಪಸವೇಷದಿಂದಿದ್ದು, ಈಗ ಸ್ತ್ರೀಕಾಮುಕನಾಗಿ ಪ್ರವರ್ತಿಸುವುದು ದೋಷವಲ್ಲವೆ? ಎಂದರೆ, ಇದಕ್ಕೆ ಹಿಂದೆ ಎಷ್ಟೋ ನಿದರ್ಶನಗಳುಂಟು! ಮಹಾತಪಸ್ವಿಯಾದ ವಿಶ್ವಾಮಿತ್ರನು, ಮೇನಕೆಯೆಂಬ ವೇಶ್ಯೆಯ

ನ್ನು ಪರಿಗ್ರಹಿಸಲಿಲ್ಲವೆ! ಕಾಮಕ್ರೀಡೆಯಲ್ಲಿದ್ದ ಮತ್ಸ್ಯದಂಪತಿಗಳನ್ನು ನೋಡಿ ಸೌಭರಿಯು, ಕಾಮವಶನಾಗಿ ಕುಟುಂಬಧರ್ಮಕ್ಕೆ ಆಸೆಪಡಲಿಲ್ಲವೆ? ತಪೋನಿರತನಾಗಿದ್ದ ಚ್ಯವನನು, ಸುಕನ್ಯೆಯನ್ನು ಪರಿಗ್ರಹಿಸಲಿಲ್ಲವೆ?! ನಾನುಮಾತ್ರ ದೋಷಿಯಾಗುವೆನೆ? ಇದಲ್ಲದೆ ಇಂತಹ ಭೋಗಾನುಭವದಿಂದಲೂ ಎಷ್ಟೋಗುಣವುಂಟು! ಮನುಷ್ಯನಿಗೆ, ತನ್ನ ಪಾಪಪುಣ್ಯಕರ್ಮಗಳೆಲ್ಲವನ್ನೂ ಅನುಭವಿಸಿ ಕಳೆದಹೊರತು ಮೋಕ್ಷವಿಲ್ಲವೆಂದು ಹೇಳುವರು. ಆದುದರಿಂದ ಮೋಕ್ಷಾರ್ಥಿಗಳು ಪಾಪಕ್ಕೆ ಹೆದರುವಂತೆ, ಪುಣ್ಯಕ್ಕೂ ಹೆದರಲೇಬೇಕು! ಇದುವರೆಗೆ ಇಹಲೋಕಸುಖವನ್ನೇ ಕಾಣದೆ, ಗ್ರಾಮೈಕರಾತ್ರನಾಗಿ ಸಂಚರಿಸಿ, ಪಡಬಾರದ ಕಷ್ಟಗಳನ್ನು ಪಟ್ಟು, ಅದರಿಂದ ನನ್ನ ಪಾಪಶೇಷವೆಲ್ಲವೂ ಕಳೆದುಹೋಯಿತು ಈಗ ಕುಟುಂಬಭೋಗದಿಂದ ಪುಣ್ಯಶೇಷವೂ ಕಳೆದುಹೋಗಲಿ! ಆ ಕನ್ಯೆಯನ್ನು ಕೈಸೇರಿಸಿಕೊಳ್ಳಬೇಕಾದುದೇ ಈಗಿನ ಅವಶ್ಯಕಾರ್ಯವು. ಅದಕ್ಕೇನುಪಾಯವನ್ನು ಮಾಡಲಿ! ನಾನಾಗಿಯೇ ಬಾಯಿಬಿಟ್ಟು ರಾಜನನ್ನು ಕೇಳಿಬಿಡಲೆ? ಛೀ? ಛಿ! ನಾಚಿಕೆಯಿಲ್ಲದೆ ಹೇಗೆ ಕೇಳಲಿ! ಆ ರಾಜನು ಈ ನನ್ನ ಜಡೆಯನ್ನೂ, ಈ ಜಪಮಣಿಯನ್ನೂ ನೋಡಿ ನಾನು ಪರಮವಿರಕ್ತನೆಂದೂ, ಯಾವಾಗಲೂ ಹರಿಧ್ಯಾನಪರನೆಂದೂ ತಿಳಿದು, ನನ್ನಲ್ಲಿ ಎಷ್ಟೋ ಗೌರವವನ್ನು ತೋರಿಸುತ್ತಿರುವನು. ಈ ವೇಷದಿಂದ ನಾನು ಅವನಮುಂದೆ ನಿಂತು "ನಿನ್ನಮಗಳನ್ನು ನಾನು ಮೋಹಿಸಿದೆ" ನೆಂದರೆ, ಅವನು ನನ್ನನ್ನು ಎಷ್ಟು ತುಚ್ಛವಾಗಿ ಕಾಣುವನು? ಪರ್ವತನಾದರೂ ಈ ವಿಷಯವನ್ನು ಕೇಳಿದರೆ, ಅವನು ನನ್ನನ್ನು ಎಷ್ಟು ಹೇಳನಮಾಡುವನು? ನಾನು ಲೋಕವನ್ನು ವಂಚಿಸುವುದಕ್ಕಾಗಿಯೇ ಈ ವೇಷವನ್ನು ಧರಿಸಿದಂತಾಯಿತಲ್ಲಾ! ವಾಸ್ತವದಲ್ಲಿ ಈಗ ನನ್ನ ಸ್ಥಿತಿಯನ್ನು ನೋಡಿದರೆ,—

ಕಂ|| ಜಪಮಾಲೆ ಕಾಮಮಂತ್ರವ |
ಜಪಿಸಲ್ಕೆನಗಾಯ್ತು! ತಲೆಗೆ ಸುತ್ತಿದ ಜಡೆಯುಂ |
ನೃಪಕನ್ಯಾ ಮೋಹಜ್ವರ |
ವಿಪುಲಶಿರೋವ್ಯಥೆಗೆ ತಲೆಯ ಕಟ್ಟಾಯ್ತುಕಟಾ! ||

ಇದಕ್ಕೇನು ಮಾಡಲಿ! (ಎಂದು ಸ್ವಲ್ಪಹೊತ್ತಿನವರೆಗೆ ಚಿಂತಿಸುತಿದ್ದು) ಇನ್ನು ಚಿಂತಿಸುವುದರಿಂದ ಪ್ರಯೋಜನವಿಲ್ಲ! ಈಗ ಈ ನನ್ನ ಚಪಲಬುದ್ಧಿಯನ್ನು ತಿರುಗಿಸುವುದೇನೋ ಸಾಧ್ಯವಲ್ಲ! ಪ್ರಯತ್ನಿಸಿದಹೊರತು ಕೆಲಸವಾಗುವುದಿಲ್ಲ! ನಾನಾಗಿಯೇ ಹೋಗಿ ರಾಜನಿಗೆ ನನ್ನ ಉದ್ದೇಶವನ್ನು ತಿಳಿಸಿಬಿಡುವೆನು! (ಆತುರದಿಂದ ಮುಂದೆ ಹೋಗಿ) ಛೀ! ಈ ತುಚ್ಛವಿಷಯವನ್ನು ಲಜ್ಜೆಯಿಲ್ಲದೆ ಹೇಗೆ ಕೇಳಲಿ! (ಹಿಂದೆ ಸರಿಯುವನು. ತೆರೆಯಲ್ಲಿ ಹೆಜ್ಜೆಯ ಸದ್ದಾಗುವುದನ್ನು ಕೇಳಿ ಸಂಭ್ರಮದಿಂದ) ಓಹೋ ರಾಜನೇ ಇಲ್ಲಿಗೆ ಬರುವಂತಿದೆ! ಈಗೇನುಮಾಡಲಿ! ಮಾಡುವುದೇನು? ಏನಾದರೂ ಆಗಲಿ! "ಕಾಮಾತುರಾಣಾಂ ನ ಭಯಂ ಲಜ್ಜಾ!" ಈಗ ಲಜ್ಜೆಯನ್ನೂ, ಭಯವನ್ನೂ ಬಿಟ್ಟಹೊರತು, ಕಾರ್ಯಸಾಧನೆಯಾಗಲಾರದು! ಕೇಳಿಯೇ ಬಿಡುವೆನು.

(ರಾಜನು ಪ್ರವೇಶಿಸುವನು.)

ರಾಜಂ—ಪೂಜ್ಯರೆ! ವಂದಿಸುವೆನು. ವಸಿಷ್ಠಾಜ್ಞೆಯಂತೆ ಶ್ರೀಮತೀಕುಮಾರಿಯನ್ನು ದೇವತಾಸಾನ್ನಿಧ್ಯದಲ್ಲಿ ಬಿಟ್ಟುಬಂದೆನು. ಅಲ್ಲಿ ನಡೆಯಬೇಕಾದ ಅಭ್ಯುದಯಕಾರ್ಯಗಳೆಲ್ಲವೂ ನಡೆಯುವುವು. ಇನ್ನು ತಾವು ಅರಮನೆಗೆ ಬಂದು ಆತಿಥ್ಯವನ್ನು ಸ್ವೀಕರಿಸಬಹುದಷ್ಟೆ!

ನಾರದಂ—(ಸ್ವಗತಂ) ರಾಜನಿಗೆ ನನ್ನ ಉದ್ದೇಶವನ್ನು ರಹಸ್ಯವಾಗಿ ತಿಳಿಸುವುದಕ್ಕೆ ತಕ್ಕ ಅವಕಾಶವು ಸಿಕ್ಕಿರುವುದು. ಕೇಳಿ ಬಿಡುವೆನು. (ಪ್ರಕಾಶಂ) ರಾಜೇಂದ್ರಾ!

ರಾಜಂ—ಪೂಜ್ಯರೆ ! ಅನುಗ್ರಹಿಸಬೇಕು.

ನಾರದಂ —(ಸ್ವಗತಂ) ಅಯ್ಯೋ! ಲಜ್ಜೆಯು ಬಾಧಿಸುತ್ತಿರುವುದು. ಏನು ಮಾಡಲಿ! (ಎಂದು ಯೋಚಿಸುತ್ತ ಸುಮ್ಮನೆ ನಿಲ್ಲುವನು.)

ರಾಜಂ—ಮುನೀಂದ್ರಾ!ತಮ್ಮ ಮನಸ್ಸು ಏನೋ ಚಿಂತಾಕುಲವಾಗಿರುವ ಹಾಗಿದೆ! ದೇಹಕ್ಕೇನೂ ಆಯಾಸವಿಲ್ಲವಷ್ಟೆ ?

ನಾರದಂ—(ಸ್ವಗತಂ)ಇನ್ನು ಸುಮ್ಮನಿರುವುದಕ್ಕಿಲ್ಲ!ಏನಾದರೂ ಉಪಾಯಾಂತರದಿಂದ ನನ್ನ ಉದ್ದೇಶವನ್ನು ತಿಳಿಸಿಬಿಡುವೆನು.(ಪ್ರಕಾಶಂ)ರಾಜಾ! ನನಗೆ ಬೇರೆ ಚಿಂತೆಯೇನಿರುವುದು?ನಿನ್ನ ಚಿಂತೆಯೇ ನನ್ನ ಚಿಂತೆ! ನಿನ್ನ ಸ್ಥಿತಿಗಾಗಿಯೇ ನನ್ನ ಮನಸ್ಸು ಪರಿತಪಿಸುತ್ತಿರುವುದು.

ರಾಜಂ—ಪೂಜ್ಯರೆ! ಅದೇನು? ನನಗಾಗಿ ತಾವು ಪರಿತಪಿಸಬೇಕಾದ ಕಾರಣವೇನು ?

* ನಾರದಂ—ಬೇರೇನಿದೆ? ನೀನು ನಿನ್ನ ಕುಮಾರಿಯ ವಿವಾಹಪ್ರಯತ್ನಕ್ಕಾಗಿ ಈಗ ವಹಿಸುತ್ತಿರುವ ಶ್ರಮವನ್ನು ನೋಡಿ ನನಗೆ ಬಹಳ ಪರಿತಾಪವಾಗುವುದು. ಮೊದಲು ನಾನೇ ನಿನಗೆ ಧೈರ್ಯವನ್ನು ಹೇಳಿ ಸಮಾಧಾನಪಡಿಸಿದವನಾದರೂ, ಈಗೀಗ ನಿನ್ನ ಮಗಳ ವಿವಾಹವಿಷಯವಾದ ಚಿಂತೆಯು ನಿನಗಿಂತಲೂ ನನಗೆ ಹೆಚ್ಚೆಂದು ತಿಳಿ !

ರಾಗ. ತಾಳ.

* ನಾರದಂ:—ರಾಜನೆ! ಲಾಲಿಸು । ರಾಜಿತತೇಜ
ರಾಜಾಧಿರಾಜ ಸಂ । ಶ್ರಿತಸುರಭೂಜ ॥ ಪಲ್ಲವಿ॥
ಪೊಡವಿಪ ನಿನ್ನಯ । ಮನದ ವಿಷಾದವ
ಬಿಡಿಸುವ ತವಕವೆ । ಬಾಧಿಪುದೆನ್ನ ॥ ೧ ॥

ರಾಜಂ:—ಪರಮತಪೋಧನ । ಪಾವನಸುಗುಣ
ಸುರಗಣವಂದಿತ । ಶುಭಕರಚರಣಾ ॥ ಪಲ್ಲವಿ॥

ರಾಜಂ—ಅದಕ್ಕೆ ತಡೆಯೇನು ? ಸಾಧುಗಳ ಸ್ವಭಾವವೇ ಇದು ! ಇತರರ ಸುಖದುಃಖಗಳಿಗೆ ಸಮಭಾಗಿಗಳಾಗುವುದೇ ಮಹಾತ್ಮರ ಲಕ್ಷಣವಲ್ಲವೆ ?

ನಾರದಂ—ನಾವಿಬ್ಬರೂ ಸುಮ್ಮನೆ! ನಮ್ಮನಮ್ಮ ಮನಸ್ಸಿನಲ್ಲಿ ಕೊರಗುವುದರಿಂದ ಫಲವಿಲ್ಲ! ಕಾರ್ಯಸಾಧನೆಗೆ ತಕ್ಕ ಉಪಾಯವನ್ನು ನೋಡಬೇಕಲ್ಲವೆ ?

ರಾಜಂ—ಹೌದು! ನಿಜವೆ! ಆದರೆ ನಮ್ಮ ಯತ್ನವೇನಿದೆ ?

ನಾರದಂ—ರಾಜಾ! ಹಾಗಲ್ಲ! ಇದುವರೆಗೆ ನಾನು ಏಕಾಕಿಯಾಗಿ ಇಲ್ಲಿ ಕುಳಿತು ಯೋಚಿಸಿದುದರಲ್ಲಿ, ನನ್ನ ಮನಸ್ಸಿಗೆ ಒಂದುಪಾಯವು ತೋರಿತು.

ರಾಜಂ—(ಸಂತೋಷದಿಂದ) ಪೂಜ್ಯರೆ! ಅದೇನೆಂಬುದನ್ನು ಅನುಗ್ರಹಿಸಿದರೆ ಶಿರಸಾವಹಿಸಿ ನಡೆದುಕೊಳ್ಳುವೆನು.

ನಾರದಂ—ನಿನ್ನ ಮಗಳಿಗೇನೋ ಇದುವರೆಗೂ ತಕ್ಕ ವರನು ಲಭಿಸಲಿಲ್ಲ!

ರಾಜಂ—ಹೌದು! ಅದಕ್ಕಾಗಿಯೇ ನನ್ನ ಮನಸ್ಸು ಚಿಂತಿಸುತ್ತಿರುವುದು.

ನಾರದಂ—ನಿನ್ನ ಕುಮಾರಿಯ ರೂಪಲಾವಣ್ಯಾದಿಗಳನ್ನು ನೋಡಿದರೆ, ಮುಂದೆಯಾದರೂ ನಿಮ್ಮ ಕ್ಷತ್ರಿಯಕುಲದಲ್ಲಿ ಅವಳಿಗೆ ತಕ್ಕ ವರನು ಸಿಕ್ಕುವುದೇನೋ ದುರ್ಲಭವು ! ಅವಳ ವಿವಾಹವಿಷಯ

ಕರುಣೆಯೊಳಿನ್ನನು । ಕಡೆಹಾಯ್ಸುವರೆ ।
ಪರಮಧನ್ಯನಾ । ನಲ್ಲವೆ! ಧರೆಯೊಳ್ ॥ ೨ ॥

ನಾರದಂ:—ತೊರೆಯುತ ನಿನಗಾಗಿ । ನಿಜನಿಯಮವನು
ವರಿಸುವೆ ನಿನ್ನಯ । ವರತನುಜೆಯನಾಂ ॥ರಾಜನೆ॥ ೩॥

ರಾಜಂ:—ಪ್ರಿಯವಚನಕೆ ನಾಂ । ಪ್ರೀತಿಯನಾಂತೆನು ।
ಪರಿಹಾಸವೇತಕೆ । ಪರಮತಪೋನಿಧಿ ॥ ೪॥

ನಾರದಂ:—ಪರಿಹಾಸವಲ್ಲವು । ಪರಮಾರ್ಥವಿದು ಕೇಳ್
ಪರಗುಪಕಾರವೆ । ಪಾವನಧರ್ಮವು ॥ ರಾಜನೆ॥ ೫॥

ದಲ್ಲಿ ನಿನಗುಂಟಾಗಿರುವ ವ್ಯಾಕುಲತೆಯನ್ನು ಹೇಗಾದರೂ ತಪ್ಪಿಸಬೇಕೆಂದು ನನಗೆ ತೋರಿತು. ಆದುದರಿಂದ ಈಗ ನಾನು,ನನ್ನ ಸನ್ಯಾಸಧರ್ಮವನ್ನಾದರೂ ಪರಿತ್ಯಜಿಸಿ, ನಾನೇ ನಿನ್ನ ಮಗಳನ್ನು ವಿವಾಹಮಾಡಿಕೊಂಡು, ನನ್ನ ತಪೋಬಲದಿಂದ ಅವಳನ್ನು ರಾಜಮಹಿಷಿಯರಿಗಿಂತಲೂ ಉತ್ತಮವಾದ ಸ್ಥಿತಿಯಲ್ಲಿರಿಸಬೇಕೆಂಬ ಹಠವು ನನ್ನ ಮನಸ್ಸಿಗೆ ಹುಟ್ಟಿರುವುದು. ಇದಕ್ಕೆ ನಿನ್ನ ಅಭಿಪ್ರಾಯವೇನು ಹೇಳು !

ರಾಜಂ—(ನಗುತ್ತ) ಪೂಜ್ಯರೆ! ತಮಗೆ ನನ್ನಲ್ಲಿರತಕ್ಕ ಅಸಾಧಾರಣವಾತ್ಸಲ್ಯವು, ತಾವು ಮನಸ್ಸಿನಿಂದಲೂ ಸ್ಮರಿಸಬಾರದ ವಿಷಯವನ್ನೂ ಬಾಯಿಂದಾಡಿಸುವಂತಿದೆ! ಹೀಗೆ ಸ್ವಾರ್ಥತ್ಯಾಗಪೂರ್ವಕವಾಗಿಯಾದರೂ ಪರರಿಗೆ ಉಪಕಾರವನ್ನು ಮಾಡಬೇಕೆಂದು ಬಯಸುವುದು ತಮ್ಮಂತಹ ಮಹಾತ್ಮರಿಗೆ ಸಹಜಗುಣವಾಗಿದೆ! ತಮ್ಮ ಈ ಉಪಚಾರೋಕ್ತಿಗಳೇ ನನ್ನ ಮನಸ್ಸಿಗೆ ಎಷ್ಟೋ ಆಪ್ಯಾಯನವನ್ನುಂಟುಮಾಡಿರುವುವು.

ನಾರದಂ—ರಾಜೇಂದ್ರಾ ! ನಾನು ಕೇವಲ ಉಪಚಾರೋಕ್ತಿಗಾಗಿ ಈ ಮಾತನ್ನು ಹೇಳಿದೆನೆಂದೆಣಿಸುವೆಯೇನು!ವಾಸ್ತವವಾಗಿಯೇ ಹೇಳುತ್ತಿರುವೆನು.

ರಾಜಂ—ಪೂಜ್ಯರೆ! ನಾನು ನನ್ನ ಮಗಳ ವಿವಾಹವಿಷಯವಾಗಿ ಆತುರಪಡುತ್ತಿರುವುದನ್ನು ನೋಡಿ, ನನ್ನ ಮನಸ್ಸನ್ನು ಪರೀಕ್ಷಿಸುವುದಕ್ಕಾಗಿ ಹಂಗಿಸುವಂತಿದೆ! ಪರಮವಿರಕ್ತಶಿಖಾಮಣಿಗಳಾದ ತಮ್ಮಂತವರು, ಈ ಸಂಸಾರಮಾರ್ಗವನ್ನು ಎಷ್ಟು ಹೇಯವಾಗಿ ಎಣಿಸಿರುವಿರೆಂಬುದನ್ನು ನಾನು ಕಾಣೆನೆ? ಈ ವಿಚಾರವು ಸಾಕು! ಆತಿಥ್ಯಕ್ಕಾಗಿ ದಯೆಮಾಡಿಸಬೇಕು !

ನಾರದಂ—(ಸ್ವಗತಂ) ಇವನಿಗೆ ಇನ್ನೂ ನನ್ನ ಮಾತಿನಲ್ಲಿ ನಂಬಿಕೆಯಿಲ್ಲ! ಯಾವವಿಧದಿಂದ ನಂಬಿಕೆಯನ್ನು ಹುಟ್ಟಿಸಲಿ!ಇರಲಿ! ಬೇರೊಂ

ದುಪಾಯವನ್ನುಮಾಡುವೆನು. (ಪ್ರಕಾಶಂ)ರಾಜಾ ! ನಾನು ನನ್ನ ಮನಃಪೂರ್ವಕವಾದ ಅಭಿಪ್ರಾಯವನ್ನು ತಿಳಿಸಿದರೂ, ನೀನು ಬೇರೆಬೇರೆ ನೆವದಿಂದ ಅದಕ್ಕೆ ವಿರುದ್ಧವಾಗಿ ಹೇಳುವುದನ್ನು ನೋಡಿದರೆ, ಈ ತಾಪಸವೇಷದಲ್ಲಿರುವ ನನಗೆ ನಿನ್ನ ಮಗಳನ್ನು ವಿವಾಹಮಾಡಿಕೊಡುವುದಕ್ಕೆ ಇಷ್ಟವಿಲ್ಲದಂತೆ ತೋರುವುದು. ನಿಜವಾಗಿಯೂ ನಿನ್ನ ಮಗಳಲ್ಲಿ ನನಗೆ ಹುಟ್ಟಿದ ಮೋಹ—(ಎಂದು ಅರ್ಧೋಕ್ತಿಯಲ್ಲಿ ನಿಲ್ಲಿಸಿ)ಅನುಗ್ರಹಬುದ್ಧಿಯಿಂದಲೇ ನಾನು ಹೇಳಿದೆನು. ಇದರಮೇಲೆ ನಿನ್ನ ಇಷ್ಟದಂತೆ ನಡೆಸು. (ಎಂದು ಕೋಪದಿಂದ ಹಿಂತಿರುಗುವನು-)

ರಾಜಂ—(ಭಯಾಶ್ಚರ್ಯಗಳೊಡನೆ, ಸ್ವಗತಂ) ಓಹೋ!ಇದೇನು! ಇವರು ಹೀಗೆ ಉಪಕ್ರಮಿಸಿದರು? ಇದುವರೆಗೆ ಇವರು ಹೇಳಿದುದೆಲ್ಲವೂ ಕೇವಲವಿನೋದಾರ್ಥವೆಂದು ತಿಳಿದಿದ್ದೆನು. ನಿಜವಾಗಿಯೇ ಅವರಿಗೆ ವಿವಾಹಾಭಿಲಾಷೆಯು ಹುಟ್ಟಿದಂತಿದೆ. ಒಂದುವೇಳೆ ನನ್ನ ಮನಸ್ಸನ್ನು ಪರೀಕ್ಷಿಸುವುದಕ್ಕಾಗಿ ಹೀಗೆ ಹೇಳಿರಬಹುದೆ ? ಹೇಗಿದ್ದರೂ ಇರಲಿ! ಇವರ ಕೋಪಕ್ಕೆ ಪಾತ್ರನಾಗಬಾರದು. (ಪ್ರಕಾಶಂ) ಮುನೀಂದ್ರಾ! ಕ್ಷಮಿಸಬೇಕು ! ಬೇರೆವಿಧವಾಗಿ ಭಾವಿಸಕೂಡದು! ನಿಜವಾಗಿಯೂ ತಾವು ನನ್ನ ಕನ್ಯೆಯನ್ನು ಬಯಸುವಪಕ್ಷದಲ್ಲಿ, ಅದು ನನ್ನ ಭಾಗ್ಯೋದಯವಲ್ಲವೆ ? ಕನ್ಯಾದಾನಕ್ಕೆ ತಮಗಿಂತಲೂ ಸತ್ಪಾತ್ರವೆಲ್ಲಿ ದೊರೆಯುವುದು! ಅವಶ್ಯವಾಗಿ ಪರಿಗ್ರಹಿಸಬಹುದು ! ನಾಳೆಯೇ ಅಗ್ನಿಸಾಕ್ಷಿಕವಾಗಿ ಧಾರೆಯೆರೆದು ಕೊಡುವೆನು.

ನಾರದಂ—(ಸಂತೋಷದಿಂದ ರಾಜನ ಕೈಯನ್ನು ಹಿಡಿದು) ರಾಜೇಂದ್ರಾ! ಇಷ್ಟೇ ನನ್ನ ಉದ್ದೇಶವು!ಆದರೆ "ಶ್ರೇಯಾಂಸಿ ಬಹುವಿಘ್ನಾನಿ" ಎಂಬಂತೆ, ಅನುಕೂಲಕಾರ್ಯಗಳಿಗೆ ಅನೇಕವಿಘ್ನಗಳುಂಟಾಗುವುದು ಸಹಜವು. ಆದುದರಿಂದ ಕಾರ್ಯನಿರ್ವಾಹವಾಗುವವರೆ

ಗೆ! ಈ ರಹಸ್ಯವನ್ನು ಹೊರಗೆ ಬಿಡದೆ ಶುಭಕಾರ್ಯವನ್ನು ಶೀಘ್ರ ದಲ್ಲಿ ನಡೆಸಿಬಿಡಬೇಕು.

ರಾಜಂ—ತಮ್ಮ ಇಷ್ಟದಂತೆಯೇ ಆಗಲಿ ! ನಾಳೆಯೇ ನಡೆಸಿಬಿಡುವೆವು. ಆದರೆ ಕನ್ಯೆಯರ ವಿವಾಹವಿಷಯದಲ್ಲಿ ತಾಯಿಯ ಅನುಮತಿಯು ಬಹಳ ಮುಖ್ಯವಾದುದರಿಂದ, ನನ್ನ ಪತ್ನಿಯಲ್ಲಿ ಈ ವಿಷಯವನ್ನು ತಿಳಿಸಿ ಅವಳನ್ನೂ ಒಪ್ಪಿಸಿ ವಿವಾಹಲಗ್ನವನ್ನು ನಿರ್ಣಯಿಸುವೆನು.

ನಾರದಂ—ರಾಜೇಂದ್ರಾ!ನಿನ್ನ ಪತ್ನಿಯು ಎಂದಿಗೂ ಈಕಾರ್ಯಕ್ಕೆ ಸಮ್ಮತಿಸದಿರಲಾರಳು! ಮುಖ್ಯವಾಗಿ "ಮಾತಾ ವಿತ್ತಂ" ಎಂಬಂತೆ ಹೆಣ್ಣುಮಕ್ಕಳು ಭಾಗ್ಯವಂತರಾಗಿ ಬಾಳುತ್ತಿರಬೇಕೆಂಬುದೇ ತಾಯಿಯ ಕೋರಿಕೆ!ಅದಕ್ಕೆ ಲೋಪವಿಲ್ಲದೆ ನೋಡಿಕೊಳ್ಳುವ ಭಾರವು ನನಗಿರಲಿ!ನನ್ನ ಯೋಗಬಲದಿಂದಲೇ ನಿನ್ನ ಮಗಳಿಗೆ ಸಮಸ್ತಸೌಭಾಗ್ಯಗಳನ್ನೂ ಕೈಗೂಡಿಸುವೆನು. ಬೇಕಾದರೆ ನಾನೇ ಹೋಗಿ ನಿನ್ನ ಪತ್ನಿಗೆ ಈ ವಿಷಯದಲ್ಲಿ ನಂಬಿಕೆಯನ್ನೂ ಹುಟ್ಟಿಸಿ ಬರುವೆನು. ಇನ್ನೇನೂ ಸಂದೇಹವಿಲ್ಲವಷ್ಟೆ ?

ರಾಜಂ—ಸಂದೇಹವೇನಿದೆ? ಇನ್ನು ತಾವು ದಯಮಾಡಿಸಿ ಈಗಿನ ಆತಿಥ್ಯವನ್ನು ಸ್ವೀಕರಿಸಬಹುದಷ್ಟೆ?

ನಾರದಂ—ರಾಜೇಂದ್ರಾ ! ಸೂರ್ಯನು ಗಗನಮಧ್ಯವರ್ತಿಯಾಗಿರುವನು. ನಾನು ಪರ್ವತನನ್ನೂ ಕರೆದುಕೊಂಡು ನದಿಗೆ ಹೋಗಿ ಮಾಧ್ಯಾಹ್ನಿಕವನ್ನು ತೀರಿಸಿಕೊಂಡು ಬರುವೆನು! ನೀನು ಹೊರಡು! (ರಾಜನೂ,ನಾರದನೂ ಬೇರೆಬೇರೆ ಕಡೆಗೆ ಹೊರಡುವರು. ನಾರದನು ಪುನಃ ಪ್ರವೇಶಿಸಿ) ನಾನು ಪರ್ವತನಿಗಾಗಿ ನಿರೀಕ್ಷಿಸುವುದು ಸರಿಯಲ್ಲ!ಈಗ ನಾನು ಅವನೊಡನೆ ಸೇರಿದರೆ,ನನ್ನ ಮನೋಭಾವವು ಹೇಗಾದರೂ ಅವನಿಗೆ ತಿಳಿದುಹೋಗುವುದು. ಅವನು ನಿಜವಾಗಿಯೂ ನನಗೆ ಹಿತೈಷಿಯಾದುದರಿಂದ, ಈ ನನ್ನ ಬುದ್ಧಿ

ಮೋಹವನ್ನು ತಪ್ಪಿಸುವುದಕ್ಕಾಗಿ ಯತ್ನಿಸುವನು. ನನ್ನ ಮುಂದೆಯೇ ನನ್ನನ್ನು ಹಾಸ್ಯಮಾಡುವುದಲ್ಲದೆ, ರಾಜಸಿಗೂ ರಹಸ್ಯವಾಗಿ ಬೋಧಿಸಿ, ಈ ಕಾರ್ಯಕ್ಕೆ ವಿಘಾತವನ್ನುಂಟುಮಾಡಬಹುದು- ಕಾರ್ಯಸಾಧನೆಯಾಗುವವರೆಗೆ ಅವನ ಕಣ್ಣಿಗೂ ಬೀಳದೆ, ಬೇರೆಲ್ಲಿಗಾದರೂ ಹೊರಟುಹೋಗುವುದೇ ಮೇಲು! ಆದುದರಿಂದ ಅವನು ಇಲ್ಲಿಗೆ ಹಿಂತಿರುಗಿಬರುವಷ್ಟರಲ್ಲಿ ಬೇರೆ ದಾರಿಯಿಂದ ಕಣ್ಮರೆಯಾಗಿ ಹೊರಟುಹೋಗುವೆನು.

(ಹೋಗುವನು.)

(ಇತ್ತಲಿಂದ ಪರ್ವತನು ಪ್ರವೇಶಿಸುವನು.)

ಪರ್ವತಂ—(ಉದ್ಯಾನವನ್ನು ಸುತ್ತಿ ನೋಡಿ) ಓಹೋ! ಇದೇನು? ಆಗಲೇ ಎಲ್ಲರೂ ಹೊರಟುಹೋಗಿರುವರು! ನಾರದನೂ ಅವರ ಜತೆಯಲ್ಲಿಯೇ ಅರಮನೆಗೆ ಹೋಗಿರಬಹುದು! ಇರಲಿ! ನಾನೂ ಅದನ್ನೇ ಬಯಸುತಿದ್ದೆನು. ಈಗ ನಾನು ಬೇರೊಬ್ಬರ ಕಣ್ಣಿಗೆ ಮರೆಯಾಗಿರುವುದೇ ಮೇಲೆಂದು ತೋರುವುದು. ಇಲ್ಲದಿದ್ದರೆ ನನ್ನ ಸ್ಥಿತಿಯು ಕೇವಲಹಾಸ್ಯಾಸ್ಪದವಾಗುವುದು. ಅದರಲ್ಲಿಯೂ ನಾರದನಿಗೆ ನನ್ನ! ಸ್ಥಿತಿಯು ತಿಳಿದರೆ ನನ್ನನ್ನು ಸುಮ್ಮನೆ ಬಿಡುವನೆ? ಆಹಾ! ಜಿತೇಂದ್ರಿಯನೆಂದರೆ ಆ ನಾರದನಿಗೇ ಸಲ್ಲುವುದು! ಅವನೂ ಆ ಕನ್ಯಾರತ್ನವನ್ನು ಕಣ್ಣಿಂದ ನೋಡಿದವನಾದರೂ, ನನ್ನಂತೆ ಮೋಹಪಾಶಕ್ಕೆ ಸಿಕ್ಕಿಬೀಳದೆ ಧೈರ್ಯದಿಂದಿರುದನ್ನು ನೋಡಿ ನನಗೇ ಆಶ್ಚರ್ಯವಾಗುವುದು! ಯಾವಯಾವ ವಿಧದಿಂದಲೂ ಈ ನನ್ನ ಚಪಲಬುದ್ಧಿಯನ್ನು ತಪ್ಪಿಸುವುದಕ್ಕೆ ನನಗೆ ಸಾಧ್ಯವಲ್ಲ! ಇದಕ್ಕೇನು ಮಾಡಲಿ! ಆಹಾ! ಲೋಕದಲ್ಲಿ ಎಷ್ಟೇ ಕ್ರೂರವ್ಯಾಧಿಗಳನ್ನಾದರೂ ತಕ್ಕ ಚಿಕಿತ್ಸೆಗಳಿಂದ ಪರಿಹರಿಸಬಹುದು! ಎಷ್ಟೇ ಕ್ರೂರಗ್ರಹಗಳನ್ನಾದರೂ ಮಂತ್ರಬಲದಿಂದ ನೀಗಿಸಬಹುದು! ಈ ಮನ್ಮಥಪಿಶಾಚವು ಹಿಡಿದಮೇ

ಲೆ ಅದನ್ನು ಬಿಡಿಸುವುದಕ್ಕೆ ಯಾವ ಉಪಾಯವೂ ಸಾಧ್ಯವೆಂದು ತೋರಲಿಲ್ಲ.

ಕಂ|| ಮಣಿಮಂತ್ರೌಷಧಮಂ ಕಡೆ
ಗಣಿಪುದು! ಜಪ ಹೋಮ ದಾನ ದೇವಾರ್ಚನೆಯಂ|
ಗಣನೆಗೆ ತಾರದು ! ಸುಮಹೋ
ಲ್ಬಣಮೀ ಮನ್ಮಥಪಿಶಾಚಜನಿತಾವೇಶಂ ||

ನಿಜವಾಗಿಯೂ ಆ ಮನ್ಮಥನ ಮಹಿಮೆಯೇ ಮಹಿಮೆ! ತ್ರೈಲೋಕ್ಯವಿಜಯಿಯೆಂದರೆ ಅವನೊಬ್ಬನಿಗೇ ಸಲ್ಲುವುದು! ಏಕೆಂದರೆ,

ಕಂ|| ಹರನಾತ್ಮಫಾಲನೇತ್ರದಿ
ನುರುಪಿದೊಡೇಂ ಸ್ಮರನ ದೇಹಮಂ ! ತದ್ವೀರ್ಯ !
ಸ್ಫುರಣಮನಿನಿಸುಂ ನಂದಿಸ
ಲರದನೆ? ದುರ್ದಮನೆ! ಮದನನಾಗ್ಗ್ರಂ ಧರೆಯೊಳ್||

ತ್ರಿಲೋಕಸಂಹಾರಿಯಾದ ರುದ್ರನಿಗೇ ಅಶಕ್ಯವಾಗಿರುವಾಗ, ಆ ಮನ್ಮಥನ ಪ್ರಾಬಲ್ಯವನ್ನು ಮುರಿಯಬೇಕೆಂದರೆ ನನ್ನಿಂದ ಸಾಧ್ಯವೆ? ಎಂದಿಗೂ ಇಲ್ಲ ! ಈ ನನ್ನ ಬುದ್ಧಿವ್ಯಾಮೋಹವನ್ನು ತಗ್ಗಿಸಬೇಕೆಂದರೆ ಆ ಕನ್ಯೆಯನ್ನು ಕೈಸೇರಿಸಿಕೊಳ್ಳಬೇಕಾದುದೊಂದಲ್ಲದೆ ಬೇರೆ ಉಪಾಯವಿಲ್ಲ ! ಇದಕ್ಕೇನು ಮಾಡಲಿ ! ನನ್ನ ಮನೋಗತವನ್ನು ನಾನಾಗಿಯೇ ಹೋಗಿ ರಾಜನಿಗೆ ತಿಳಿಸಿಬಿಡಲೆ? ಹೇಗೆ ತಿಳಿಸಲಿ! ಲಜ್ಜೆಯು ಬಾಧಿಸುತ್ತಿರುವುದಲ್ಲಾ! ಇದಲ್ಲದೆ ನನ್ನ ಮಿತ್ರನಾದ ನಾರದನೂ ಈಗ ರಾಜನ ಸಂಗಡಲೇ ಇರುವನು. ಈ ವಿಚಾರವು ಅವನಿಗೆ ತಿಳಿದರೆ, ನನ್ನನ್ನು ಎಷ್ಟು ಹಾಸ್ಯಮಾಡುವನು ! (ಆಲೋಚಿಸಿ) ಇರಲಿ ! ಇದಕ್ಕೆ ಬೇರೊಂದುಪಾಯವನ್ನು ಮಾಡುವೆನು. ಈಗ ನಾನು ನೆಟ್ಟಗೆ ರಾಜಪತ್ನಿಯಬಳಿಗೆ ಹೋಗಿ, ನಾರದನಿಗೆ ತಿಳಿಯದಂತೆ ಅವಳಿಗೆ

ನನ್ನ ಮನೋಗತವನ್ನು ತಿಳಿಸುವೆನು. ನಯಭಯಗಳಿಂದ ಅವಳನ್ನೊಪ್ಪಿಸಿ, ಮೊದಲು ಅವಳಿಂದ ವಾಗ್ದಾನವನ್ನು ಮಾಡಿಸಿಕೊಂಡರೆ, ನನ್ನ ಉದ್ದೇಶವು ಕೈಗೂಡುವುದರಲ್ಲಿ ಸಂದೇಹವಿಲ್ಲ! ಇಂತಹ ವಿಷಯಗಳಲ್ಲಿ ಗಂಡಸರನ್ನು ಹೇಗಾದರೂ ಒಪ್ಪಿಸಬಹುದು. ಹೆಂಸರನ್ನೊಪ್ಪಿಸುವುದೇ ಕಷ್ಟವು! ಮೊದಲು ಅವಳನ್ನು ಹಿಡಿದರೆ ಕಾರ್ಯಸಾಧನೆಯಾದಂತೆಯೇ ? ಆದರೆ ; ಅವಳು ಬಹಳ ಸಾಧುಸ್ವಭಾವವುಳ್ಳವಳಾದುದರಿಂದ, ಆಡಿದ ಮಾತಿಗೆ ತಪ್ಪಲಾರದೆ ರಾಜನನ್ನು ನಿರ್ಬಂಧಿಸುವಳು!ಆಮೇಲೆ ಈ ವಿಷಯವು ನಾರದನಿಗೆ ತಿಳಿದರೂ ಭಯವಿಲ್ಲ ! ಈಗ ಇದೇ ಕಾಲೋಚಿತದಾದ ಉಪಾಯವು. ಇನ್ನು ಹೋಗುವೆನು.

(ಹೋಗುವನು.)

(ಮರೆಯಾಗಿದ್ದ ಮನ್ಮಥನು ಆತುರದಿಂದ ಪ್ರವೇಶಿಸುವನು.)

ಮನ್ಮಥಂ—ಹಾದು ! ಹಾದು ! ನಿಜ ! ಪರ್ವತನು ಹೇಳಿದಂತೆ ಇಂತಹ ವಿಚಾರದಲ್ಲಿ ಹೆಂಗಸರ ಮನಸ್ಸನ್ನೊಪ್ಪಿಸುವುದು ಕಷ್ಟವೇ ! ಪರ್ವತನು ಹೋಗಿ ಕೇಳಿದಾಗ, ಅವನು ವನವಾಸಿಯಾದ ಋಷಿಯೆಂದು ರಾಜಪತ್ನಿಯೇನಾದರೂ, ಮೊದಲೇ ವಿವಾಹಕಾರ್ಯಕ್ಕೆ ಇಷ್ಟಪಡದೆ ನಿರಾಕರಿಸಿಬಿಟ್ಟರೆ, ನಾನು ಇದುವರೆಗೆ ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾಗುವುವು. ಆ ನಾರದಪರ್ವತರಿಬ್ಬರಲ್ಲಿಯೂ ಮೋಹಾಂಕುರವನ್ನು ಬಿತ್ತಿದುದಾಯಿತು! ಅದನ್ನು ಇನ್ನೂ ವೃದ್ಧಿಗೊಳಿಸಿ, ಅವರನ್ನು ಸ್ತ್ರೀವಶ್ಯರನ್ನಾಗಿ ಮಾಡಿ ನಾಲ್ಕಾರುಜನರ ಮುಂದೆ ಅವರನ್ನು ಅಪಹಾಸ್ಯಕ್ಕೆ ಗುರಿಮಾಡಿದಹೊರತು ನನ್ನ ಹಗೆಯು ತೀರಲಾರದು. ಇದಕ್ಕೇನು ಮಾಡಲಿ? (ಚಿಂತಿಸಿ) ಇರಲಿ! ಇದಕ್ಕೊಂದುಪಾಯವನ್ನು ಮಾಡುವೆನು. ಸ್ತ್ರೀಯರ ಹೃದಯವನ್ನು ಸ್ತ್ರೀಯರ ಮೂಲಕವಾಗಿಯೇ ವಶೀಕರಿಸಬೇಕು ! ಇದಕ್ಕಾಗಿ

ನಾನು ಈಗಲೇ ಹೋಗಿ ನನ್ನ ಪ್ರಿಯಪತ್ನಿಯಾದ ರತಿದೇವಿಯನ್ನು ಕಣಿಹೇಳುವ ಹೆಂಗಸಿನಂತೆ ವೇಷಾಂತರದಿಂದ ರಾಜಪತ್ನಿಯಬಳಿಗೆ ಕಳುಹಿಸಿ, ಆಕೆಯ ಮನಸ್ಸು ನನ್ನ ಕಾರ್ಯಕ್ಕೆ ಅನುಕೂಲವಾಗಿ ತಿರುಗುವಂತೆ ಮಾಡುವೆನು. ಸಹಜವಾಗಿ ಇಂತಹ ಶಾಕುನಿಕರ ಮಾತಿನಲ್ಲಿ ಹೆಂಗಸರಿಗೆ ಬಹಳ ನಂಬಿಕೆಯುಂಟು. ಇನ್ನು ಹೊರಡುವೆನು.

(ಹೋಗುವನು.)

ಆಸ್ಥಾನ;—ಅಂತಃಪುರ.

(ರಾಜಪತ್ನಿಯು ಸಖೀಸಮೇತಳಾಗಿ ಕುಳಿತಿರುವಳು)

ರಾಜಪತ್ನಿ—ಸಖಿ! ನಮ್ಮ ಶ್ರೀಮತೀಕುಮಾರಿಯಿಂದ ಇದುವರೆಗೆ ಎಷ್ಟೋ ವ್ರತೋಪವಾಸಗಳನ್ನು ನಡೆಸಿದುದಾಯಿತು. ಇನ್ನೂ ಅದಕ್ಕಾಗಿ ನಡೆಸಬೇಕಾದ ಅಭ್ಯುದಯಕಾರ್ಯಗಳೆಲ್ಲವನ್ನೂ ನಡೆಸಿದುದಾಯಿತು. ಇಷ್ಟಾದರೂ ಮನಸ್ಸಿಗೆ ನೆಮ್ಮದಿಯಿಲ್ಲದೆ, ಚಿಂತೆಯು ನನ್ನನ್ನು ಬಾಧಿಸುತ್ತಿರುವುದು.

ಸಖಿ—ದೇವಿ! ಸುಮ್ಮನೆ ಚಿಂತಿಸಿ ಫಲವೇನು? ಮಕ್ಕಳನ್ನು ಪಡೆದವರಿಗೆ ಹೇಗಿದ್ದರೂ ಈ ಚಿಂತೆಯು ತಪ್ಪಿದುದಲ್ಲ!! ಲೋಕಯಾತ್ರೆಯೇ

ಕೇತಾರಗೌಳ—ರೂಪಕತಾಳ.

*ಅಂತರಂಗದ । ಚಿಂತೆಯೆನ್ನನು ॥ ಸಂತತ । ಬಾಧಿಪು॥ ದಂತೆ॥
ಎಂತು ನೋಡಿದೊ। ಡೆನ್ನ ಮನವು। ಶಾಂತಿಯು। ನೊಂದದೆ। ಸಂತಪಿ। ಸುವುದು॥
ಇಂದುವದನೆ। ಯೆನ್ನ ನಂದನೆ । ಕುಂದ ಕುಸುಮ । ಸುಂದರರದನೆ।
ಸುಂದರಾಂಗನ। ಕೈಯ ಪಿಡಿದು। ಚಂದದಿ। ನಡೆವುದ। ನೆಂದು ನಾ। ನೋಳ್ಪೆನೋ॥
ಅಂಗನಾಜನ । ವೆಲ್ಲ ಕೂಡಿ । ತುಂಗವಿಭವ । ದಿಂದ ಪಾಡಿ ।
ಮಂಗಳಾಂಗಿಗೆ। ಪರಿಣಯೋಚಿತ। ಮಂಗ । ಳಂಗಳ। ನೆಂದು। ಮಾಳ್ಪರೋ॥

ಹೀಗೆ? ಕಾಲವು ಅನುಕೂಲಿಸಿಬಂದರೆ,ನಮ್ಮ ಪ್ರಯತ್ನವಿಲ್ಲ ದಂತೆಯೇ ಕಾರ್ಯವು ನಡೆದುಹೋಗುವುದು! ಅದುವರೆಗೆ ಮನ ಸ್ಸಮಾಧಾನದಿಂದ ನಿರೀಕ್ಷಿಸಬೇಕಾದುದೊಂದೇ ನಮ್ಮ ಕಾರ್ಯವು.

ರಾಣಿ—ಸಖಿ! ಇನ್ನು ಕಾಲನಿರೀಕ್ಷಣೆಯಿಂದತಾನೇ ಫಲವೇನು ? ನಮ್ಮ ರಾಜಕುಲದಲ್ಲಿ ಇದುವರೆಗೆ ಸಿಕ್ಕದ ವರನು ಮುಂದಲ್ಲಿ ಸಿಕ್ಕು ವನು ?

ಸಖಿ—ದೈವಘಟನೆಯನ್ನು ಯಾರು ಬಲ್ಲರು? ರಾಜಕುಲದವನಿಲ್ಲದಿದ್ದರೆ ಅದಕ್ಕಿಂತಲೂ ಉತ್ತಮಕುಲದವನೇ ನಿನ್ನ ಮಗಳಿಗೆ ಪತಿಯಾ ಗಿ ಏರ್ಪಡಬಾರದೇನು? ಅಥವಾ ಯಾವನಾದರೂ ದಿವ್ಯಪುರುಷ ನೊಬ್ಬನು ಬಂದು ನಿನ್ನ ಮಗಳನ್ನು ವರಿಸಿದರೂ ವರಿಸಬಹು ದು. ಇನ್ನು ನೀನು ಅದರ ಚಿಂತೆಯನ್ನು ಬಿಟ್ಟುಬಿಡು!

(ತೆರೆಯಲ್ಲಿ ಹಾಡುವ ಧ್ವನಿಯಾಗುವುದು.)

ರಾಣಿ.—(ಕಿವಿಗೊಟ್ಟುಕೇಳಿ) ಸಖಿ! ಹೊರಗೆ ಯಾವಳೋ ಹೆಂಗಸು ಹಾಡುವಂತಿದೆ. ಯಾರೆಂದು ತಿಳಿದು ಬಾ!

(ಸಖಿಯು ಹೋಗಿ ನೋಡಿ ಬಂದು.)

ಸಖಿ.—ಯಾವಳೋ ಕಣಿಹೇಳುವವ ಳೊಬ್ಬಳು ಗಾನಮಾಡುತ್ತ ಹೋಗುತ್ತಿರುವಳು.

ರಾಣಿ.—ಸಖಿ! ಹಾಗಾದರೆ ಅವಳನ್ನು ಇಲ್ಲಿಗೆ ಬರಮಾಡು ! ನಮ್ಮ ಕುಮಾರಿಯ ವಿವಾಹವಿಷಯದಲ್ಲಿ ಅವಳೇನನ್ನು ಹೇಳುವಳೋ ಕೇಳುವೆವು.

(ಸಖಿಯು ಕರೆತರುವಳು)

*ಕಣಿಹೇಳುವವಳು—ನಾನು ನನ್ನ ಪ್ರಾಣನಾಥನಾದ ಕಾಮದೇವನ ಆ ಜ್ಞಾನುಸಾರವಾಗಿ, ಈ ವನಚರಸ್ತ್ರೀವೇಷವನ್ನು ತಾಳಿದ್ದರೂ, ಲೋಕಾತಿಶಯವಾದ ನನ್ನ ಸೌಂದರ್ಯಕ್ಕೆ ಇದು ಕುಂದನ್ನು ತರಲಾರದು, ಇರಲಿ! ಮುಂದಿನ ಕಾರ್ಯವನ್ನು ನೋಡುವೆನು. (ಮುಂದೆ ಬಂದು) ದೇವಿ! ನಿನಗೆ ಜಯವಾಗಲಿ.

ರಾಣಿ.—(ಅವಳ ರೂಪಕ್ಕೆ ವಿಸ್ಮಿತಳಾಗಿ ನೋಡಿ, ಸಖಿಯನ್ನು ಕುರಿತು ಏಕಾಂತವಾಗಿ) ಸಖಿ! ಇವಳ ಆಕೃತಿಯನ್ನು ನೋಡಿದರೆ, ಕಣಿ ಹೇಳುವ ನೆವದಿಂದ ಜೀವನಾರ್ಥವಾಗಿ ತಿರುಗುವ ವನಚರಿಯಂತೆ ಕಾಣುವುದಿಲ್ಲ ಇವಳ ಮುಖದ ಕಳೆಯು ಇವಳ ಮಾತಿನಲ್ಲಿ ನಂಬಿಕೆ ಹುಟ್ಟಿಸುತ್ತಿರುವುದು. ಇರಲಿ! ಅವಳನ್ನು ವಿಚಾರಿಸುವೆವು.(ಆಗಂತುಕಳನ್ನು ನೋಡಿ)ಅಮ್ಮಾ! ನೀನು ಯಾರು? ಎಲ್ಲಿಯವಳು? ಇಲ್ಲಿಗೆ ಬಂದ ಉದ್ದೇಶವೇನು ?

ರಾಗ. ತಾಳ.

*ನಾನೆಂತ ಚಲುವೆಯೀ ಲೋಕದಿ! ಓಯಮ್ಮ ||
ಈ ನನ್ನ ಚಂದಕ್ಕೆ | ಸಾಟಿಯೇನಮ್ಮ ! ||ಪ||
ಮೂಗಿನೊಳಿಕ್ಕಿದ | ಮೂಗುತಿಯಿದೊಂದೆ |
ಮೂಲೋಕವನೆಲ್ಲ | ಮೋಹಗೊಳಿಪುದು || ೧ ||
ಅಂದದೊಳೆನ್ನಂತೆ | ಚಂದುಳ್ಳಹೆಣ್ಣನು |
ಹಿಂದೆ ಕಂಡವರಿಲ್ಲ | ಮುಂದೆ ಕಾಣುವರಿಲ್ಲ|| ೨||
ಜಿಂಗಾವಿಷಾವಾಡೆ | ರಂಗಿನ ರವಿಕೆಯು |
ಅಂಗವ ನೋಡಿರಿ | ಬಂಗಾರದ ಬಣ್ಣ || ೩ ||

*ಕಣಿಹೆಂಗಸು—ದೇವಿ! ನಾವು ವನಚರಿಯರು. ಹೀಗೆಯೇ ಒಮ್ಮೊಮ್ಮೆ ಸ್ವೇಚ್ಛೆಯಾಗಿ ಗ್ರಾಮಗಳನ್ನೂ, ನಗರಗಳನ್ನೂ ಸುತ್ತುತ್ತಿರುವುದುಂಟು ನಮಗೆ ದೇವೀಪ್ರಸಾದದಿಂದ ಹಿಂದುಮುಂದಿನ ವಿಷಯಗಳನ್ನೆಲ್ಲಾ ತಿಳಿದು ಹೇಳುವ ಶಕ್ತಿಯುಂಟು. ಸಾಮುದ್ರಿಕವನ್ನೂ ಬಲ್ಲೆವು. ಕೈನೋಡಿದಮಾತ್ರಕ್ಕೆ ಅವರವರ ಮನಸ್ಸಿನಲ್ಲಿ ಕುರಿತುದನ್ನು ಹೇಳುವೆವು

ರಾಣಿ.—(ಮರೆಯಲ್ಲಿ) ಸಖಿ! ಹಾಗಿದ್ದರೆ ನಮ್ಮ ಶ್ರೀಮತೀಕುಮಾರಿಯ ವಿವಾಹವಿಷಯವಾಗಿ ಇವಳೇನು ಹೇಳುವಳೋ ಕೇಳುವೆವು.

ಸಖಿ.—ಅದಕ್ಕೆ ತಡೆಯೇನು? ಕೇಳಿ ನೋಡುವೆವು. (ಕಣಿಯವಳನ್ನು ನೋಡಿ) ಅಮ್ಮಾ! ಹಾಗಿದ್ದರೆ ನೀನು ಒಳ್ಳೇಸಮಯಕ್ಕೆ ಬಂದಂತಾಯಿತು! ಈಗ ನಮ್ಮ ಮಹಾರಾಣಿಯು ಮನಸ್ಸಿನಲ್ಲಿ ಕುರಿತುದನ್ನು ಹೇಳಬಲ್ಲೆಯಷ್ಟೆ?

ಕಣಿಯವಳು—ಸಂದೇಹವೇಕೆ? ಅದನ್ನು ಮತ್ತೊಮ್ಮೆ ಕೇಳಬೇಕೆ ? ಕಂಡುದನ್ನು ಕಂಡಹಾಗೆ ಹೇಳುವೆನು. ಮಹಾರಾಣಿ ! ಎಲ್ಲಿ ಕೈ ತೋರಿಸಮ್ಮ ನೋಡುವೆನು. (ಕೈಹಿಡಿದು ಬಣ್ಣದ ಕೋಲಿನಿಂದ ಸವರುತ್ತ ದೇವೀಧ್ಯಾನವನ್ನಭಿನಯಿಸಿ, ಓಯಮ್ಮ ! ಕೊಲ್ಲಾಪುರದಮ್ಮ! ಕಾವೇಟಿಯಮ್ಮ! ಅಮ್ಮ ! ನಿಮ್ಮ ಮನ

ರಾಗ. ತಾಳ.

*ಕಾಡಿನಲಿ । ಗುಡ್ಡದಲಿ । ವಾಸವು ನಮಗಮ್ಮ । ಅಮ್ಮ ॥ವಾಸವು ॥
ನಾಡಿನೊಳು।ನಮ್ಮಿಚ್ಛೆಗೆ । ಬರುವೆವು ನಾವಮ್ಮ ॥ ೧ ॥
ಹಿಂದಿನದು । ಮುಂದಿನದು । ಬಲ್ಲೆವು ನಾವಮ್ಮ । ಅಮ್ಮ ॥ಬಲ್ಲೆವು॥
ಎಂದಾದರು । ನಾವೆಂದುದು । ತಪ್ಪದು ಕೇಳಮ್ಮ ॥ ೨ ॥
ತಂತ್ರದಲಿ । ಯಂತ್ರದಲ್ಲಿ । ನಿಪುಣರು ನಾವಮ್ಮ ॥
ಮಂತ್ರದ ಬಲವತಿಶಯವು । ನಮ್ಮೊಳು ಕೇಳಮ್ಮ ।ಅಮ್ಮ॥ನಮ್ಮೊಳು॥

ಸ್ಸಿನಲ್ಲಿ ದೊಡ್ಡ ಚಿಂತೆಯಮ್ಮ ! ಅದು ಮಕ್ಕಳ ಚಿಂತೆಯಮ್ಮ !

ರಾಣಿ.—(ಆಶ್ಚರ್ಯದಿಂದ) ಸಖಿ ! ಇವಳ ಶಕ್ತಿಯನ್ನು ನೋಡಿದೆಯಾ ? ನಮ್ಮ ಮನೋಗತವನ್ನು ಎಷ್ಟು ಬೇಗನೆ ಗ್ರಹಿಸಿಬಿಟ್ಟಳು ನೋಡು. ಸಖಿ! ನೀನು ಬೇಗನೆ ಹೋಗಿ ನಮ್ಮ ಕುಮಾರಿಯನ್ನೇ ಕರೆದುಕೊಂಡುಬಾ ! ಅವಳ ಕೈಯನ್ನೇ ತೋರಿಸಿ ಮುಂದಿನ ಸಂಗತಿಯನ್ನು ಕೇಳುವೆವು.

ಸಖಿ.—ಅಪ್ಪಣೆ (ಎಂದು ಹೋಗಿ ಆತುರದಿಂದ ಹಿಂತಿರುಗಿ ಬಂದು) ಪರ್ವತಮಹರ್ಷಿಯು ನಿನ್ನನ್ನು ನೋಡುವುದಕ್ಕಾಗಿ ಬರುತ್ತಿರುವರು.

ರಾಣಿ.—ಏನು! ಪರ್ವತಮಹರ್ಷಿಯೆ? ಹಾಗಿದ್ದರೆ ನೀನು ಈಕೆಯನ್ನೇ ಅಲ್ಲಿಗೆ ಕರೆದುಕೊಂಡು ಹೋಗಿ ನಮ್ಮ ಕುಮಾರಿಯ ವಿಷಯವಾಗಿ ಇವಳು ಹೇಳುವುದೇನೆಂದು ತಿಳಿದು ಬಾ! ಎಲಾ ಸೌಮ್ಯಳೆ! ನಮ್ಮ ಸಖಿಯಸಂಗಡ ಹೋಗು.

(ಕಣಿಯುವಳನ್ನು ಕರೆದುಕೊಂಡು ಸಖಿಯು ಹೋಗುವಳು.)

(ಪರ್ವತಮುನಿಯು ಪ್ರವೇಶಿಸುವನು.)

ರಾಣಿ—(ಸಂಭ್ರಮದಿಂದೆದ್ದು) ಪೂಜ್ಯರೆ ! ವಂದಿಸುವೆನು.

ಪರ್ವತಂ—ದೇವಿ! ನಿನಗೆ ಶುಭವಾಗಲಿ !

ರಾಣಿ—ಈ ಪೀಠವನ್ನಲಂಕರಿಸಬೇಕು !

ಪರ್ವತಂ—ಅಮ್ಮಾ! ನಾನು ವಸಂತೋದ್ಯಾನವನ್ನು ನೋಡಿ ಬರುವಷ್ಟರಲ್ಲಿ ನೀವೆಲ್ಲರೂ ಅಲ್ಲಿಂದ ಹೊರಟುಬಂದಹಾಗಿದೆ! ನಾರದನೆಲ್ಲಿ?

ರಾಣಿ—ಪೂಜ್ಯರೆ! ವಸಿಷ್ಠಾಜ್ಞೆಯಾದುದರಿಂದ,ನಾವು ಮುಂಬಾಗಿ ಹೊರಟುಬಂದೆವು. ಈಗ ನಾರದಮಹರ್ಷಿಯು ರಾಜಸಾನ್ನಿಧ್ಯದಲ್ಲಿರಬಹುದು.

ಪರ್ವತಂ—ಚಿಂತೆಯಿಲ್ಲ! (ಅತ್ತಿತ್ತ ತೆರೆಯಕಡೆಗೆ ನೋಡಿ) ದೇವಿ!ಈಗ ನಾನು ನಿನ್ನಲ್ಲಿಗೆ ಬಂದ ಉದ್ದೇಶವೇ ಬೇರೆ? ಆ ಕಾರ್ಯನಿರ್ವಾಹ ವಾಗುವವರೆಗೆ ಅದನ್ನು ಬಹಳ ರಹಸ್ಯವಾಗಿಟ್ಟಿರಬೇಕು.

ರಾಣಿ—ಪೂಜ್ಯರೆ! ಆಜ್ಞೆಯಂತೆಯೇ ನಡೆಯುವೆನು. ಧಾರಾಳವಾಗಿ ತಿಳಿಸ ಬಹುದು.

ಪರ್ವತಂ—ಬೇರೇನೂ ಇಲ್ಲ! ಆ ಉದ್ಯಾನವನದಲ್ಲಿ, ನಾನು ನಿನ್ನ ಮಗಳಾದ ಶ್ರೀಮತಿಯನ್ನು ನೋಡಿದುದು ಮೊದಲು, ನನಗೆ ಅವಳೊಡನೆ ಗೃಹಸ್ಥಧರ್ಮದಲ್ಲಿರಬೇಕೆಂಬ ಆಸೆಯು ಹುಟ್ಟಿರುವುದು. ಅವಳ ನ್ನು ನನಗೆ ವಿವಾಹಮಾಡಿಕೊಡುವುದಾದರೆ,ನಿನಗೂ ವರಾನ್ವೇ ಷಣದ ಕಷ್ಟವು ತಪ್ಪುವುದು. ನನ್ನ ಆಸೆಯೂ ತೀರುವುದು! ಈ ನನ್ನ ವೈದಿಕವೇಷವನ್ನು ನೋಡಿ ಸಂದೇಹಪಡಬೇಕಾದುದಿ ಲ್ಲ! ಅವಳಿಗೆ ಯಾವಸುಖದಲ್ಲಿಯೂ ಲೋಪವಿಲ್ಲದಂತೆ ನೋಡಿ ಕೊಳ್ಳುವ ಭಾರವು ನನಗಿರಲಿ! ನನ್ನ ಯೋಗಬಲದಿಂದಲೇ ಅವ ಳಿಗೆ ಸಮಸ್ತಸಾಮ್ರಾಜ್ಯಭೋಗಗಳನ್ನೂ ಕೈಗೂಡಿಸಬಲ್ಲೆನು.

ರಾಣಿ—(ಆಶ್ಚರ್ಯದಿಂದ ಸ್ವಗತಂ)ಏನಿದು! ಇಂತಹ ಪರಮವಿರಕ್ತರಿಗೂ ಕುಟುಂಬಧರ್ಮದಲ್ಲಿ ಆಸೆಹುಟ್ಟಿತೆ?ಒಂದುವೇಳೆ ಈಮಹರ್ಷಿಯು ನನ್ನ ಮನಸ್ಸನ್ನು ಪರೀಕ್ಷಿಸುವುದಕ್ಕಾಗಿ ಕೇಳಿರುವರೋ, ಇಲ್ಲವೇ ನಿಜವಾಗಿಯೂ ಇವರಿಗೆ ವಿವಾಹಾಪೇಕ್ಷೆಯು ಹುಟ್ಟಿರುವುದೋ ತಿಳಿಯಲಿಲ್ಲ! ಈಗ ನಾನು ಯಾವ ಉತ್ತರವನ್ನು ಹೇಳಲಿ।

(ಎಂದು ಯೋಚಿಸುತ್ತ ನಿಲ್ಲುವಳು.)

ಪರ್ವತಂ—ಮಹಾರಾಜ್ಞೀ!ಏನನ್ನು ಯೋಚಿಸುತ್ತಿರುವೆ? ನಿನ್ನ ಅಭಿಪ್ರಾ ಯವೇನು ಹೇಳು! ದೇವಾಂಗನೆಯರನ್ನೂ ಕಣ್ಣೆತ್ತಿ ನೋಡದ ನನಗೆ, ನಿನ್ನಮಗಳೊಡನೆ ಗೃಹಧರ್ಮವನ್ನು ನಡೆಸಬೇಕೆಂಬ ಆಸೆ ಹುಟ್ಟಿದುದು ನಿನ್ನಭಾಗ್ಯವೆಂದೇ ತಿಳಿ! ಅಂತಹ ನಾನು ಕನ್ಯಾ

ರ್ಥಿಯಾಗಿ ನಿನ್ನನ್ನು ಯಾಚಿಸುತ್ತಿರುವಾಗ, ನೀನು ಸಂತೋಷ ಪಡಬೇಕಾದ ಸಂದರ್ಭದಲ್ಲಿ ಚಿಂತಿಸುತ್ತಿರುವೆಯಲ್ಲಾ!

ರಾಣಿ—(ಸ್ವಗತಂ) ಇವರ ಅಭಿಪ್ರಾಯವೇನೆಂದು ತಿಳಿಯುವುದಕ್ಕಿಲ್ಲ! ಹೇಗಾದರೂ ಆಗಲಿ! ಅತಿಥಿಗಳಾಗಿ ಬಂದ ಮಹರ್ಷಿಗಳನ್ನು ತಿರಸ್ಕರಿಸಿ ಕೋಪಕ್ಕೆ ಗುರಿಯಾಗಬಾರದು. (ಪ್ರಕಾಶಂ) ಮುನೀಂದ್ರ! ಇದರಲ್ಲಿ ಚಿಂತಿಸಬೇಕಾದುದೇನಿದೆ? ಪರಮಭಾಗವತೋತ್ತಮರಾದ ನೀವು ನನ್ನ ಮಗಳನ್ನು ಬಯಸುವುದಾದರೆ, ಇದು ನಮ್ಮ ಭಾಗ್ಯವಿಶೇಷವೆಂಬುದರಲ್ಲಿ ಸಂದೇಹವೇನಿದೆ? ಕನ್ಯಾದಾನಕ್ಕೆ ತಮಗಿಂತಲೂ ಸತ್ಪಾತ್ರವೆಲ್ಲಿ ದೊರೆಯುವುದು? ಆದರೆ ತಾವು ಈ ವಿಚಾರವನ್ನು ಮಹಾರಾಜನಲ್ಲಿಯೇ ತಿಳಿಸಿದ್ದರೆ ಉತ್ತಮವಾಗಿತ್ತು ! ಸ್ತ್ರೀಯರು ಯಾವವಿಧದಲ್ಲಿಯೂ ಅಸ್ವತಂತ್ರರಲ್ಲವೆ ?

ಪರ್ವತಂ—ಮಹಾರಾಣೀ! ಹಾಗಲ್ಲ ! ಕನ್ಯಾವಿವಾಹವಿಷಯದಲ್ಲಿ ಹೆತ್ತತಾಯಿಯ ಇಷ್ಟವೇ ಮುಖ್ಯವಾದುದು ! ನೀನು ಇಷ್ಟಪಟ್ಟಪಕ್ಷದಲ್ಲಿ, ಮಹಾರಾಜನು ಅದಕ್ಕೆ ವಿರುದ್ಧವಾಗಿ ನಡೆಯಲಾರನು. ಬೇಕಾದರೆ ನಾನೇ ಹೋಗಿ ಮಹಾರಾಜನಲ್ಲಿಯೂ ತಿಳಿಸುವೆನು. ಮೊದಲು ಈಗ ನೀನು ವಾಗ್ದಾನವನ್ನು ಮಾಡು !

ರಾಣಿ—ಪೂಜ್ಯರೆ! ನನ್ನ ಅಡ್ಡಿಯೇನೂ ಇಲ್ಲ! ನಾನು ಮನಃಪೂರ್ವಕವಾಗಿ ಸಮ್ಮತಿಸುವೆನು.

ಪರ್ವತಂ—ಇಷ್ಟೇ ನನ್ನ ಕೋರಿಕೆ ! ದೈವಘಟನೆ ಯಿದ್ದರೆ ಅನುಕೂಲಿಸಲಿ ! ನಾನು ನದಿಗೆ ಹೋಗಿಬರುವೆನು. (ಹೋಗುವನು.)

ಸಖಿ.—(ಪ್ರವೇಶಿಸಿ ಸ್ವಗತಂ) ಅಯ್ಯೋ! ಏನಿದು ವಿಚಿತ್ರವು ? ನಮ್ಮ ರಾಜಕುಮಾರಿಯು ಯಾವನೋ ಯೋಗೀಶ್ವರನ ಪತ್ನಿಯಾಗುವಳಂತೆ! ಕಣಿಯವಳು ಶ್ರೀಮತೀಕುಮಾರಿಯ ಕೈಯನ್ನು ನೋಡಿ ಹೀಗೆಂದು ಹೇಳಿ ಹೊರಟು ಹೋದಳು. ಈ ವೃತ್ತಾಂ

ತವನ್ನು ಮಹಾರಾಣಿಗೆ ಹೇಗೆ ತಿಳಿಸಲಿ ? ಲೋಕದಲ್ಲಿ ತನ್ನ ಮಗಳಿಗೆ ತಕ್ಕ ವರನೇ ಇಲ್ಲವೆಂದು ಅಂತಹ ಮಹಾರಾಜಕುಮಾರರನ್ನೆಲ್ಲಾ ಮೆಚ್ಚದಿದ್ದ ದೇವಿಗೆ ಈ ರಹಸ್ಯವನ್ನು ತಿಳಿಸಿದರೆ, ಮೊದಲೇ ಚಿಂತೆಯಿಂದ ಕೊರಗುತ್ತಿರುವ ಆಕೆಯು ಮತ್ತಷ್ಟು ಕೊರಗಲು ಕಾರಣವಾಗುವುದು. ಇದಕ್ಕೇನು ಮಾಡಲಿ! ಇರಲಿ! ಆ ಪ್ರಸ್ತಾವವನ್ನೇ ಅವಳ ನೆನಪಿಗೆ ತಾರದೆ ಬೇರೆ ಏನಾದರೂ ನೆವವನ್ನೆತ್ತಿ ಅವಳನ್ನು ವಿನೋದಗೊಳಿಸುತ್ತಿರುವೆನು.

(ಮುಂದೆ ಹೋಗುವಳು.)

(ಮಹಾರಾಜ್ಞಿಯು ತನ್ನಲ್ಲಿ ತಾನು ಯೋಚಿಸುತ್ತಿರುವಳು.)

ಸಖಿ—ದೇವಿ! ಇದೇನು? ಏನೋ ಯೋಚಿಸುತ್ತಿರುವಹಾಗಿದೆ? ವಿಶೇಷವೇನೂ ಇಲ್ಲವಷ್ಟೆ ?

ರಾಣಿ—ಸಖಿ! ದೈವಘಟನೆಯನ್ನು ಯಾರೂ ಕಂಡವರಿಲ್ಲವೆಂದು ಈಗ್ಗೆ ಸ್ವಲ್ಪಮೊದಲು ನೀನು ಹೇಳಿದ ಮಾತು ಈಗಾಗಲೇ ನನ್ನ ನಿದರ್ಶನಕ್ಕೆ ಬಂದಿತು. ನಮ್ಮ ಕುಮಾರಿಯ ವಿವಾಹವು ಸಮೀಪಿಸಿದಂತೆ ತೋರುವುದು.

ಸಖಿ—(ಸಂಭ್ರಮದಿಂದ) ದೇವಿ! ಅದು ಹೇಗೆ? ವರನು ಯಾರು ?

ರಾಣಿ—ಸಖಿ! ಈ ವಿಚಾರವನ್ನು ನಾನು ಬಹಳ ರಹಸ್ಯವಾಗಿಡಬೇಕಾದರೂ ಆಪ್ತಸಖಿಯಾದುದರಿಂದ,ನಿನ್ನಲ್ಲಿ ಬಚ್ಚಿಡಲಾರೆನು.ಈಗ ಬಂದಿದ್ದ ಪರ್ವತಮಹರ್ಷಿಯೇ ಕನ್ಯಾರ್ಥಿಯಾಗಿ ಬಂದು ನನ್ನಲ್ಲಿ ಯಾಚಿಸಿದನು.

ಸಖಿ—(ನಗುತ್ತ)ದೇವಿ!ಇದುವರೆಗೆ ರಾಜಕುಲದಲ್ಲಿಯೇ ಅನುರೂಪನಾದ ವರನಿಲ್ಲವೆಂದು ಎಲ್ಲರನ್ನೂ ನಿರಾಕರಿಸುತಿದ್ದ ನೀನು,ಕೊನೆಗೆ

ಆ ಶ್ರೋತ್ರಿಯನಿಗೆ ನಿನ್ನ ಮಗಳನ್ನು ಕೊಟ್ಟು ಮದುವೆಮಾಡಬೇಕಾಯಿತೆ ?

ರಾಣಿ—ಸಖಿ! ಆ ಚಿಂತೆಯು ನನಗೆ ಎಳ್ಳಷ್ಟಾದರೂ ಇಲ್ಲ! ಆದರೆ ಆ ಮಹರ್ಷಿಯು ತಾನಾಗಿ ನನ್ನ ಮಗಳನ್ನು ಮೋಹಿಸಿದಹಾಗೆ ಹೇಳುವನು! ನಿಜವಾಗಿ ಮೋಹಿಸಿರುವನೋ ಅಥವಾ ನನ್ನ ಮನಸ್ಸನ್ನು ಪರೀಕ್ಷಿಸುವುದಕ್ಕಾಗಿ ಕೇಳಿರುವನೋ ತಿಳಿಯಲಿಲ್ಲ ! ನಿಜವನ್ನು ತಿಳಿಯದೆ ನನ್ನ ಮನಸ್ಸು ಕಳವಳಿಸುತ್ತಿರುವುದು.

ಸಖಿ—ದೇವಿ! ನಿನ್ನನ್ನು ಪರೀಕ್ಷಿಸಿ ಆ ಮಹರ್ಷಿಗಾಗಬೇಕಾದುದೇನು? ನಿಜವಾಗಿಯೇ ಅವನು ನಿನ್ನ ಮಗಳನ್ನು ಮೋಹಿಸಿರಬಹುದು. ನಿನ್ನ ಮಗಳ ರೂಪಲಾವಣ್ಯಗಳು ಯಾರನ್ನು ತಾನೇ ಮೋಹಗೊಳಿಸುವುದಿಲ್ಲ !

ರಾಣಿ—ಸಖಿ! ಹಾಗಲ್ಲ! ವಿಶ್ವಾಮಿತ್ರಮಹರ್ಷಿಯು ಹಣದಾಸೆಯಿಂದ ಹರಿಶ್ಚಂದ್ರನಲ್ಲಿ ದಕ್ಷಿಣೆಯನ್ನು ಬೇಡಿದನೆ? ಅದರಂತೆಯೇ ಈಗಲೂ ಈ ಪರ್ವತಮುನಿಯು ಯಾವ ಉದ್ದೇಶದಿಂದ ಕೇಳಿರುವನೋ ಯಾರು ಬಲ್ಲರು! ಅವನಂತೂ ನನ್ನನ್ನು ನಿರ್ಬಂಧಿಸಿ, ನನ್ನಿಂದ ವಾಗ್ದಾನವನ್ನು ಮಾಡಿಸಿಕೊಂಡಿರುವನು.

ಸಖಿ.—(ನಗುತ್ತ) ದೇವಿ! ನಿನ್ನಲ್ಲಿ ಮುಚ್ಚುಮರೆಯೇಕೆ? ವಾಸ್ತವಾಂಶವನ್ನು ತಿಳಿಸಿಬಿಡುವೆನು ಕೇಳು! ದೈವಘಟನೆಯೇ ಹಾಗಿರುವಂತೆ ತೋರುವುದು. ಮಾಂತ್ರಿಕಳೂ ಇದಕ್ಕನುಸಾರವಾಗಿಯೇ ಹೇಳಿರುವಳು. ಅದನ್ನು ನಿನ್ನೊಡನೆ ಹೇಳಲು ಸಂಕೋಚದಿಂದ ನಾನು ಇದುವರೆಗೆ ಸುಮ್ಮನಿದ್ದೆನು.

ರಾಣಿ.—(ಸಂಭ್ರಮದಿಂದ) ಸಖಿ! ನಿಜ! ನಾನು ಮರೆತೇ ಹೋಗಿದ್ದೆನು. ವನಚಾರಿಯೇನು ಹೇಳಿದಳು? ನಿನ್ನ ಸಂಕೋಚಕ್ಕೆ ಕಾರಣವೇನು ?

ಸಖಿ.—ನಮ್ಮ ಕುಮಾರಿಯು ಒಬ್ಬಯೋಗೀಶ್ವರನ ಪತ್ನಿಯಾಗುವ ಳಂತೆ!

ರಾಣಿ.—ಹಾದು! ಇದೇ ವಾಸ್ತವವಾಗಿರಬೇಕು. ದೈವಘಟನೆಯನ್ನು ಕಂಡವರಾರು? ಇರಲಿ! ಮೊದಲು ನಾನು ಈ ವಿಚಾರವನ್ನು ಆರ್ಯಪುತ್ರನಲ್ಲಿ ತಿಳಿಸಿದಹೊರತು ಮನಸ್ಸಿಗೆ ಸಮಾಧಾನವಿಲ್ಲ! ನೀನು ಹೋಗಿ ಅಲ್ಲಿನ ಸಮಯವನ್ನು ತಿಳಿದು ಬಾ! (ಸಖಿಯು ಹೋಗಿ ಆತುರದಿಂದ ಹಿಂತಿರುಗಿ ಬಂದು) ದೇವಿ! ಇದೋ! ಮಹಾರಾಜನೇ ನಿನ್ನಲ್ಲಿಗೆ ಬರುತ್ತಿರುವನು.

(ಮಹಾರಾಜನು ಪ್ರವೇಶಿಸುವನು. ರಾಣಿಯು ಸಂಭ್ರಮದಿಂದೆದ್ದುಬಂದು)

ರಾಣಿ—ನಾಥಾ! ಅತ್ಯವಶ್ಯವಾದ ಒಂದು ವಿಷಯವನ್ನುಕುರಿತು ಮಾತಾಡುವುದಕ್ಕಾಗಿ, ಈಗಲೇ ನಾನು ನಿನ್ನ ಸಮಯವನ್ನು ತಿಳಿದುಬರುವಂತೆ ಈ ನನ್ನ ಸಖಿಯನ್ನು ಕಳುಹಿಸಿದೆನು. ಇಷ್ಟರಲ್ಲಿ ನೀನಾಗಿ ಇಲ್ಲಿಗೆ ಬಂದುದು ಬಹಳ ಅನುಕೂಲವಾಯಿತು!

ರಾಜಂ—ನಿನ್ನ ಕಾರ್ಯಕ್ಕಿಂತಲೂ ಈಗ ನಾನು ಬಂದ ಕಾರ್ಯವು ಇನ್ನೂ ಅತ್ಯವಶ್ಯವಾದುದು! ಅದು ಹಾಗಿರಲಿ! ಮೊದಲು ನಿನ್ನ ಕಾರ್ಯವೇನೆಂಬುದನ್ನು ತಿಳಿಸಿಬಿಡು! ಆಮೇಲೆ ನನ್ನ ಸಂಗತಿಯನ್ನು ವಿವರವಾಗಿ ತಿಳಿಸುವೆನು. ನನ್ನದು ಬಹಳ ರಹಸ್ಯವಾದ ಸಂಗತಿ! (ಸಖಿಯನ್ನು ನೋಡಿ) ಮದನಿಕೆ! ಅತಿಥಿಗಳಾಗಿ ಬಂದ ನಾರದಪರ್ವತರಿಬ್ಬರೂ,ಮಾಧ್ಯಾಹ್ನಿಕಸ್ನಾನಾರ್ಥವಾಗಿ ನದಿಗೆ ಹೋಗಿರುವರು! ನೀನು ಹೋಮಶಾಲೆಯ ಬಾಗಿಲಲ್ಲಿ ನಿರೀಕ್ಷಿಸುತ್ತಿದ್ದು, ಅವರು ಬಂದೊಡನೆ ಇಲ್ಲಿ ಬಂದು ನನಗೆ ತಿಳಿಸು

ಸಖಿ—ಅಪ್ಪಣೆ! (ಸಖಿಯು ಹೋಗುವಳು.)

ರಾಣಿ—ನಾಥಾ! ಬೇರೇನೂ ಇಲ್ಲ! ದೈವಘಟನೆಯು ಬಹಳ ವಿಚಿತ್ರವಾಗಿದೆ! ನಮ್ಮ ಶ್ರೀಮತೀಕುಮಾರಿಯ ವಿವಾಹಪ್ರಯತ್ನವು ಫಲಿಸು—(ಎಂದು ಹೇಳುವಷ್ಟರಲ್ಲಿ ಅಧೋಽಕ್ತಿಯಲ್ಲಿ.)

ರಾಜಂ—ಸರಿ! ಸರಿ! ನಾನೂ ಅದನ್ನೇ ಹೇಳುವುದಕ್ಕಾಗಿ ಬಂದೆನು. ಈ ವಿಚಾರವು ನಿನಗೆ ಹೇಗೆ ತಿಳಿಯಿತು ?

ರಾಣಿ—ಆ ಮಹರ್ಷಿಯೇ ಈಗ ನನ್ನಲ್ಲಿಗೆ ಬಂದಿದ್ದರು.

ರಾಜಂ—ಅವರು ನನ್ನೊಡನೆ ಮಾಧ್ಯಾಹ್ನಿಕಕ್ಕಾಗಿ ನದಿಗೆ ಹೋಗುವಂತೆ ಹೇಳಿ ಹೋದರು. ನಿನ್ನನ್ನು ಯಾವಾಗ ನೋಡಿರಬಹುದು ?

ರಾಣಿ—ಇಲ್ಲಿಗೆ ಬಂದು ನನ್ನನ್ನು ನೋಡಿದಮೇಲೆಯೇ,ನದಿಗೆ ಹೋಗುವುದಾಗಿ ಹೇಳಿ ಹೋದರು.

ರಾಜಂ—ಇರಬಹುದು ! ಆ ಮಹರ್ಷಿಯು ಈ ವಿಚಾರವಾಗಿ ನಿನ್ನನ್ನು ಕಂಡು ಮಾತಾಡುವುದಾಗಿ ನನಗೂ ಹೇಳಿದ್ದರು. ನಿನ್ನನ್ನೂ ನೋಡಿ ಆ ಮೇಲೆ ಸ್ನಾನಾರ್ಥವಾಗಿ ಹೋಗಿರಬಹುದು. ಅದು ಹೋಗಲಿ! ಈಗ ನಿನ್ನ ಇಷ್ಟವೇನು ಹೇಳು! ಅದನ್ನು ತಿಳಿಯುವುದಕ್ಕಾಗಿಯೇ ನಾನು ಇಲ್ಲಿಗೆ ಬಂದೆನು.

ರಾಣಿ—ನಾಥಾ! ಇದರಲ್ಲಿ ನನ್ನ ಇಷ್ಟವೇನಿದೆ?ಆ ಮಹರ್ಷಿಯು ಕೇಳಿದ ಮೇಲೆ ನಾವು ನಿರಾಕರಿಸುವುದಕ್ಕಾದೀತೆ? ಈ ವಿಚಾರದಲ್ಲಿ ನಾನು ಅಸ್ವತಂತ್ರಳಾದರೂ, ನನ್ನ ಸಮ್ಮತಿಯನ್ನು ನಾನು ತಿಳಿಸಿಬಿಟ್ಟನು. ಇದರಮೇಲೆ ನಿನ್ನ ಇಷ್ಟಾನುಸಾರವಾಗಿ ನಡೆಸಬಹುದು.

ರಾಜಂ—ದೇವಿ! ನನ್ನ ಇಷ್ಟಕ್ಕೆ ನೀನು ವಿರುದ್ಧವಾಗಿ ನಡೆಯಲಾರೆಯೆಂಬ ಭರವಸದಿಂದ ನಾನೂ ಹಾಗೆಯೇ ಆ ಮಹರ್ಷಿಗೆ ವಾಗ್ದಾನವನ್ನು ಮಾಡಿರುವೆನು. ನಿನಗೆ ಈ ವಿಚಾರವು ಸಮ್ಮತವೋ, ಇಲ್ಲವೋ ಎಂದು ನಾನು ಬಹಳ ಭಯಪಡುತಿದ್ದೆನು. ದೈವಾಧೀನದಿಂದ ನಮ್ಮಿಬ್ಬರ ಅಭಿಪ್ರಾಯವೂ ಏಕೀಭವಿಸಿತು! ಅನುಕೂಲದಾಂಪತ್ಯದ ಲಕ್ಷಣವೇ ಇದು! ನನಗೆ ನೀನು ಅರ್ಧಾಂಗಿ

ಯೆಂಬುದು ಇದರಿಂದಲೇ ಸ್ಪಷ್ಟವಾಗುವುದು. ದೇವಿ ! ಇನ್ನು ಕಾಲವಿಳಂಬವು ಸಾಕು! ವಿವಾಹಕ್ಕೆ ಬೇಕಾದ ಸನ್ನಾಹಗಳೆಲ್ಲ ವನ್ನೂ ಸಿದ್ಧಪಡಿಸುವೆವು.

ರಾಣಿ—ನಾಥಾ! ಹೌದು ! ಶುಭಕಾರ್ಯವನ್ನು ಶೀಘ್ರದಲ್ಲಿಯೇ ನಡೆಸಿ ಬಿಡಬೇಕು.

ರಾಜಂ—ಯಾರಲ್ಲಿ !

ಕಂಚುಕಿಯು—(ಪ್ರವೇಶಿಸಿ) ಮಹಾರಾಜನೆ ! ಏನಪ್ಪಣೆ!

ರಾಜಂ—ಜಯಂಧರಾ ! ಈಗಲೇ ನೀನು ಹೋಗಿ, ವಿವಾಹಕ್ಕೆ ಬೇಕಾದ ಸಕಲಸನ್ನಾಹಗಳನ್ನೂ ಸಿದ್ಧಪಡಿಸುವಂತೆ ನಮ್ಮ ಗೃಹಾಧ್ಯಕ್ಷ ನಿಗೆ ತಿಳಿಸು ! ನಮ್ಮ ಶ್ರೀಮತೀಕುಮಾರಿಯನ್ನು ದೇವರ್ಷಿ ಯಾದ ನಾರದನಿಗೆ ಕೊಟ್ಟು—

ರಾಣಿ—(ನಗುತ್ತ) ನಾಥಾ! ಇದೇನು ? ಈ ಸಂತೋಷಸಂಭ್ರಮದಲ್ಲಿ ವರನ ಹೆಸರನ್ನೇ ಮಾರಿಸಿಬಿಟ್ಟೆಯಲ್ಲಾ ! ಪರ್ವತಮಹರ್ಷಿಯೆಂ ದು ಹೇಳು !

ರಾಜಂ—ಪ್ರಿಯೆ! ಚೆನ್ನಾಯಿತು ! ಆ ಮಹರ್ಷಿಗಳ ಹೆಸರಿನಲ್ಲಿ ನಿನಗೇ ಭ್ರಾಂತಿಯುಂಟಾಗಿರುವಹಾಗಿದೆ!ನಮ್ಮಲ್ಲಿ ಕನ್ಯಾರ್ಥಿಯಾಗಿ ಬಂ ದಿದ್ದವನು! ನಾರದನು !

ರಾಣಿ—ನಾಥಾ! ಇಲ್ಲ! ನಾರದನನ್ನು ನಾನು ಕಾಣೆನೆ? ನನ್ನಲ್ಲಿಗೆ ಬಂ ದಿದ್ದವನು ಪರ್ವತಮುನಿ!

ರಾಜಂ—(ಬೆಜ್ಜರಬಿದ್ದು) ಏನು? ನಿಜವಾಗಿಯೂ ನಿನ್ನಲ್ಲಿ ಬಂದಿದ್ದವನು ಪರ್ವತನೆ ?

ರಾಣಿ—ನಾಥಾ! ನಿಜವಲ್ಲದೆ ನಿನ್ನೊಡನೆ ನಾನು ಸುಳ್ಳಾಡುವೆನೆ ? ನಿಜ ವಾಗಿಯೂ ನನ್ನಲ್ಲಿ ಬಂದು ಕೇಳಿದವನು ಪರ್ವತನು.

ರಾಜಂ—ಪರ್ವತನಿಗೇ ನೀನು ನಿನ್ನ ಮಗಳನ್ನು ಕೊಡುವುದಾಗಿ ವಾಗ್ದಾನಮಾಡಿದುದು ?

ರಾಣಿ.—ಹೌದು! ಪರ್ವತನಿಗೇ ನಾನು ಮಾತುಕೊಟ್ಟುದು.

ರಾಜಂ—(ಚಿಂತೆಯಿಂದ ನಿಟ್ಟುಸಿರನ್ನು ಬಿಟ್ಟು) ಪ್ರಿಯೆ! ನಾವು ಮೋಸಹೋದೆವು! ನಾರದಮುನಿಯು ನನ್ನಲ್ಲಿ ಬಂದು ಕೇಳಿದುದರಿಂದ ಅವನಿಗೆ ನಾನು ವಾಗ್ದಾನವನ್ನು ಮಾಡಿಬಿಟ್ಟೆನು.ದೇವಿ!ಕೇವಲ ವಿರಕ್ತನಾದ ಆ ನಾರದನು ನನ್ನೊಡನೆ ವಿವಾಹಪ್ರಸ್ತಾವವನ್ನು ಎತ್ತಿದಾಗಲೇ ನನಗೆ ಸಂದೇಹವು ಹುಟ್ಟಿತು. ಈಗ ಆ ಸಂದೇಹವು ಸ್ಥಿರಪಟ್ಟಿತು! ಆ ಮಹರ್ಷಿಗಳಿಬ್ಬರೂ ತಮ್ಮೊಳಗೆ ತಾವು ರಹಸ್ಯದಲ್ಲಿ ಮಾತಾಡಿಕೊಂಡು ನಮ್ಮನ್ನು ಪರೀಕ್ಷಿಸುವುದಕ್ಕಾಗಿಯೇ ಹೀಗೆ ಮಾಡಿರುವರು ! ಈಗ ನಮ್ಮಿಬ್ಬರಲ್ಲಿ ಯಾರ ಮಾತು ಸುಳ್ಳಾಗಬೇಕು?ಪ್ರಿಯೆ! ಮುಖ್ಯವಾಗಿ ನಾವು ಧರ್ಮಸಂಕಟದಲ್ಲಿ ಸಿಕ್ಕಿಬಿದ್ದೆವು. ಮಾಡುವುದೇನು?

ರಾಣಿ.—ನಾಥಾ! ಮೊದಲು ಆ ಪರ್ವತಮುನಿಯು ಬಂದು ನನ್ನನ್ನು ಕೇಳಿದಾಗ, ನನಗೂ ಆ ಸಂದೇಹವೇ ಹುಟ್ಟಿತು. ಹಾಗಿದ್ದರೂ ಆ ಮಹರ್ಷಿಯು ಹೇಳಿದ ಮಾತುಗಳು ನಿರ್ವಂಚನೆಯಾಗಿ ತೋರಿದುದರಿಂದ, ನಾನು ಸಮ್ಮತಿಸಬೇಕಾಯಿತು. ನಮ್ಮಿಬ್ಬರನ್ನೂ ಧರ್ಮಸಂಕಟದಲ್ಲಿ ಸಿಕ್ಕಿಸಿ ವಂಚಿಸುವುದಕ್ಕಾಗಿಯೇ ನಾರದನು ಈ ಸಂವಿಧಾನವನ್ನು ಮಾಡಿರಬಹುದೆಂದು ಈಗ ಚೆನ್ನಾಗಿ ಸ್ಪಷ್ಟವಾಗುವುದು.

ರಾಜಂ.—(ಆಲೋಚಿಸಿ) ದೇವಿ! ಹಾಗೆ ನಿರ್ಧರಿಸುವುದಕ್ಕೂ ಸಾಧ್ಯವಿಲ್ಲ! ಸಾಧುವತ್ಸಲನಾದ ನಾರದನು ನನ್ನನ್ನು ವಂಚಿಸುವನೆಂದು ನನಗೆ ತೋರಲಿಲ್ಲ! ನಮ್ಮನ್ನು ವಂಚಿಸಿ ಅವನಿಗಾಗಬೇಕಾದುದೇನು? ಕಾಲವಶದಿಂದ ಎಂತಹ ಜಿತೇಂದ್ರಿಯರಿಗಾದರೂ ಬುದ್ಧಿಗಳು ಕದಲುವುದುಂಟು? ಅದರಂತೆ ಆ ತಾಪಸರಿಬ್ಬರೂ ನಿಜ.

ವಾಗಿಯೇ ನಮ್ಮ ಮಗಳ ರೂಪಕ್ಕೆ ಮೋಹಿಸಿ,ಒಬ್ಬರೊಬ್ಬರಿಗೆ ತಿಳಿಯದೆ ರಹಸ್ಯದಲ್ಲಿ ತಮ್ಮ ಕಾರ್ಯಸಿದ್ಧಿಗಾಗಿ ಯತ್ನಿಸಿದ್ದರೂ ಇರಬಹುದು. ಇಬ್ಬರೂ ಮಹಾತಪಸ್ವಿಗಳು ! ಅವರಿಬ್ಬರೂ ಆಶೋತ್ತರವನ್ನಿಟ್ಟುಕೊಂಡು ಹೋಗಿರುವರು. ಅವರಲ್ಲಿ ಯಾರನ್ನು ತಿರಸ್ಕರಿಸಬಹುದು ? ನಮಗಿರುವವಳೋ ಒಬ್ಬಳೇ ಮಗಳು। ಆವಳನ್ನು ಒಬ್ಬನಿಗೆ ಕೊಟ್ಟರೆ, ಮತ್ತೊಬ್ಬನಿಗೆ ಕೋಪವುಂಟಾಗುವುದೇನೋ ಸಹಜವು ! ನಮ್ಮಿಬ್ಬರಲ್ಲಿ ಯಾರಾದರೂ ಒಬ್ಬರು ಆಡಿದ ಮಾತಿಗೆ ತಪ್ಪಿದಂತೆಯೂ ಆಗುವುದು. ಅವರಿಬ್ಬರ ಮನಸ್ಸಿಗೂ ಅಸಮಾಧಾನವಿಲ್ಲದೆ, ನಾವೂ ದೋಷಭಾಗಿಗಳಾಗದೆ ಇರುವುದಕ್ಕೆ ಈಗ ಯಾವ ಉಪಾಯವನ್ನು ಮಾಡಬಹುದು. (ಸ್ವಲ್ಪಹೊತ್ತಿನವರೆಗೆ ಆಲೋಚಿಸಿ) ಪ್ರಿಯೆ! ಈವಿಚಾರದಲ್ಲಿ ನನಗೊಂದುಪಾಯವು ತೋರಿರುವುದು. ನಾಳೆ ಆ ನಾರದಪರ್ವತರಿಬ್ಬರಿಗಾಗಿಯೇ ಸ್ವಯಂವರವನ್ನೇರ್ಪಡಿಸುವೆವು. ನಮ್ಮ ಕುಮಾರಿಯು ಅವರಿಬ್ಬರಲ್ಲಿ ತನ್ನಮನಸ್ಸಿಗೊಪ್ಪಿದವನನ್ನು ವರಿಸಲಿ! ಆಗ ನಮ್ಮಮೇಲಿನ ಭಾರವು ತಪ್ಪುವುದು. ತಮ್ಮ ರೂಪಸಂಪತ್ತಿಯಿಂದ, ಕನ್ಯೆಯ ಮನಸ್ಸನ್ನು ಮೋಹಗೊಳಿಸತಕ್ಕ ಭಾರವು ಅವರಮೇಲೆಯೇ ಬೀಳುವುದು! ಇದೇ ಈಗ ನನಗೆ ಕಾಲೋಚಿತವಾದ ಉಪಾಯವೆಂದು ತೋರುವುದು ನಿನ್ನ ಅಭಿಪ್ರಾಯವೇನು ಹೇಳು !

ರಾಣಿ.—ಇದರಮೇಲೆ ನಾನು ಹೇಳತಕ್ಕದ್ದೇನಿದೆ ?

ರಾಜಂ —ಹಾಗಿದ್ದರೆ ಬಾ ಹೋಗುವೆವು! ಆಮಹರ್ಷಿಗಳಿಬ್ಬರೂ ಇಷ್ಟರಲ್ಲಿ ಸ್ನಾನವನ್ನು ಮುಗಿಸಿಕೊಂಡು ಬಂದಿರಬಹುದು. ಅವರಿಗೆ ಆತಿಥ್ಯವನ್ನು ನಡೆಸಿದಮೇಲೆ ನಾವೇ ವಿನಯಪೂರ್ವಕವಾಗಿ ಈ ವಿಚಾರವನ್ನು ತಿಳಿಸಿಬಿಡುವೆವು. (ಎಂದು ಹೋಗುವರು)

ಇದು ಮೂರನೆಯ ಅಂಕವು.

ಚತುರ್ಥಾಂಕವು.

ಆಸ್ಥಾನ.—ಪುರವೀಥಿ.

(ನಾರದನು ಆಶಾಭಂಗದಿಂದ ಚಿಂತಾಕುಲನಾಗಿ ಪ್ರವೇಶಿಸುವನು.)

ನಾರದಂ—(ಕೈಹಿಸುಕುತ್ತ) ಆಹಾ! ಎಂತಹ ಮೋಸವಾಯಿತು! ನಾನು ಮಾಧ್ಯಾಹ್ನಿಕಕ್ಕಾಗಿ ನದಿಗೆ ಹೋಗಿ ಬರುವಷ್ಟರಲ್ಲಿ, ಆ ಪರ್ವತನು ಏನೋ ಕಪಟತಂತ್ರವನ್ನು ಮಾಡಿ ನನ್ನ ಉದ್ದೇಶಕ್ಕೆ ಭಂಗವನ್ನು ತಂದುಬಿಟ್ಟನಲ್ಲಾ! ಆ ಪರ್ವತನಿಗೂ ಹೀಗೆ ಸ್ತ್ರೀ ಮೋಹವು ಹುಟ್ಟುವುದೆಂದು ನಾನೆಂದಿಗೂ ಎಣಿಸಿರಲಿಲ್ಲ! ಪರ್ವತನು ಆಗ ಉದ್ಯಾನದಿಂದ ಏಕಾಕಿಯಾಗಿ ಎದ್ದು ಹೊರಟು ಹೋದಾಗಲೇ ನನಗೆ ಸಂದೇಹವು ಹುಟ್ಟಿತು. ಅವನು ಆಗಿನಿಂದ ನನ್ನ ಕಣ್ಮರೆಯಾಗಿ ತಿರುಗುತ್ತಿರುವುದಕ್ಕೂ ಈಗ ಕಾರಣವು ಸ್ಪಷ್ಟವಾಯಿತು! ಆ ಪರ್ವತನು ನನ್ನೊಡನೆ ಸ್ಪರ್ಧೆಗೆ ನಿಂತು ಕಲಹವನ್ನೆಬ್ಬಿಸಿರುವುದರಿಂದಲೇ, ರಾಜನು ನಾಳೆ ನಮ್ಮಿಬ್ಬರಿಗಾಗಿ ಸ್ವಯಂವರವನ್ನೇರ್ಪಡಿಸುವುದಾಗಿ ಹೇಳಿರುವನು. ಮುಖ್ಯವಾಗಿ ನಾನು ಮಾಡಿದುದು ತಪ್ಪು! ರಾಜನು ತನ್ನ ಮಗಳನ್ನು ನನಗೆ ವಿವಾಹಮಾಡಿಕೊಡುವ ವಿಷಯದಲ್ಲಿ ಸ್ವಲ್ಪಮಾತ್ರ ಸಮ್ಮತಿಯನ್ನು ತೋರಿಸಿದಮಾತ್ರಕ್ಕೆ ಅಲ್ಪಸಂತೋಷಿಯಾದ ನಾನು, ಅಷ್ಟರಲ್ಲಿಯೇ ತೃಪ್ತನಾಗಿ ಬಂದುಬಿಟ್ಟೆನು. ಆಗಲೇ ನಾನು ಆ ರಾಜನಿಂದ ಇನ್ನೂ ದೃಢವಾದ ವಾಗ್ದಾನವನ್ನು ಪಡೆದು ಬಂದಿದ್ದರೆ ಇಷ್ಟಕ್ಕೆ ಅವಕಾಶವಾಗುತ್ತಿರಲಿಲ್ಲ. ಅಥವಾ ಕಾರ್ಯಸಿದ್ಧಿಯಾಗುವವರೆಗೆ ನಾನು ಆ ರಾಜನ ಹಿಂದೆಯೇ ತಿರುಗುತಿದ್ದರೂ, ಅವನ ಮನಸ್ಸನ್ನು ಕೆಡಿಸುವುದಕ್ಕೆ ಪರ್ವತನಿಗೆ ಅವಕಾಶವು ಸಿಕ್ಕುತ್ತಿರಲಿಲ್ಲ. ಮುಖ್ಯವಾಗಿ ನಾನು ಈ ಸಮಯದಲ್ಲಿ ಮಾಧ್ಯಾಹ್ನಿಕಕ್ಕಾಗಿ ನದಿಗೆ

ಹೋದುದೇ ತಪ್ಪಾಯಿತು! ಮಾಧ್ಯಾಹ್ನಿಕವನ್ನು ನಂಬಿ ನಾನು ಮೋಸಹೋದೆನು. ಆ ಮಾಧ್ಯಾಹ್ನಿಕವೇ ನನ್ನನ್ನು ಕೆಡಿಸಿತು! ಆ ವೈದಿಕಮಾರ್ಗಕ್ಕೂ, ಈ ಕಾಮಮಾರ್ಗಕ್ಕೂ ಸಂಬಂಧವೆಲ್ಲಿ! ಯೋಗಿಗಳ ಮಾರ್ಗವೇ ಬೇರೆ!ಭೋಗಿಗಳ ಮಾರ್ಗವೇ ಬೇರೆ! ಅದಕ್ಕೂ ಇದಕ್ಕೂ ಗಂಟುಹಾಕಿದರೆ ಸರಿಬಿಳುವುದೆ? ಇದರಿಂದ ನಾನು ಆಶಾಭಂಗಕ್ಕೂ, ಅಪಹಾಸ್ಯಕ್ಕೂ ಗುರಿಯಾಗುವಂತಾಯಿತಲ್ಲಾ!ಇದಕ್ಕೇನು ಮಾಡಲಿ! ಅಥವಾ ಇರಲಿ! ಈಗ ನಾನು ಕೈಹಿಡಿದ ಕಾರ್ಯಕ್ಕೆ ಇವೆಲ್ಲವೂ ಸಹಜವಾದ ಲಕ್ಷಣಗಳೇ ಆಗಿರುವುವು. ಇದಕ್ಕಾಗಿ ಚಿಂತೆಯೇಕೆ?ಕಾಮಿಗಳ ಅವಸ್ಥೆಯೇ ಈ ವಿಧವಾದುದು !

ಕಂ॥ ಅವಮಾನಕ್ಕೀಡಾಗದೆ ।
ಯವಿರತಚಿಂತಾಗ್ನಿಯಿಂದ ಬೇಯದೆ ವಿಘ್ನ ।
ವ್ಯವಧಿಯೊಳಳಲದೆ ಕಾಮುಕ ।
ನಿವಹಕ್ಕೆ ನಿಜೇಷ್ಟಸಿದ್ಧಿ ಸುಖದಿಂದಹುದೇ?

ಆದುದರಿಂದ ಈಗ ನಾನು ಹಿಡಿದ ಕಾರ್ಯದಲ್ಲಿ ಎಷ್ಟೋ ಅವಮಾನವಾದರೂ ಆಗಲಿ ! ಎಷ್ಟೋ ವಿಘ್ನಗಳು ಬಂದರೂ ಬರಲಿ! ಎಷ್ಟೋ ವಿಧದಲ್ಲಿ ಆಶಾಭಂಗವಾದರೂ ಆಗಲಿ! ಹಿಂತೆಗೆಯಬಾರದು! ರಾಜನು ನಮಗೆ ಮಾಡಬೇಕಾದ ಆತಿಥ್ಯವನ್ನುಮುಗಿಸಿ ಸ್ವಯಂವರಪ್ರಸ್ತಾವನ್ನು ಹೇಳಿದಕೂಡಲೆ, ಪರ್ವತನು, ಅಲ್ಲಿ ನಿಮಿಷಮಾತ್ರವೂ ನಿಲ್ಲದೆ ಹೊರಟುಹೋದನು. ಅವನಿಗೂ ನನ್ನಂತೆ ಆಶಾಭಂಗವುಂಟಾದುದಕ್ಕಾಗಿ ನಾಚಿಕೆಯಿಂದ ನನಗೆ ಮುಖವನ್ನು ತೋರಿಸಲಾರದೆ ಹೊರಟುಹೋದನೋ,ಇಲ್ಲವೇ ಬೇರೆ ಕಾರ್ಯೋದ್ದೇಶದಿಂದ ಹೋದನೋ ತಿಳಿಯುವುದಕ್ಕಿಲ್ಲ ! ಹೇಗಾದರೂ ಇರಲಿ!ನಾನೂ ಅದನ್ನೇ ಬಯಸುತಿದ್ದೆನು. ಈಗ ನಾನು ನಾಳೇ ಸ್ವಯಂವರಕಾಲದಲ್ಲಿ ಶ್ರೀಮತಿಯು ಅವನನ್ನು

ವರಿಸದಹಾಗೆ ಮಾಡಬೇಕು. ಇದಕ್ಕೇನುಪಾಯವನ್ನು ಮಾಡಲಿ! (ಚಿಂತೆಯನ್ನು ನಟಿಸಿ) ಓಹೋ ತಿಳಿಯಿತು! ಈಗಲೇ ನಾನು ಕ್ಷೀರಾಬ್ಧಿಗೆ ಹೋಗಿ, ನನ್ನ ವೀಣಾಗಾನದಿಂದ ಭಗವಂತನ ನ್ನೊಲಿಸಿ, ಆ ಸ್ವಯಂವರಕಾಲದಲ್ಲಿ ಪರ್ವತನ ಮುಖವು ಕೇವಲ ವಿಕೃತವಾಗಿ ಕಾಣುವಂತೆ ವರವನ್ನು ಪಡೆದು ಬರುವೆನು. ಪರ್ವತನು ತನ್ನ ಚೇಷ್ಟೆಗೆ ತಕ್ಕ ಫಲವನ್ನನುಭವಿಸಲಿ! ಪರ್ವತ ನೂ ಇತ್ತಲಾಗಿಯೇ ಬರುತ್ತಿರಬಹುದು. ಅವನ ಕಣ್ಣಿಗೆ ಬೀಳದೆ ಈ ಮಾರ್ಗವಾಗಿ ಹೊರಟುಹೋಗುವೆನು.

(ಎಂದು ಹೋಗುವನು)

(ಪರ್ವತನು ಪ್ರವೇಶಿಸುವನು)

ಪರ್ವತಂ—(ಆಶ್ಚರ್ಯದಿಂದ ನಗುತ್ತ) ಆಹಾ ಮೋಹಪಾಶವೆಂಬುದು ಎಂತವರನ್ನೂ ಬಿಟ್ಟುದಲ್ಲ! ನನಗೆ ಆಗಾಗ ವಿರಕ್ತಿಮಾರ್ಗದಲ್ಲಿ ಎಚ್ಚರಿಸುತಿದ್ದ ನಾರದನು, ನನಗೆ ಮೊದಲೇ ಈ ಕಾಮಮಾರ್ಗ ದಲ್ಲಿ ಪ್ರವರ್ತಿಸಿರುವಾಗ, ನನ್ನ ವಿಷಯಕ್ಕಾಗಿ ನಾನು ಪರಿತಪಿಸಬೇಕಾದುದೇನು? ಈ ಪ್ರಯತ್ನದಲ್ಲಿ ನಾರದನಿಗೂ ನನಗೂ ಇದ್ದ ಪರಸ್ಪರಸ್ನೇಹಕ್ಕೆ ಭಂಗವುಂಟಾಗುವುದರಲ್ಲಿ ಸಂದೇಹ ವಿಲ್ಲ. ಆದರೇನು? ಈಗ ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಕಾರ್ಯವನ್ನು ಕೆಡಿಸಿಕೊಳ್ಳಬಾರದು. ನಮ್ಮಿಬ್ಬರ ಪ್ರಯತ್ನವನ್ನು ನೋಡಿ ರಾಜನು ಏನೇನೋ ಉಪಾಯದಿಂದ ತಾನು ಮಾತಿಗೆ ಸಿಕ್ಕದೆ ಸ್ವಯಂವರವೆಂಬ ವ್ಯಾಜವನ್ನಿಟ್ಟು ನಮ್ಮಮೇಲೆಯೇ ಭಾರ ವನ್ನು ಹೊರಿಸಿಬಿಟ್ಟನು. ಕಾರ್ಯಭಾರವು ಈಗ ನಮ್ಮಮೇಲೆಯೇ ಬಿದ್ದಿತು. ಮುಖ್ಯವಾಗಿ ನಾಳೆ ಸ್ವಯಂವರದಲ್ಲಿ ಶ್ರೀಮ ತಿಯು ನಾರದನನ್ನು ವರಿಸದಹಾಗೆ ಮಾಡುವುದಕ್ಕೆ ಉಪಾ ಯವನ್ನು ಹುಡುಕಬೇಕು. ಇದಕ್ಕೇನು ಮಾಡಲಿ! (ಎಂದು

ಯೋಚಿಸುತ್ತ) ಓಹೋ ತಿಳಿಯಿತು! ಈಗಲೇ ನಾನು ಶ್ರೀ ವೈಕುಂಠಕ್ಕೆ ಹೋಗಿ, ಭಕ್ತವತ್ಸಲನಾದ ಭಗವಂತನನ್ನೊಲಿಸಿ,ನಾಳೆ ಸ್ವಯಂವರಕಾಲದಲ್ಲಿ ನಾರದನ ಮುಖವನ್ನು ನೋಡಿದ ಮಾತ್ರಕ್ಕೆ ಶ್ರೀಮತಿಗೆ ಅಸಹ್ಯವುಂಟಾಗುವಂತೆ ವರವನ್ನು ಪಡೆದುಬರುವೆನು. ಈ ಸಂದರ್ಭದಲ್ಲಿ ಸ್ವಕಾರ್ಯ ಸಾಧನೆಯೊಡನೆ ಆ ನಾರದನಿಗೆ ದೊಡ್ಡ ಅವಮಾನವನ್ನೂ ಉಂಟುಮಾಡದಿದ್ದರೆ ನಾನು ಪರ್ವತನೆ? ಇನ್ನು ಕಾಲವಿಳಂಬವು ಸಾಕು ! (ಹೋಗುವನು.

ಆಸ್ಥಾನ - ಕ್ಷೀರಾಬ್ಧಿ:

* (ಮಹಾವಿಷ್ಣುವು ಶೇಷಶಯನದಲ್ಲಿ ಲಕ್ಷ್ಮೀದೇವಿಯೊಡನೆ ಪಗಡೆಯನ್ನಾಡುತ್ತಿರುವನು.)

(ಶ್ರೀವಿಷ್ಣುವಿನ ಮುಖದಲ್ಲಿ ಅಕಾರಣಹಾಸ್ಯವನ್ನು ನೋಡಿ ಲಕ್ಷ್ಮಿಯು ಆಟವನ್ನು ನಿಲ್ಲಿಸಿ.)

ಲಕ್ಷ್ಮಿ.—ನಾಥಾ ! ಇದೇನು ? ನಿಷ್ಕಾರಣವಾಗಿ ನಗುವುದೇಕೆ ?

ರಾಗೆ. ತಾಳ.

ವಿಷ್ಣು.—ನೋಡು ನೋಡೆಲೆ । ನೀರಜಾಕ್ಷಿ ನಾ । ನಾಡುವಾಟವ॥ ನೀಗಲೆ॥
ಕಾಂತೆಯೆನ್ನೊಳ । ಗಿಂತು ಪಂಥವ । ನಾಂತು ನೀ।ಜೈಸುವ । ಚಿಂತೆಯ
ಬಿಡುಬಿಡು ॥

ಲಕ್ಷ್ಮಿ.—ನೋಡಲೇಕೆ । ಬಲ್ಲೆ ನಿನ್ನ । ಗಾಡಿತನವನು ॥ ಕಾಂತ ಕೇಳ್ ॥
ಕಾಲಸೂತ್ರದ । ಜಾಲದಿಂ ಭುವ । ನಾಳಿಯ। ನಾಡಿಪ । ಲೀಲೆಯಿದಲ್ಲವು॥

ವಿಷ್ಣು.—ಸುಂದರೀಮಣಿ । ಮುಂದೆ ನೋಡಿದೊ ।
ಕೊಂದೆನು ಕಾಯ್ಗಳ । ಹಿಂದಕೆ ತೆಗೆತೆಗೆ ॥

ಲಕ್ಷ್ಮಿ.—ಎಲ್ಲ ಲೋಕವ । ಕೊಲ್ಲುವ ಸಾಸವು ।
ಸಲ್ಲದೀ ಯಾಟದೊಳ್ । ಬಲ್ಲೆನಾಂ ಬಿಡುಬಿಡು ॥

ವಿಷ್ಣು.—ನಗುವುದಕ್ಕೆ ಕಾರಣವುಂಟು.

ಲಕ್ಷ್ಮಿ.—ಏನದು ? ಅದನ್ನು ನನಗೂ ತಿಳಿಸಬಾರದೆ ?

ವಿಷ್ಣು.—ಮುಂದೆ ನಿನಗೆ ಆ ವಿಚಾರವು ತಾನಾಗಿಯೇ ಗೊತ್ತಾಗುವುದು ಅದೊಂದು ರಹಸ್ಯವಾದ ಸಂಗತಿ !

ಲಕ್ಷ್ಮಿ.—ನಾಥಾ! ನಿನಗೆ ನನ್ನಲ್ಲಿಯೂ ಮರೆಸಿಡತಕ್ಕ ರಹಸ್ಯವುಂಟೆ ನೀನು ಹೇಳದೆ ಮರೆಸಿದಷ್ಟೂ, ನನಗೆ ಅದನ್ನು ಕೇಳಿಯೇ ತೀರ ಬೇಕೆಂಬ ಹಟವೂ,ಕುತೂಹಲವೂ ಹೆಚ್ಚುತ್ತಿರುವುದು. ಅದೇನು ಹೇಳು!

ವಿಷ್ಣು.—ಪ್ರಿಯೆ ! ನಾದರ ಪರ್ವತರೆಂಬ ಮಹರ್ಷಿಗಳಿಬ್ಬರೂ ಪರಮ ವೈರಾಗ್ಯ ನಿಷ್ಠರೆಂಬುದನ್ನು ನೀನೂ ಕೇಳಿ ಬಲ್ಲೆಯಷ್ಟೆ.

ಲಕ್ಷ್ಮಿ.—ಆಹಾ! ಚೆನ್ನಾಗಿ ಕೇಳಿಬಲ್ಲೆನು. ಜಿತೇಂದ್ರಿಯರೆಂದರೆ ಅವರಿಗೇ ಸಲ್ಲುವುದು.

ವಿಷ್ಣು.—ಅವರಿಬ್ಬರೂ ಒಂದು ಸ್ತ್ರೀವ್ಯಕ್ತಿಯನ್ನು ನೋಡಿ ಮೋಹಿತರಾಗಿರುವರು. ಅವಳನ್ನು ಹೇಗಾದರೂ ವಿವಾಹವಾಗಬೇಕೆಂಬ ಉದ್ದೇಶದಿಂದ ಇಬ್ಬರೂ ಯತ್ನಿಸುತ್ತಿರುವರು. ಈ ಹೆಣ್ಣಿನ ವಿಚಾರವಾಗಿಯೇ ಆಬಾಲ್ಯಸ್ನೇಹದಿಂದ ಏಕದೇಹದಂತಿದ್ದ ಅವರವರಲ್ಲಿಯೇ ಅಂತಃಕಲಹವುಂಟಾಗಿ, ಒಬ್ಬರನ್ನೊಬ್ಬರು ವಂಚಿಸುವುದಕ್ಕೂ ಉಪಾಯವನ್ನು ಹುಡುಕುತ್ತಿರುವರು.

ಲಕ್ಷ್ಮಿ.—(ಆಶ್ಚರ್ಯದಿಂದ) ಏನಿದು ! ಅಂತಹ ಪರಮವಿರಕ್ತರೂ ಕಾಮ ಪಾಶದಲ್ಲಿ ಕಟ್ಟುಬಿದ್ದರೆ? ನಾಥಾ! ಸ್ತ್ರೀಯರ ಪ್ರಭಾವವನ್ನು ನೋಡಿದೆಯಾ ? ಎಷ್ಟೇ ಧೀರರನ್ನಾದರೂ ಆಕರ್ಷಿಸತಕ್ಕ ಶಕ್ತಿಯು ನಮ್ಮಲ್ಲಿರುವುದು. ಸ್ತ್ರೀವಶ್ಯನಲ್ಲದ ಪುರುಷನೊಬ್ಬನೂ ಇಲ್ಲವೆಂಬುದು ಈಗಲಾದರೂ ನಿನಗೆ ವ್ಯಕ್ತವಾಯಿತೆ ?

ವಿಷ್ಣು.—ಪ್ರಿಯೆ ! ಇದು ಸ್ತ್ರೀಯರ ಪ್ರಭಾವವಲ್ಲ ! ನನ್ನ ಮಾಯೆಯ ಪ್ರಭಾವವೆಂದು ತಿಳಿ !

ಲಕ್ಷ್ಮಿ.—ನಾಥಾ ! ಹಾಗಿದ್ದರೂ. ಆ ನಿನ್ನ ಮಾಯೆಗೂ ಸ್ತ್ರೀಲಿಂಗಸಂಬಂಧದಿಂದಲೇ ಈ ವಶೀಕರಣಶಕ್ತಿಯುಂಟಾಗಿರಬೇಕು !

ವಿಷ್ಣು.—ಪ್ರಿಯೆ! ಇಷ್ಟುಮಾತ್ರಕ್ಕಾಗಿಯೇ ನೀನು ನಿಮ್ಮ ಸ್ತ್ರೀಜಾತಿಯ ಹೆಮ್ಮೆಯನ್ನು ಹೇಳಿಕೊಳ್ಳಬೇಡ!ಆ ಸ್ತ್ರೀಯರೇ ಮಹಾನರ್ಥಕ್ಕೆ ಮೂಲವೆಂಬುದನ್ನೂ,ಆ ಸ್ತ್ರೀಮೋಹಪಾಶದಲ್ಲಿ ಸಿಕ್ಕಿಬಿದ್ದವರ ಸ್ಥಿತಿಯು ಲೋಕದಲ್ಲಿ ಕೇವಲಹಾಸ್ಯಾಸ್ಪದವಾಗುವುದೆಂಬುದನ್ನೂ ನೀನು, ಇನ್ನು ಸ್ವಲ್ಪಕಾಲದೊಳಗಾಗಿ, ಈ ನಾರದಪರ್ವತರ ದೃಷ್ಟಾಂತದಿಂದಲೇ ತಿಳಿಯಬಹುದು.

ಲಕ್ಷ್ಮಿ.—(ನಗುತ್ತ) ಸ್ತ್ರೀಯರು !ಅನರ್ಥಹೇತುಗಳೆಂಬುದು ಹಾಗಿರಲಿ! ಪುರುಷೋತ್ತಮನೆನಿಸಿಕೊಂಡ ನೀನು, ಈಗ ನಿನ್ನ ಭಕ್ತರಾದ ನಾರದಪರ್ವತರನ್ನೇ ಹೀಗೆ ಮಾಯಾಪಾಶದಲ್ಲಿ ಕಟ್ಟಿ,ಅಪಹಾಸ್ಯಕ್ಕೆ ಗುರಿಮಾಡಿದಮೇಲೆ ಪುರುಷರನ್ನು ಹೇಗೆ ನಂಬಬಹುದು?

ವಿಷ್ಣು.—ದೇವಿ! ಹಾಗಲ್ಲ! ಮನುಷ್ಯನಲ್ಲಿ ಎಷ್ಟೇ ಗುಣಗಳಿದ್ದರೂ, ಅದರಿಂದ ಅವನ ಮನಸ್ಸಿನಲ್ಲಿ ಹೆಮ್ಮೆಯುಂಟಾದಾಗ,ಅದನ್ನಡಗಿಸಿ, ಅವನನ್ನು ಸನ್ಮಾರ್ಗದಲ್ಲಿರಿಸಬೇಕಾದುದು ನನ್ನ ಸಂಕಲ್ಪವು. ಅದರಂತೆಯೇ ಈಗ ನಾರದಪರ್ವತರಿಗೆ ತಾವೇ ಪರಮವಿರಕ್ತರೆಂಬ ಹೆಮ್ಮೆಯು ಅಂಕುರಿಸುತ್ತಿರುವುದನ್ನು ನೋಡಿ,ಅದನ್ನಡಗಿಸುವುದಕ್ಕಾಗಿ ನಾನು ಹೀಗೆ ಮಾಡಬೇಕಾಯಿತೇಹೊರತು ಬೇರೆಯಲ್ಲ ! ಅಷ್ಟೇಕೆ ? ಹಿಂದೊಮ್ಮೆ ನಾರದನು ನನ್ನನ್ನು ನೋಡಲು ಬಂದಾಗ, ನಿನ್ನೊಡನೆ ಸುಖಾಸೀನನಾಗಿದ್ದನನ್ನನ್ನು ನೋಡಿ ಯಾವಾಗಲೂ ಸ್ತ್ರೀಲೋಲನೆಂದು ಪರಿಹಾಸ್ಯಮಾಡಿರುವನು. ಈತನ ವೈರಾಗ್ಯಮದವನ್ನಡಗಿಸಬೇಕೆಂಬುದು

ನನ್ನ ಈಗಿನ ಉದ್ದೇಶವು. ಇದಲ್ಲದೆ ಮುಂದೆ ಇದರಿಂದ ಲೋಕಕ್ಷೇಮಕರವಾದ ಮತ್ತೊಂದುಕಾರ್ಯವೂ ನಡೆಯಬೇಕಾಗಿರುವುದು-

(ತೆರೆಯಲ್ಲಿ ಗಾನಧ್ವನಿ)

* (ನಾರದನು ಗಾನನರ್ತನಗಳೊಡನೆ ಸ್ತುತಿಸುತ್ತ ಬರುವನು.)

ನಾರದಂ.—ದೇವಾ ! ವಂದಿಸುವೆನು.

ವಿಷ್ಣು.—ಮುನೀಂದ್ರಾ ! ಸುಖಾಗಮನವೆ ! ಇದೇನು ? ಆಕಸ್ಮಿಕವಾಗಿ ನೀನಿಲ್ಲಿಗೆ ಬರಲು ಕಾರಣವೇನು ?, ವಿಶೇಷವೇನೂ ಇಲ್ಲವಷ್ಟೆ?

ನಾರದಂ—ದೇವಾ ! ಈಗ ನಾನೊಂದು ಅವಶ್ಯಕಾರ್ಯವನ್ನುದ್ದೇಶಿಸಿಯೇ ನಿನ್ನಲ್ಲಿಗೆ ಬಂದಿರುವೆನು.ಭಕ್ತವತ್ಸಲನಾದ ನೀನು ನನ್ನ ಉದ್ದೇಶವನ್ನು ಈಡೇರಿಸಿಕೊಡಬೇಕು.

ವಿಷ್ಣು—ನಾರದಮುನೀಂದ್ರಾ। ಸಂಕೋಚವೇಕೆ? ನಿನ್ನ ಅಭಿಮತವನ್ನು ತಿಳಿಸು. ಅವಶ್ಯವಾಗಿ ನಡೆಸಿಕೊಡುವೆನು. ಇದಕ್ಕಾಗಿ ಇಷ್ಟೊಂದು ಪೂರ್ವಪೀಠಿಕೆಯೇಕೆ ?

ಕಂ|| ಮನವೊಲ್ದು ಭಜಿಪ ಭಕ್ತರ
ಮನೋಭಿಮತಸಿದ್ಧಿಗೆಡೆಯನೀಯದಿರಲ್ ಮೇ
ದಿನಿಯೊಳ್ ಭಕ್ತಪರಾಧೀ
ನನೆಂಬ ಬಿರುದೆನಗೆ ಭಾರಮಾಗದೆ ಪೇಳಾ ||

ರಾಗ — ತಾಳ.

* ನಾರಾಯಣ । ನಿಖಿಲಲೋಕ । ಕಾರಣ ಕರು । ಣಾಕರ ।
ನೀರೇರುಹ । ದಳಲೋಚನ । ನಿರವಧಿಗುಣ । ಭೂಷಣ ||
ದೇವಾದಿದೇವ ಹರೀ । ಶ್ರೀವರ ಶೌರೀ ।
ಪಾವನ ಗುಣ । ಪಾಪಹಾರೀ । ಕಾವುದೈ ಮುರಾರೀ ||
ವಂದಾರು ಜ । ನಾನಂದನ । ಚಂದ್ರಸೂರ್ಯಲೋಚನ ।
ಕುಂದಕುಸುಮರುಚಿಸಮಾನ । ಮಂದಹಾಸವದನ ||



ಕ್ಷೀರಾಬ್ಧಿ— ಶ್ರೀಮತಿಯಲ್ಲಿ ಮೋಹಗೊಂಡ ನಾರದ ಪರ್ವತರಿಬ್ಬರೂ ಅನ್ಯೋನ್ಯಸ್ಪರ್ಧೆಯಿಂದ, ಒಬ್ಬರನ್ನೊಬ್ಬರು ವಂಚಿಸಲು, ಮಹಾವಿಷ್ಣುವಿನ ಬಳಿಗೆ ಬೇರೆಬೇರೆ ರಹಸ್ಯವಾಗಿ ಬಂದು ವರಗಳನ್ನು ಕೇಳಿದುದು.

(೨೯)

ಆದುದರಿಂದ ನಾನು ತಪ್ಪದೆ ನಿನ್ನ ಉದ್ದೇಶವನ್ನೀಡೇರಿಸಿ ಕೊಡುವೆನು. ನಿಸ್ಸಂಕೋಚವಾಗಿ ಕೇಳಬಹುದು.

ನಾರದಂ.—ದೇವಾ! (ಸಂಕೋಚದಿಂದ) ಅಂಬರೀಷಮಹಾರಾಜನಿಗೆ ಶ್ರೀಮತಿಯೆಂಬ ಕನ್ಯೆಯೊಬ್ಬಳಿರುವಳು. ನಾನು ಸಂಚಾರವಶದಿಂದ ಆ ರಾಜನ ಪಟ್ಟಣಕ್ಕೆ ಹೋದಾಗ, ಅಕಸ್ಮಾತ್ತಾಗಿ ಅವಳನ್ನು ನೋಡಿದೆನು. ಅವಳ ರೂಪಲಾವಣ್ಯಗಳಿಗೆ ಮೋಹಿತನಾಗಿ, ಅವಳನ್ನು ವಿವಾಹಮಾಡಿಕೊಳ್ಳಬೇಕೆಂಬ ಆಸೆಯಿಂದ ನಾನು ರಾಜನನ್ನು ಕೇಳಿಕೊಂಡೆನು. ರಾಜನು ನನ್ನ ಪ್ರಾರ್ಥನೆಯನ್ನು ನಡೆಸಿಕೊಡುವುದಾಗಿ ವಾಗ್ದಾನಮಾಡುವಷ್ಟರಲ್ಲಿ, ನನ್ನೊಡನೆ ಬಂದಿದ್ದ ಪರ್ವತನೂ ಆ ಕನ್ಯೆಯಮೇಲೆ ಕಣ್ಣಿಟ್ಟು, ಆಕೆಯನ್ನು ತನಗೆ ವಿವಾಹಮಾಡಿಕೊಳ್ಳಬೇಕೆಂದು ಪ್ರಯತ್ನಿಸಿದನು. ರಾಜನು ನಮ್ಮಿಬ್ಬರಲ್ಲಿ ಯಾರನ್ನೂ ನಿರಾಕರಿಸಲಾರದೆ, ನಾಳೆ ನಮ್ಮಿಬ್ಬರಿಗಾಗಿಯೇ ಸ್ವಯಂವರವನ್ನೇರ್ಪಡಿಸಿರುವನು. ಆ ಸ್ವಯಂವರಕಾಲದಲ್ಲಿ ಶ್ರೀಮತಿಯು ಪರ್ವತನನ್ನು ವರಿಸದಹಾಗೆ ಮಾಡಬೇಕು. ಇಷ್ಟೇ ನನ್ನಪ್ರಾರ್ಥನೆ!

ವಿಷ್ಣು.—(ಆಶ್ಚರ್ಯವನ್ನು ನಟಿಸುತ್ತ) ಅಹಾ! ನಾರದಾ! ಇದೇನು? ದೇವಸಭೆಯಲ್ಲಿ ರಂಭಾದ್ಯಪ್ಸರಸ್ತ್ರೀಯರ ಗಾನನರ್ತನಗಳನ್ನು ನೋಡುವಾಗಲೂ, ಅವರ ರೂಪಕ್ಕೆ ಮೋಹಿಸದೆ ಜಿತೇಂದ್ರಿಯನಾಗಿದ್ದ ನಿನ್ನನ್ನೂ ಮೋಹಪಾಶದಲ್ಲಿ ಸಿಕ್ಕಿಸಬೇಕಾದರೆ, ಆ ಕನ್ಯೆಯ ಪ್ರಭಾವವು ಲೋಕಾದ್ಭುತವಾಗಿರಬೇಕಲ್ಲವೆ?

ನಾರದಂ.—ದೇವಾ! ಅದನ್ನು ಹೇಳಿ ಪ್ರಯೋಜನವೇನು.

ಕಂ|| ಸುರರ್ಗಮೃತಮನೀವೆಡೆಯೊಳ್
ಹರನಂ ವೃಕಬಾಧೆಯಿಂದ ರಕ್ಷಿಸುವೆಡೆಯೊಳ್
ಹರಿ! ನೀಂ ಧರಿಸಿದ ನಾರೀ
ಸ್ವರೂಪಮೇ ಮತ್ತಮಿಲ್ಲಿ ಬಂದಂತಿರ್ಕ್ಕುಂ ||

ವಿಷ್ಣು.—ನಾರದಾ! ಹಾಗಿದ್ದರೆ ನೀನು ಮೋಹಿಸಿದುದು ಯುಕ್ತವೆ ! ಇದಕ್ಕಾಗಿ ನನ್ನಿಂದಾಗಬೇಕಾದ ಸಹಾಯವೇನು ?

ನಾರದಂ.—ಬೇರೇನೂ ಇಲ್ಲ ! ನಾಳೆ ಪರ್ವತನು ಸ್ವಯಂವರಮಂಟಪವನ್ನು ಪ್ರವೇಶಿಸಿದೊಡನೆ, ಆತನ ಮುಖವು ಕಪಿಯಂತೆ ಕಾಣಿಸಬೇಕು. ಇದೇ ನನ್ನ ಪ್ರಾರ್ಥನೆ !

ವಿಷ್ಣು.—ನಾರದಾ! ನಿನ್ನ ಇಷ್ಟದಂತೆಯೇ ಆಗಲಿ !

ನಾರದಂ.—ದೇವಾ! ಧನ್ಯನಾದೆನು. ನಿನಗೆ ಜಯವಾಗಲಿ! ವಂದಿಸುವೆನು ನಾನು ಹೋಗಿಬರುವೆನು. (ಹಾಡುತ್ತ ಹೋಗುವನು.)

ವಿಷ್ಣು.—ದೇವಿ! ಕಾಮಿಗಳ ಸ್ವಭಾವವನ್ನು ನೋಡಿದೆಯಾ! ಮನಸ್ಸಿನಲ್ಲಿ ಕಾಮವು ಅಂಕುರಿಸುವಾಗಲೇ, ಕ್ರೋಧ,ದ್ವೇಷ, ಮಾತ್ಸರ್ಯ, ಮೊದಲಾದ ದುರ್ಗುಣಗಳೆಲ್ಲವೂ ತಲೆಯೆತ್ತುವುವು. ಏಕದೇಹ ನ್ಯಾಯದಿಂದ ಅನ್ಯೋನ್ಯವಾಗಿದ್ದ ನಾರದಪರ್ವತರ ಸ್ನೇಹವು ಯಾವರೀತಿಯಲ್ಲಿ ಪರಿಣಮಿಸಿತು ನೋಡು ! ಮಾತ್ಸರ್ಯದಿಂದ ಒಬ್ಬರನ್ನೊಬ್ಬರು ವಂಚಿಸುವುದಕ್ಕೆ ಯತ್ನಿಸಿರುವರು. ಇದೋ! ಈಗಲೇ ಪರ್ವತನೂ ಇದೇ ಉದ್ದೇಶದಿಂದ ನನ್ನಲ್ಲಿಗೆ ಬರುವನು ನೋಡು !

(ತೆರೆಯಲ್ಲಿ ಗಾನಧ್ವನಿ.)

* (ಪರ್ವತನು ಹರಿಕೀರ್ತನೆಯನ್ನು ಮಾಡುತ್ತಬರುವನು.)

ರಾಗ ಸುರಟಿ ತಾಳ.

* ನಿರವಧಿ ಕರುಣಾ । ಶರನಿಧಿ ಪಾಲಿಸು । ಸರೋಜಭವನಮಿತಾ ।
ಪರಾತ್ಪರ । ಪುರಾರಿಮುಖವಿನುತಾ ॥
ಜಲರುಹಲೋಚನ । ಜಹ್ನುಸುತಾಪಿತ ।
ಕಲಿಮಲಭಂಜನ । ಕರಿವರದಾ ॥

ಪರ್ವತಂ,—ದೇವಾ! ವಂದಿಸುವೆನು.

ವಿಷ್ಣು.—ಪರ್ವತಮುನೀಂದ್ರಾ! ನೀನು ಆಕಸ್ಮಿಕವಾಗಿ ಇಲ್ಲಿಗೆ ಬಂದ ಕಾರ್ಯೋದ್ದೇಶವೇನು?

ಪರ್ವತಂ.—ದೇವಾ! ಲಾಲಿಸಬೇಕು. ನಾನೂ, ನಾರದನೂ,ಸಂಚಾರವಶದಿಂದ ಅಂಬರೀಷರಾಜನ ಪಟ್ಟಣಕ್ಕೆ ಹೋದೆವು.ಅಲ್ಲಿ ಆ ರಾಜನ ಮಗಳನ್ನು ಕಂಡು ನಾನು ಮೋಹಿತನಾಗಿ, ಅವಳನ್ನು ನನಗೆ ವಿವಾಹಮಾಡಿಕೊಡಬೇಕೆಂದು ರಾಜನನ್ನು ಕೇಳಿದೆನು.ನಾರದನೂ ಇದೇ ಉದ್ದೇಶದಿಂದ ನನಗೆ ಮೊದಲೇ ಆ ರಾಜನನ್ನು ಪ್ರಾರ್ಥಿಸಿದಂತಿದೆ. ರಾಜನು ನಮ್ಮಿಬ್ಬರಲ್ಲಿ ಯಾರನ್ನೂ ತಿರಸ್ಕರಿಸಲಾರದೆ, ನಾಳೆ ನಮ್ಮಿಬ್ಬರಿಗಾಗಿಯೇ ಸ್ವಯಂವರವನ್ನೇರ್ಪಡಿಸಿರುವನು. ಇದಕ್ಕಾಗಿ ಈಗ ನಾನು ನಿನ್ನಲ್ಲಿ ಪ್ರಾರ್ಥಿಸುವುದೇನೆಂದರೆ, ಆ ಸ್ವಯಂವರಕಾಲದಲ್ಲಿ ನಾರದನ ಮುಖವು ಆ ಕನ್ಯಕೆಗೆ ಕರಡಿಯಂತೆ ಕಾಣಬೇಕು. ಇದೇ ನನ್ನ ಕೋರಿಕೆ?

ವಿಷ್ಣು.—ಮುನೀಂದ್ರಾ! ಪರಮಭಕ್ತನಾದ ನಿನಗೆ ಈ ಅಲ್ಪಕಾರ್ಯವನ್ನು ನಡೆಸಿಕೊಡುವುದೊಂದು ದೊಡ್ಡದೆ! ನಿನ್ನ ಇಷ್ಟದಂತೆಯೇ ಆಗಲಿ! ನನ್ನಲ್ಲಿ ಬಂದು ಮರೆಹೊಕ್ಕವರೊಬ್ಬರೂ ವಿಫಲಪ್ರಯತ್ನರಾಗಿ ಹೋಗಬಾರದು.ಆದರೆ ನಾರದನೂ ಇದೇ ಉದ್ದೇಶದಿಂದ ಬಂದು ನನ್ನಲ್ಲಿ ಪ್ರಾರ್ಥಿಸಿದರೆ ಆಗ ನಾನು ಮಾಡಬೇಕಾದುದೇನೆಂದು ಯೋಚಿಸುವೆನು.

ಪರ್ವತಂ—ದೇವಾ! ಆ ಚಿಂತೆಯು ನಿನಗೇಕೆ? ಮೊದಲು ನಾರದನಿಗೆ ಈ ಯುಕ್ತಿಯೇ ತೋರಲಾರದು. ಅದನ್ನು ನಾನು ಬಲ್ಲೆನು.

ವಿಲಸಿತಮುನಿಜನ । ಮಾನಸರಂಜನ । ಮನೋಜ್ಞಗುಣಶರಣಾ ॥
ನಿರಂಜನ । ವಿರೋಧಿಮದಹರಣಾ ॥
ಮಂಗಳಮಹಿಮ ಶ್ರೀ । ರಂಗ ಶುಭಾಂಗ ಭು ।
ಜಂಗಶಯನ ರವಿ । ಶಶಿನಯನಾ ।
ಅಂಗಜಜನಕ ವಿ । ಹಂಗವರೇಶ್ಯತು। ರಂಗ ದುರಿತಭಂಗಾ ॥
ಕೃಪಾರಸ । ರಂಜಿತಸದಪಾಂಗಾ ॥

ವಿಷ್ಣು. —ಹಾಗಿದ್ದರೆ ಸರಿ! ಇನ್ನು ನೀನು ಹೋಗಿ ಬಾ !

ಪರ್ವತಂ —ಧನ್ಯೋಽಸ್ಮಿ ! ನಿನಗೆ ಜಯವಾಗಲಿ !

(ಹೋಗುವನು.)

ವಿಷ್ಣು —(ನಗುತ್ತ) ದೇವಿ ! ಈ ವಿನೋದಗಳನ್ನು ನೋಡಿದೆಯಲ್ಲವೆ? ಈ ನಾರದಪರ್ವತರಿಬ್ಬರ ಕಲಹದಲ್ಲಿ ಇವರಿಬ್ಬರ ಉದ್ದೇಶವೂ ಈ ಡೇರುವಹಾಗಿಲ್ಲ. ಇದರ ಫಲವನ್ನು ಪಡೆಯತಕ್ಕವನು ಮೂರ ನೆಯವನೊಬ್ಬನಿರುವನು. ಅದು ಮುಂದೆ ತಿಳಿಯುವುದು

ಲಕ್ಷ್ಮಿ —ದೇವಾ ! ವೇದಾಂತಿಗಳು ನಿನ್ನನ್ನಲ್ಲವೇ ಸರ್ವಫಲಭಾಗಿಯೆಂದು ಹೇಳುವರು ಆ ಫಲವನ್ನನುಭವಿಸತಕ್ಕ ಮೂರನೆಯವನು ನೀನೇ ಆಗಿರಬಾರದೇನು ?

ವಿಷ್ಣು.—ದೇವಿ ! ದೈವೇಚ್ಛೆಯಿದ್ದಂತೆ ನಡೆಯುವುದು. ಈಗ ನಮಗೆ ಆ ವಿಚಾರವೇಕೆ? (ತೆರೆಯು ಬೀಳುವುದು).

ಪಂಚಮಾಂಕವು.

ಆಸ್ಥಾನ;—ಸ್ವಯಂವರಮಂಟಪ.

(ಕರಡಿಯ ಮುಖದಿಂದ ನಾರದನು ಸಂತೋಷದೊಡನೆ ಪ್ರವೇಶಿಸುವನು.)

*ನಾರದಂ—ಆಹಾ! ಕಾಲೋಚಿತವಾದ ಬುದ್ಧಿಬಲವಿದ್ದರೆ, ಮನುಷ್ಯನು ಎಂತಹ ವಿಘ್ನಗಳನ್ನಾದರೂ ತಪ್ಪಿಸಬಹುದು. ಎಷ್ಟೋ ದುಷ್ಕ

ರಾಗ. ತಾಳ,

* ಆಹ ! ಭಳಿರೆ । ಭಳಿರೆ । ಯೆನ್ನ । ಸಾಹಸವಿದು । ಜಗಕೆ। ಘನ।
ಮೋಹನೆಯೊಳು । ಫಲಿಸಿತೆನ್ನ । ಮೋಹವಿದೀಗ ॥
ಕಮಲವದನೆಯಾ । ವಿಮಲರದನೆಯಾ ।
ಪ್ರಮೋ । ದದಲಿ ವರಿಸುತ । ವಿನೋ । ದದಲಿ ಸುಖಿಪೆನಾ।ನೀಗ॥ ೧॥
ದಂಡಕಮಂ । ಡಲುವ ಪಿಡಿದು । ಕಂಡೆಡೆಯಲಿ। ತಿರುಗಿ ದಿ.ಡಿದ ।।
ದಂಡಿಸಿ ನಿಜ । ದೇಹವಿದನು । ಫಲವದೇನು ॥
ಸುದತಿಮಣಿಯನು । ವಧುವೆಯಾಗಿ ನಾಂ ।
ಸದಾ । ವಿಷಯಸುಖದಲಿ । ಮುದಂ । ದಳೆದು ನಲಿವೆನಾನೀಗ॥ ೨॥

ರ ಕಾರ್ಯವನ್ನಾದರೂ ಸಾಧಿಸಬಹುದು. ಈಗ ನಾನು ಮಾಡಿದ ಯುಕ್ತಿಯಲ್ಲವೇ ಯುಕ್ತಿ! ಇನ್ನು ಮೇಲೆ ಆ ರಾಜಕುಮಾರಿಯು ನನ್ನನ್ನು ವರಿಸದೆ ಬೇರೆ ವಿಧಿಯಿಲ್ಲ! ಈಗ ನಾನು ಮಾಡಿ ಬಂದಿರುವ ತಂತ್ರದಿಂದ ಸ್ವಕಾರ್ಯಸಾಧನೆಯೊಂದೇ ಅಲ್ಲದೆ, ನನ್ನ ಮೇಲೆ ಸ್ಪರ್ಧೆಗೆ ನಿಂತ ಆ ಪರ್ವತನಿಗೆ ತಕ್ಕ ಪ್ರತೀಕಾರವನ್ನೂ ಮಾಡಿದಂತಾಯಿತು! ಈ ಸಂದರ್ಭದಲ್ಲಿ ಅವನಿಗೆ ಆಶಾಭಂಗವೊಂದು, ಅವಮಾನವೊಂದು! ಇವೆರಡೂ ಏಕಕಾಲದಲ್ಲಿ ಸಂಭವಿಸುವಂತಾಯಿತಲ್ಲವೆ? ಅಯ್ಯೋ ಪಾಪ! ಆ ಪರ್ವತನು ಕಪಿಮುಖದಿಂದ ಬಂದು ಆ ಸ್ವಯಂವರಮಂಟಪದಲ್ಲಿ ಕುಳಿತಾಗ, ಅವನ ಅವಸ್ಥೆಯೇನಾಗಬೇಕು? ರಾಜಕುಮಾರಿಯು ಅವನ ಮುಖವನ್ನು ನೋಡಿದ ಮಾತ್ರಕ್ಕೆ ಎಷ್ಟು ಅಸಹ್ಯಪಡುವಳು! ಅವನನ್ನು ಕಂಡೊಡನೆ ರಾಜದೂತರನ್ನು ಕರೆಸಿ, ಹೊರಕ್ಕೆ ನೂಕಿಸುದರಲ್ಲಿಯೂ ಸಂದೇಹವಿಲ್ಲ. ಅಬ್ಬಾ ! ಈ ಸಂದರ್ಭದಲ್ಲಿ ಪರ್ವತನಿಗುಂಟಾಗಬಹುದಾದ ಅವಮಾನವೆಷ್ಟೆಂಬುದನ್ನು ಯೋಚಿಸಿದರೆ, ನನಗೇ ನಾಚಿಕೆಯಾಗುತ್ತಿರುವುದು. ಛೀ ! ಛೀ ! ನನಗೆಮಾತ್ರ ಈ ವಿಧವಾದ ಅವಮಾನವೇನಾದರೂ ಸಂಭವಿಸುವಹಾಗಿದ್ದರೆ, ಆಗಲೇ ನಾನು ಪ್ರಾಣತ್ಯಾಗವನ್ನು ಮಾಡುತಿದ್ದೆನೇ ಹೊರತು, ಈ ಭೂಮಿಯಲ್ಲಿ ತಲೆಯತ್ತಿ ಜೀವಿಸುತ್ತಿರಲಿಲ್ಲ ! ಆದರೆ ಮಾಡುವುದೇನು ? ಆ ಪರ್ವತನಿಗೆ ಇಂತಹ ಅವಮಾನವನ್ನನುಭವಿಸಬೇಕಾಗಿದ್ದುದರಿಂದಲೇ, ಅವನಿಗೆ ನನ್ನೊಡನೆ ಸ್ಪರ್ಧೆಗೆ ನಿಲ್ಲುವಹಾಗೆ ವಿಪರೀತಬುದ್ಧಿಯೂ ಹುಟ್ಟಿತು ! ಸ್ತ್ರೀಮೋಹದಿಂದ ಮುಂದುಗಾಣದೆ ಪ್ರವರ್ತಿಸತಕ್ಕವರ ಬಾಳೇ ಇದು! (ಸುತ್ತಲೂ ನೋಡಿ) ಇದೇನು ? ರಾಜನು ಸ್ವಯಂವರಕ್ಕಾಗಿ ನಿರ್ಣಯಿಸಿದ್ದ ಕಾಲವು ಆಗಲೇ ಸಮೀಪಿಸುತ್ತ ಬಂದಿತು. ಇನ್ನೂ ಪರ್ವತನೇಕೆ ಬರಲಿಲ್ಲ! ಒಂದುವೇಳೆ ಅವನು ಆ ರಾಜಕುಮಾರಿಗೆ ಮನಸ್ಸೊಪ್ಪುವಹಾಗೆ ದೇಹವನ್ನು ಶೃಂಗರಿಸಿಕೊಳ್ಳುವ

ಪ್ರಯತ್ನ ದಲ್ಲಿ ಹೀಗೆ! ವಿಳಂಬಮಾಡುತ್ತಿರಬಹುದೆ?(ನಕ್ಕು)ಕಪಿ ಮುಖಕ್ಕೆ ಎಷ್ಟಲಂಕಾರವನ್ನು ಮಾಡಿದರೇನು? ಮನಸ್ತೃಪ್ತಿ ಯಾಗುವವರೆಗೂ ಮಾಡಲಿ!ಪಾಪ! ಅವನು ಇಲ್ಲಿಗೆ ಬರುವಾಗ ಮನಸ್ಸಿನಲ್ಲಿ ಎಷ್ಟೋ ಆಶೋತ್ತರದಿಂದ ಬರುವನು. ತನಗಾ ಗುವ ಅವಮಾನವನ್ನು ಬಲ್ಲನೆ?ಇರಲಿ! ಅವನು ಬರುವಷ್ಟರಲ್ಲಿ ನಾನೂ ಈ ಸಭಾಮಂಟಪವನ್ನು ಸುತ್ತಿಬರುವೆನು-

(ಹೋಗುವನು.)

(ಕಪಿಮುಖವುಳ್ಳ ಪರ್ವತನು ಸಂತೋಷದಿಂದ ನಗುತ್ತ ಪ್ರವೇಶಿಸಿ)·

* ಲೋಕದಲ್ಲಿ ಪುರುಷನು ಎಷ್ಟುಸಾಹಸವನ್ನು ಮಾಡಿದರೇನು ? ದೈವವು ಅನುಕೂಲವಾಗಿದ್ದಹೊರತುಕಾರ್ಯಸಾಧನೆಯಾಗಲಾರ ದೆಂಬುದು·ನಿಜವೇ!ಪಾಪ! ನಾರದನು ನನಗೂತಿಳಿಯದಂತೆ,ರಾಜ ನಲ್ಲಿಗೆ ಹೋಗಿ,ಅವನ ಮಗಳನ್ನು ವಿವಾಹಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಿದನು. ಆದರೇನು !ದೈವವು ನನಗೆ ಅನುಕೂಲವಾಗಿ ದ್ದುದರಿಂದ ಅವನ ಪ್ರಯತ್ನಕ್ಕೆ ಭಂಗವುಂಟಾದುದಲ್ಲದೆ, ಮುಂದೆ ಇದರಿಂದ ದೊಡ್ಡ ಅವಮಾನವೂ ಸಂಭವಿಸುವಂತಾ ಯಿತು. ದೈವಾನುಕೂಲ್ಯದಿಂದ ನನ್ನ ಬುದ್ಧಿಯು ಸಮಯೋಚಿ ತವಾಗಿ ಪ್ರವರ್ತಿಸಿದುದಲ್ಲದೆ, ನನ್ನ ಪ್ರಯತ್ನವೆಲ್ಲವೂ ಹೂಸರ ವನ್ನೆತ್ತಿದಂತೆ ನಿರಾಯಾಸವಾಗಿ ಕೈಗೂಡುತ್ತಬಂದಿತು. ಈಗ ನಾರದನು,ತನಗುಂಟಾಗಿರುವ,ವಿಕೃತಾಕಾರವನ್ನು ತಿಳಿಯದೆ, ಎ

ರಾಗ ತಾಳೆ.

* ಮಝು। ಭಲಾ। ನಾನೀಗಲೆ। ಜಯಿಸಿದೆನು।। ಭಲ್। ಭಲಾ। ನಾನೀಗಲೇ।। ಜಯಿಸಿದೆನು। ನಾಂ । ಜಯಿಸಿದೆನೀಗ। ಭಲಾ। ನಾನೀಗಲೆ। ಜಯಿಸಿದೆನು।।
ಭೋಗವ ತೊರೆದು । ಮೂಗನು ಹಿಡಿದು ।
ಯೋಗದೊಳಿದ್ದನೆ ೇನು ಫಲ! ಭಲ್। ಭಲಾ।। ಮಝು।। ಭಲಾ ।। ೧ ।।
ದಂಡಕಮಂಡಲು । ವಲ್ಲವ ಬಿಸುಟು ।
ಪುಂಡರಿ ಕಾಕ್ಷಿಯ । ವರಿಸುವೆನು । ಭಲ್ ।। ಭಲಾ ಮಝು ಭಲಾ।। ೨।।

ಷ್ಟೋ! ಆಶೋತ್ತರವನ್ನಿಟ್ಟುಕೊಂಡು ಇಲ್ಲಿಗೆ ಬರುವನು.ವಾಸ್ತವದಲ್ಲಿ ಮುಂದೆ ಅವನ ಪರಿಣಾಮವೇನೆಂದು ಯೋಚಿಸಿದರೆ,ನನಗೂ ಪರಿತಾಪವಾಗಿದೆ, ಆದರೇನು? ಸ್ತ್ರೀಮೋಹವಿಷಯದಲ್ಲಿ ಆ ದಯಾದಾಕ್ಷಿಣ್ಯಗಳೊಂದನ್ನೂ ನೋಡುವುದಕ್ಕೆ ಸಾಧ್ಯವಿಲ್ಲ. ಇದೇನು ? ನಾರದನು ಇನ್ನೂ ಬಾರದಿರಲು ಕಾರಣವೇನು ? (ಅತ್ತಿತ್ತ ತೆರೆಯಕಡೆಗೆ ನೋಡಿ ಕೈತಟ್ಟಿ ನಗುತ್ತ) ಅದೋ! ಆ ಸುಂದರಮೂರ್ತಿಯು ಈಗಲೇ ಬಂದುಕುಳಿತಿರುವನು! ಆ ಕಪಿಮುಖದವನಿಗಂತೂ ಹೆಣ್ಣಿನಾಸೆಯಿಲ್ಲ. ಅವನ ಆಶೋತ್ತರವೇನೋ ಅಪರಿಮಿತವಾಗಿರುವುದು!ಬರಿಮಾತುಗಳಿಂದಾದರೂ ಅವನಮನಸ್ಸಿಗೆ ಆಪ್ಯಾಯನವನ್ನುಂಟುಮಾಡುವೆನು.ಹೇಗೂಕಾರ್ಯವು ನಮ್ಮ ಕೈವಶವಾಗಿರುವಾಗ, ಬಾಯಿಮಾತುಗಳಿಂದಾದರೂ ಅವನು ಸಂತೋಷಪಡಲಿ! (ಮುಂದೆ ಹೋಗಿ) ಮಿತ್ರನೆ!ಇದೇನು ಇಷ್ಟುವಿಳಂಬವಾಯಿತು ? ನಾನು ನಿನ್ನನ್ನೇ ನಿರೀಕ್ಷಿಸುತ್ತಿದ್ದೆನು. (ನಾರದನು ಪ್ರವೇಶಿಸುವನು. ನಾರದ ಪರ್ವತರಿಬ್ಬರೂ ಒಬ್ಬರ ಮುಖವನ್ನೊಬ್ಬರು ನೋಡಿ ಮರೆಯಾಗಿ ನಗುವರು.)

ನಾರದಂ—ಮಿತ್ರನೆ! ನಿನಗೆ ಮೊದಲೇ ನಾನು ಇಲ್ಲಿ ಬಂದು ಹೋದೆನು. ಈ ಸ್ವಯಂವರಮಂಟಪದ ಸೊಬಗನ್ನು ನೋಡುವುದಕ್ಕಾಗಿ ಹೋಗಿ ಅಲ್ಲಲ್ಲಿ ಸುತ್ತಿಬಂದೆನು.

ಪರ್ವತಂ—ಅದು ಹೋಗಲಿ! ಈಗ ಅಂಬರೀಷರಾಜನು ಏನೇನೋ ಉಪಾಯದಿಂದ ತನ್ನ ಮಗಳ ಸ್ವಯಂವರವೆಂಬ ವ್ಯಾಜವನ್ನು ಕಲ್ಪಿಸಿ, ಆಜನ್ಮಸ್ನೇಹಿತರಾದ ನಮ್ಮಿಬ್ಬರನ್ನೇ ಸ್ಪರ್ಧೆಗೆ ನಿಲ್ಲಿಸಿದನು. ನೋಡು !

ನಾರದಂ—ಇದು ನಮ್ಮಿಬ್ಬರ ಅದೃಷ್ಟಪರೀಕ್ಷೆಯೇ ಹೊರತು ಇದರಲ್ಲಿ ಸ್ಪರ್ಧೆಯೇನಿರುವುದು. ಈಗ ನಮ್ಮಿಬ್ಬರಲ್ಲಿ ಯಾರ ಅದೃಷ್ಟವು ಮೇಲೆಂಬುದು ಇನ್ನು ಸ್ವಲ್ಪಕಾಲದೊಳಗಾಗಿ ತಿಳಿದುಹೋಗುವುದು.

ಪರ್ವತಂ—(ಸ್ವಗತಂ) ಇನ್ನೂ ಇವನಿಗೆ ಆ ಆಸೆಯು ತಪ್ಪಿದಹಾಗಿಲ್ಲ! ಪಾಪ! ತನ್ನಮುಖವು ತನಗೆ ಕಾಣುವಹಾಗಿದ್ದರೆ, ಇವನು ಹೀಗೆ ಅಶೋತ್ತರವನ್ನಿಟ್ಟುಕೊಳ್ಳುತ್ತಿದ್ದನೆ? (ಪ್ರಕಾಶಂ) ನಾರದಾ! ನನಗಿಂತಲೂ ನೀನು ಅದೃಷ್ಟಶಾಲಿಯೆಂಬುದು, ಈಗ ನಿನ್ನ ಮುಖಲಕ್ಷಣದಿಂದಲೇ ವ್ಯಕ್ತವಾಗುವುದು. ಲೋಕಮೋಹಕವಾದ ಈ ನಿನ್ನ ಮುಖಸೌಂದರ್ಯವನ್ನು ನೋಡಿದಕೂಡಲೆ, ಆ ರಾಜಕನ್ಯೆಯು ನಿನ್ನನ್ನು ವರಿಸುವುದರಲ್ಲಿ ಸಂದೇಹವಿಲ್ಲ! ಇದು ಅಸೂಯೆಯ ಮಾತೆಂದು ತಿಳಿಯಬೇಡ! ನಿಜವಾಗಿ ಹೇಳುವೆನು.

ನಾರದಂ—(ನಗುತ್ತ ಸ್ವಗತಂ) ಮನುಷ್ಯರು ಮನಸ್ಸಿನಲ್ಲಿದ್ದುದನ್ನೇ ಬಾಯಿಂದಾಡುವರೆಂಬುದು ನಿಜ! ಇವನು ಅಸೂಯೆಯಿಂದಲೇ ಈ ಮಾತನ್ನಾಡುವಹಾಗಿದೆ. ಇರಲಿ! (ಪ್ರಕಾಶಂ) ನನ್ನಲ್ಲಿರುವ ಮಿತ್ರಸ್ನೇಹದಿಂದ ನಿನಗೆ ಹಾಗೆ ತೋರುವುದೇನೋ ಸಹಜವಾಗಿದ್ದರೂ, ನಿನ್ನಮುಂದೆ ನಾನಲ್ಲ! ಈಗ ನಿನ್ನಮುಖವು ಎಂತವರ ದೃಷ್ಟಿಯನ್ನಾದರೂ ಆಕರ್ಷಿಸುವಂತಿರುವುದು.

(ತೆರೆಯಲ್ಲಿ) ರಾಜಾಧಿರಾಜ? ಪರಾಕ್ ಎಚ್ಚರಿಕೆ!

ನಾರದಂ—ಓಹೋ! ರಾಜನು ಬರುತ್ತಿರುವಹಾಗಿದೆ.

(ಇಬ್ಬರೂ ಠೀವಿಯಿಂದ ಪೀಠದಮೇಲೆ ಕುಳ್ಳಿರುವರು.)

(ರಾಜನು ಪುಷ್ಪಮಾಲಿಕೆಯನ್ನು ಹಿಡಿದು ಶ್ರೀಮತಿಯನ್ನು ಕರೆತರುವನು.)

ರಾಜಂ—(ಮಗಳನ್ನು ಕೈಹಿಡಿದು ನಿಲ್ಲಿಸಿಕೊಂಡು) ಕುಮಾರೀ! ನಾವು ಕ್ಷತ್ರಿಯಕುಲದವರಾಗಿದ್ದರೂ, ನೀನು ಬ್ರಾಹ್ಮಣಪತ್ನಿಯೆನಿಸಿಕೊಂಡು, ಉತ್ತಮವಾದ ಬ್ರಾಹ್ಮಣಕುಲವನ್ನು ಸೇರತಕ್ಕ ಭಾಗ್ಯಕ್ಕೆ ಪಾತ್ರಳಾಗಿರುವೆ! ಮಹಾಜ್ಞಾನನಿಧಿಗಳೆನಿಸಿಕೊಂಡನಾ

ರದಪರ್ವತರೆಂಬ ಮಹರ್ಷಿಗಳಿಬ್ಬರೂ ನಿನ್ನ ರೂಪಕ್ಕೆ ಮೋಹಿತರಾಗಿ, ನಿನ್ನನ್ನು ವರಿಸಬೇಕೆಂದಪೇಕ್ಷಿಸಿರುವರು. ಇಬ್ಬರೂ ಮಹಾತ್ಮರಾದುದರಿಂದ, ಅವರಲ್ಲಿ ಯಾರನ್ನೂ ತಿರಸ್ಕರಿಸಲಾರದೆ, ನಾನು ಅವರಿಬ್ಬರಿಗಾಗಿಯೇ ಈ ಸ್ವಯಂವರವನ್ನೇರ್ಪಡಿಸಿರುವೆನು. ಆದುದರಿಂದ :—

*ಕುಮಾರೀ! ಇದೋ! ಈ ಪುಷ್ಪಮಾಲಿಕೆಯನ್ನು ಕೈಗೆ ತೆಗೆದುಕೊಂಡು, ಆ ಇಬ್ಬರು ಮುನಿಕುಮಾರರಲ್ಲಿ, ಯಾರ ಸೌಂದರ್ಯವು ನಿನ್ನ ಮನಸ್ಸಿಗೊಪ್ಪುವುದೋ, ಅವರ ಕೊರಲಿಗೆ ಈ ಮಾಲೆಯನ್ನಿಕ್ಕು ! ಇಬ್ಬರೂ ಸಮಾನಮಹಿಮೆಯುಳ್ಳವರು! ಇಬ್ಬರೂ ಪರಮಭಾಗವತೋತ್ತಮರು.

ಶ್ರೀಮತಿ—ಜನಕಾ! ನಿನ್ನ ಆಜ್ಞಾಧೀನಳಾಗಿ ನಡೆಯುವುದಕ್ಕೆ ಸಿದ್ಧಳಾಗಿರುವೆನು. ಮಕ್ಕಳಿಗೆ ತಂದೆತಾಯಿಗಳ ಮಾತನ್ನು ನಡೆಸುವುದಕ್ಕಿಂತಲೂ ಉತ್ತಮಧರ್ಮವಾವುದುಂಟು? ಯುಕ್ತಾಯುಕ್ತವಿವೇಚನಪರನಾದ ನೀನು, ನನ್ನ ಕ್ಷೇಮಚಿಂತೆಯಿಂದ ನಿರ್ಣಯಿಸಿದ ಕಾರ್ಯಕ್ಕೆ ನಾನು ಹಿಂತೆಗೆಯುವೆನೆ ? ಇದರಮೇಲೆ ಹರಿಭಕ್ತೋತ್ತಮನಾದ ನಿನ್ನ ಗರ್ಭದಲ್ಲಿ ಜನಿಸಿದ ನನಗೆ, ಅಂತಹಪರಮಭಾಗವತೋತ್ತಮರ ಪಾದಾಶ್ರಯವು ಲಭಿಸುವುದಾದರೆ ಇದು ನನ್ನ ಭಾಗ್ಯವಿಶೇಷವಲ್ಲವೇ? ಎಲ್ಲಿ ಮಾಲೆಯನ್ನು ಕೊಡು?

---

* ಕಾಂಭೋಜಿ ರಾಗ. ರೂಪಕ ತಾಳ

ಕೇಳು ಕೇಳಿಲೆ । ಬಾಲಿಕಾಮಣಿ । ಕೇಳು ಗುಣಮಣಿ ॥
ನೀಲನೀರದ । ವೇಣಿ ಪಂಕಜ । ಪಾಣೀ । ಕೋಮಲ । ವಾಣಿ । ರಮಣಿ ॥
ಮೌನಿಗ । ಳೀರ್ವರು । ಮಾನಿತಶೀಲರು । ನಿನ್ನನು । ಮೋಹಿಸಿ । ಬಂದಿಹರು ।
ಮಾನಿನೀಮಣಿ । ಯಿವರೊಳೋರ್ವನ । ನಾನು । ರಾಗ । ದಿಂದ । ವರಿಸು ॥
ಮುನ್ನ ಚ್ಯವನ । ಮುನಿಯನೊಲಿದ । ಕನ್ಯೆ ಸುಕ । ನ್ಯೆಯ ತೆರದಿ ।
ಸನ್ನುತಾಂಗಿ । ಸಕಲಭಾಗ್ಯಸಂ । ಪನ್ನೆ । ಯಾಗಿ । ಬಾಳು । ನೀನು ॥

(ಎಂದು ಮಾಲೆಯನ್ನು ತೆಗೆದುಕೊಳ್ಳುವಳು.)

ರಾಣಿ—(ಮಗಳನ್ನು ಕೈಹಿಡಿದು ತರೆತರುತ್ತ) ಕುಮಾರೀ! ನಡೆ ! *

ಶ್ರೀಮತಿ—ನಾರದಪರ್ವತರನ್ನು ನೋಡಿ ಭಯದಿಂದ ತಟ್ಟನೆ ಹಿಂತಿರುಗಿ.)

ಜನಕಾ! ರಕ್ಷಿಸು ! ರಕ್ಷಿಸು ! (ಎಂದು ತಂದೆಯ ಮರೆಯಲ್ಲಿ ನಿಲ್ಲುವಳು.)

ರಾಜಂ.—(ಸಂಭ್ರಾಂತನಾಗಿ) ಕುಮಾರೀ! ಏನಿದು? ಹೀಗೇಕೆ ಹೆದರುವೆ?

ಶ್ರೀಮತಿ—ಜನಕಾ! ಅದೋ! ನಮ್ಮ ಸ್ವಯಂವರಮಂಟಪದಲ್ಲಿ ಯಾವುದೋ ಭಯಂಕರವಾದ ಕಾಡುಮೃಗಗಳು ಬಂದು ಕುಳಿತಿರುವುವು.

ರಾಜಂ—ಎಲ್ಲಿ! ಎಲ್ಲಿ !

ಶ್ರೀಮತಿ—(ರಾಜನನ್ನು ಕರೆತಂದು ತೋರಿಸುವಳು.)

ರಾಜಂ—(ಮುಂದೆ ನೋಡಿ ಚಿಂತಾಕುಲನಾಗಿ) ಆಹಾ! ಏನಿದು! ಈ ಮೃಗಗಳೆಲ್ಲಿಯವು ? (ಚೆನ್ನಾಗಿ ನೋಡಿ) ಇವು ನಿಜವಾಗಿ ಸಾಮಾನ್ಯ ಮೃಗಗಳಂತೆ ತೋರಲಿಲ್ಲ! ಮುಖವುಹೊರತು ಕೈ, ಕಾಲು ಮುಂತಾದ ಅವಯವಗಳೆಲ್ಲವೂ ಮನುಷ್ಯಾಕೃತಿಯಿಂದಿರುವುವು. ಈ ಸ್ವಯಂವರವನ್ನು ಕೆಡಿಸುವುದಕ್ಕಾಗಿ ಮಾಯಾವಿಗಳಾದ

---

*ರಾಗ. ತಾಳ,

ಮಂದಯಾನೆ । ನಡೆಮುಂದಕೆ ॥ ಪ । ಅನು ॥

ತರಳೆ ನಿನ್ನಯ ಪುಣ್ಯ । ಪರಿಪಾಕದಿಂದಲಿ ।
ಸುರಮುನಿವರ್ಯರ । ಪದಸೇವೆಗೆ ॥೧॥

ಕ್ಷಿತಿಪತಿಯಾಗಲಿ । ಯತಿಪತಿಯಾಗಲಿ ।
ಸತಿಯರ ಧರ್ಮವು । ಪತಿಸೇವೆಯೆ ॥ ೨ ॥

ಜನಪತಿಸುತೆಯೆಂಬ । ಮನದಭಿಮಾನವ ।
ನೆನೆಯದೆ ಸೇವಿಸು । ಮುನಿಪದವನು ॥ ೩ ॥

ರಾಕ್ಷಸರೇನಾದರೂ ಹೀಗೆ ವೇಷಧಾರಿಗಳಾಗಿ ಬಂದಿರಬಹುದೆ? ಇದಕ್ಕೂ ಸಂಭವವಿಲ್ಲ! ಸಾಕ್ಷಾದ್ವಿಷ್ಣುಚಕ್ರವು ನನ್ನಲ್ಲಿರುವಾಗ ರಾಕ್ಷಸರು ಇಷ್ಟುನಿರ್ಭಯವಾಗಿ ಇಲ್ಲಿಗೆ ಪ್ರವೇಶಿಸುವುದೆಂದ ರೇನು ? ನಮ್ಮ ಪುರದ್ವಾರಕ್ಕೆ ಕಾಲಿಡುವುದಕ್ಕೆ ಮೊದಲೇ ಆ ಸುದರ್ಶನದ ತೇಜಸ್ಸಿನಿಂದ ಅವರುದಗ್ಧರಾಗಬೇಕಲ್ಲವೆ?ಅಥವಾ ಇದು ದೇವತೆಗಳ ತಂತ್ರವಾಗಿರಬಹುದೆ? ಯಾವದೇವತೆಗಳಲ್ಲಿ ಯೂ ನಾನು ಅಪರಾಧಿಯಲ್ಲ! ಅವರೇಕ ನನ್ನನ್ನು ವಂಚಿಸುವ ರು! ಒಂದುವೇಳೆ ನಾರದಪರ್ವತರೇ ನನ್ನನ್ನು ಪರೀಕ್ಷಿಸುವುದ ಕ್ಕಾಗಿ ಹೀಗೆ ವೇಷಾಂತರದಿಂದ ಬಂದಿರಬಹುದೆ ? ಇದ್ದರೂ ಇರಬಹುದು. ಇರಲಿ! ಇವರನ್ನು ಮಾತಾಡಿಸಿ ನೋಡುವೆನು, ಅವರ ಕಂಠಧ್ವನಿಯಿಂದ ಸ್ವಲ್ಪಮಾತ್ರವಾದರೂ ನಿಜಸ್ಥಿತಿಯ ನ್ನು ಕಂಡುಕೊಳ್ಳಬಹುದು (ಮುಂದೆ ಬಂದು) ಎಲೈ! ವಿಲಕ್ಷಣ ರೂಪದಿಂದ ಭದ್ರಾಸನವನ್ನೇರಿ ಕುಳಿತಿರುವ ನೀವು ಯಾರು !

ನಾರದಂ—(ಸ್ವಗತಂ)ಓಹೋ!ರಾಜನು ಈ ಕಪಿಮುಖವನ್ನು ನೋಡಿ ಭ್ರ ಮಿಸುತ್ತಿರುವನು ನಿಜಸ್ಥಿತಿಯನ್ನು ತಿಳಿಯದವರು ಹೀಗೆ ಕಳವಳಿ ಸುವುದು ಯುಕ್ತವೆ!ಅಯ್ಯೋಪಾಪ!ನಾನು ಮಾಡಿರುವತಂತ್ರ ವನ್ನು ಅವನೇನುಬಲ್ಲನು? ಇರಲಿ! ಮುಖ್ಯವಾಗಿ ರಾಜನು ಪರ್ವ ತನ ವಿಷಯದಲ್ಲಿ ಸಂದೇಹಿಸುತ್ತಿರುವನು. ಅವನ ಸಂದೇಹವ ನ್ನು ನೀಗಿಸುವೆನು·(ಪ್ರಕಾಶಂ)ರಾಜೇಂದ್ರಾ! ಸಂದೇಹಿಸಬೇಡ! ಇವನು ನನ್ನ ಮಿತ್ರನಾದ ಪರ್ವತನು! ನಾನು ನಾರದನೆಂಬು ದನ್ನು ನೀನೇ ಬಲ್ಲೆಯಷ್ಟೆ?

ಪರ್ವತಂ—(ಸ್ವಗತಂ) ಅಯ್ಯೊ!ಈ ನಾರದನು ತನ್ನ ವಿಷಯದಲ್ಲಿ ರಾಜ ನಿಗಿರುವ ಸಂದೇಹವನ್ನು ತಿಳಿಯದೆ ನನ್ನನ್ನು ಅವನಿಗೆ ತೋರಿ ಸುತ್ತಿರುವನು. ನನ್ನಮುಖವನ್ನು ನೋಡಿದರೆ ನಾನು ಪರ್ವತ ನೆಂಬುದು ತಿಳಿಯುವುದಿಲ್ಲವೆ? ಈತನವಿಷಯದಲ್ಲಿ ರಾಜನಿಗಿರುವ

ಸಂದೇಹವನ್ನು ಪರಿಹರಿಸುವೆನು. (ಪ್ರಕಾಶಂ) ಮಹಾರಾಜನೆ !
ಸಂದೇಹಿಸಬೇಡ! ನನ್ನನ್ನು ಬಲ್ಲೆಯಷ್ಟೆ? ಇವನೇ ನಾರದನು.
ನೆನ್ನೆ ನೀನು ವಾಗ್ದಾನಮಾಡಿದುದಕ್ಕಾಗಿ ನಾವಿಬ್ಬರೂ ನಿನ್ನ
ಮಗಳ ಸ್ವಯಂವರಕ್ಕಾಗಿ ಬಂದಿರುವೆವು.

ರಾಜಂ.—(ಆಶ್ಚರ್ಯದಿಂದ)ಏನು! ಇವರೇ ನಾರದಪರ್ವತರೆ!ಹಾಗೆ ತೋರ
ಲಿಲ್ಲ! ಆ ಬ್ರಹ್ಮತೇಜಸ್ಸೆಲ್ಲಿ ! ಈ ಘೋರರೂಪವೆಲ್ಲಿ ! ಆದರೆ
ಕಂಠಸ್ವರವುಮಾತ್ರ ಮೊದಲಿನಂತೆಯೇ ಇರುವುದು!ಆನಾರದ
ಪರ್ವತರೇ ಈ ವೇಷದಿಂದ ನನ್ನನ್ನು ಪರೀಕ್ಷಿಸುವುದಕ್ಕಾಗಿ ಬಂ
ದಿರಬಹುದೆ! ಇದ್ದರೂ ಇರಬಹುದು. ಮಹರ್ಷಿಗಳ ಪ್ರಭಾವ
ವನ್ನು ಹೀಗೆಂದು ಹೇಳುವುದಕ್ಕಿಲ್ಲ! ಈಗೇನು ಮಾಡಲಿ!

ನಾರದಂ—ರಾಜೇಂದ್ರಾ! ಏಕೆ ಸುಮ್ಮನೆ ನಿಂತಿರುವೆ !

ಪರ್ವತಂ—ರಾಜಾ! ನಿನ್ನ ಸಂದೇಹಕಾರಣವೇನು? ಅದನ್ನಾದರೂ ಹೇಳ
ಬಾರದೆ ?

ರಾಜಂ.—(ಸ್ವಗತಂ) ಆಹಾ! ಇವನಾದರೋ ಆತುರಪಡಿಸುತ್ತಿರುವರು.
ಇವರಿಗೆ ನನ್ನ ಸಂದೇಹಕಾರಣವನ್ನು ಹೇಗೆ ತಿಳಿಸಲಿ! ಲೋಕ
ದಲ್ಲಿ ಅವರವರಲ್ಲಿರುವ ನಿಜವಾದ ದೋಷವನ್ನೆತ್ತಿಹೇಳಿದರೆ,
ಎಂತವರಿಗಾದರೂ ಕೋಪವುಂಟಾಗುವುದು. ಕುರೂಪಿಗಳನ್ನು
ನೋಡಿ ಅವರ ಮುಂದೆ ಕುರೂಪಿಗಳೆಂದು ಹೇಳಿದರೆ, ಅವರಿಗೆ
ಕೋಪವುಂಟಾಗುವುದು ಸಹಜವು. ಅವರೇ ವೇಷಧಾರಿಗಳಾದ
ನಾರದಪರ್ವತರಾಗಿದ್ದಪಕ್ಷದಲ್ಲಿ, ಅವರ ದೋಷವನ್ನೆತ್ತಿಹೇಳು
ವುದರಿಂದ, ಅವರ ಕೋಪಕ್ಕೆ ಗುರಿಯಾಗುವೆನು. ಇದಲ್ಲದೆ ನಾ
ನು ನಿರ್ಣಯಿಸಿದ್ದ ಸ್ವಯಂವರಕಾಲವು ಅತಿಕ್ರಮಿಸುತ್ತ ಬಂದಿ
ರುವುದು. ಇದುವರೆಗೂ ಆ ಮಹರ್ಷಿಗಳು ಬಾರದಿರುವರೆ? ಇ
ವರೇ ನಾರದಪರ್ವತರಾಗಿರಬೇಕು!ನನ್ನ ಮನಸ್ಸನ್ನು ಪರೀಕ್ಷಿ
ಸುವುದಕ್ಕಾಗಿ ಹೀಗೆ ವೇಷಾಂತರದಿಂದ ಬಂದಿರುವರು.ಹಾಗಿದ್ದ

ರೂ ನಾನು ನನ್ನ ಮುದ್ದುಮಗಳನ್ನು ಕರೆದು.ಈ ಕುರೂಪಿಗಳ ಕೊರಲಿಗೆ ಮಾಲೆಯನ್ನು ಹಾಕುವಂತೆ ಹೇಗೆ ನಿರ್ಬಂಧಿಸಲಿ !

ನಾರದಂ—(ಕೋಪದಿಂದ ನೆಲವನ್ನೊದೆಯುತ್ತ) ಅಂಬರೀಷಾ ! ಇದಕ್ಕಾಗಿಯೇ ನಮ್ಮನ್ನು ಕರೆಸಿದೆಯೇನು?

ಪರ್ವತಂ—ರಾಜಾ ! ನೀನು ನಮ್ಮನ್ನವಮಾನಪಡಿಸುವುದಕ್ಕಾಗಿ ಈ ಉಪಾಯವನ್ನೆತ್ತಿರುವಂತಿದೆ! ಹಿಂದೆ ನೀನು ಕೊಟ್ಟ ಮಾತಿನಂತೆ ನಿನ್ನ ಮಗಳನ್ನು ಕರದು ಮುಂದಿನ ಕಾರ್ಯ್ಯವನ್ನು ನಡೆಸುವುದಾದರೆ ನಡೆಸು! ಇಲ್ಲವಿದ್ದರ ಇದೋ! ನಾನು ಹೊರಡುವೆನು. (ಕೋಪದಿಂದ ಹಿಂತಿರುಗುವನು.)

ರಾಜಂ.—(ಭಯದಿಂದ ಮುಂದೆ ಬಂದು ತಡೆದು ನಿಲ್ಲಿಸಿ) ಪೂಜ್ಯರೆ ಆಡಿದ ಮಾತಿಗೆ ನಾನು ಎಂದಿಗೂ ತಪ್ಪುವವನಲ್ಲ. ಆದರೆ ನಿಮ್ಮಿಬ್ಬರ ಮುಖಲಕ್ಷಣವೂ ಮೊದಲಿನಂತಿಲ್ಲದೆ ಈಗ ಬೇರೆ ವಿಧವಾಗಿರುವುದರಿಂದ, ನಾನು ಸಂದೇಹಿಸುತ್ತಿದ್ದೆನು. ಬೇರೆ ಯಾರಾದರೂ ಮಾಯಾವಿಗಳು ನನ್ನ ಮಗಳಮೇಲೆ ಕಣ್ಣಿಟ್ಟು,ನನ್ನನ್ನುವಂಚಿಸುವುದಕ್ಕಾಗಿ ಹೀಗೆ ಬಂದಿದ್ದರೆ. ಆಗ ನಾನು ನಾರದಪರ್ವತರಿಗೆ ಮಾಡಿದ ವಾಗ್ದಾನವು ಸುಳ್ಳಾಗುವುದಲ್ಲವೆ? ಆ ಪ್ರತಿಜ್ಞಾಭಂಗದೋಷಕ್ಕಾಗಿಯೇ ನಾನು ಹೆದರುತ್ತಿರುವೆನು.

ನಾರದಂ—ಏನು ! ನಾನು ನಾರದನೆಂಬುದರಲ್ಲಿಯೇ ನಿನಗೆ ಸಂದೇಹವೇನು? ಮುಖವನ್ನು ನೋಡಿದರ ತಿಳಿಯುವುದಿಲ್ಲವೆ ? ಈತನ ವಿಷಯದಲ್ಲಿಯೂ ನೀನು ಸಂದೇಹಿಸಬೇಡ! ಇವನೇ ಪರ್ವತನು.

ಪರ್ವತಂ—ರಾಜಾ! ಸಂದೇಹಿಸಬೇಡ ! ಈತನೇ ನಾರದನು! ನನ್ನ ಮಾತನ್ನು ನಂಬು! ನಿನ್ನ ಮಗಳನ್ನು ಕರೆ !

ರಾಜಂ—ಪೂಜ್ಯರೆ! ಹಾಗೆಯೇ ಮಾಡುವೆನು. (ಶ್ರೀಮತಿಯ ಕೈಯನ್ನು ಹಿಡಿದು ಮುಂದೆ ನಿಲ್ಲಿಸಿಕೊಂಡು, ಜನಾಂತಿಕಂ) ಕುಮಾರೀ! ಎಷ್ಟೆಷ್ಟು ಯೋಚಿಸಿದರೂ ಇವರ ನಿಜಸ್ಥಿತಿಯೇನೆಂದುತಿಳಿಯ

ಲಿಲ್ಲ. ನಾನು ನಿರ್ಣಯಿಸಿದ್ದಂತೆ ನಾರದಪರ್ವತರಿಬ್ಬರೂ ಇಲ್ಲಿಗೆ ಬರಬೇಕಾದ ಕಾಲಕ್ಕೆ ಸರಿಯಾಗಿ, ಈ ವ್ಯಕ್ತಿಗಳೆರಡೂ ಇಲ್ಲಿಗೆ ಬಂದು ಕುಳಿತಿರುವುವು. ಕಂಠಸ್ವರವೂ ಅವರಂತೆಯೇ ಇರುವುದು. ಇದರಿಂದ ಆ ನಾರದಪರ್ವತರೇ ನಮ್ಮ ಮನೋದಾರ್ಢ್ಯವನ್ನೂ, ನಮ್ಮ ಸತ್ಯವನ್ನೂ 'ಪರೀಕ್ಷಿಸುವುದಕ್ಕಾಗಿ ಹೀಗೆ ವೇಷಧಾರಿಗಳಾಗಿ ಬಂದಿರಬಹುದೆಂದು ಊಹಿಸಬೇಕಾಗಿದೆ. ನಿಜಸ್ಥಿತಿಯನ್ನು ತಿಳಿಯದೆ ನಾವು ಇವರನ್ನು ತಿರಸ್ಕರಿಸಿದ ಮೇಲೆ, ಇವರೇ ನಾರದಪರ್ವತರಾಗಿದ್ದಪಕ್ಷದಲ್ಲಿ ನಾವು ಬ್ರಾಹ್ಮಣಕೋಪಕ್ಕೆ ಪಾತ್ರರಾಗುವೆವು ಆಡಿದ ಭಾಷೆಗೆ ತಪ್ಪಿದ ಮಹಾದೋಷಕ್ಕೂ ನಾನು ಗುರಿಯಾಗುವೆನು. ಹಾಗಿಲ್ಲದೆ ಈ ಸ್ಥಿತಿಯಲ್ಲಿ ಇವರ ಕೊರಲಿಗೆ ಸ್ವಯಂವರಮಾಲಿಕೆಯನ್ನು ಹಾಕಬೇಕೆಂದು ನಿನ್ನನ್ನು ನಿರ್ಬಂಧಿಸುವುದಕ್ಕೂ ನನ್ನ ನಾಲಗೆಯು ಹೊರಡದಿರುವುದು. ಇದಕ್ಕೆ ನಾನೇನು ಮಾಡಲಿ! ಈ ಉಭಯಸಂಕಟದಿಂದ ನನ್ನನ್ನು ತಪ್ಪಿಸತಕ್ಕ ಭಾರವು ನಿನ್ನದಾಗಿದೆ.

ಶ್ರೀಮತಿ—ಜನಕಾ! ಭಗವನ್ಮಾಯೆಯು ವಿಚಿತ್ರವಾಗಿರುವುದು. ಜನರು ಆ ಮಾಯೆಯಿಂದ ವಂಚಿತರಾಗಿ ತಮ್ಮತಮ್ಮ ಕರ್ಮಾನುಸಾರವಾದ ಫಲವನ್ನು ಅನುಭವಿಸದೆ ತೀರದು! ಈ ವಿಷಯದಲ್ಲಿ ಯಾರೇನು ಮಾಡಬಲ್ಲರು? ನನ್ನ ಕ್ಷೇಮವನ್ನುದ್ದೇಶಿಸಿ ನೀನು ಸತ್ಯಭ್ರಷ್ಟನಾಗುವುದು ನನಗೆ ಸರ್ವಥಾ ಸಮ್ಮತವಿಲ್ಲ! ನಿನ್ನ ಕ್ಷೇಮವೇ ನನ್ನಕ್ಷೇಮವು ! ನಿನ್ನಕೀರ್ತಿಯೇ ನನ್ನ ಕೀರ್ತಿ ! ಆದರೆ ಜನಕಾ ! ಆ ಎರಡುರೂಪಗಳಲ್ಲಿ ನಾನು ಮನಃಪೂರ್ವಕವಾಗಿ ಯಾವ ರೂಪವನ್ನೂ ಮೋಹಿಸುವಹಾಗಿಲ್ಲ! ನಾನು ಕಣ್ಣುಮುಚ್ಚಿಕೊಂಡು, ಶ್ರೀಹರಿಧ್ಯಾನಪೂರ್ವಕವಾಗಿ ಈಮಾಲೆಯನ್ನು ಎಸೆದುಬಿಡುವೆನು. ಅದು ದೈವವಶದಿಂದ ಯಾರ ಕಂಠದಲ್ಲಿಬಿದ್ದರೆ ಅವನೇ ನನಗೆ ಪತಿಯಾಗಲಿ ! ಅವನು ಎಂತವನಾಗಿದ್ದರೂ ನಾನು ತ್ರಿಕರಣಶುದ್ಧಿಯಿಂದ ಅವನ ಪಾದಸೇವೆಯನ್ನು ಮಾ

ನಾರದ ಪರ್ವತರು ಕಪಿಕರಡಿಗಳ ಮುಖದಿಂದ ಸ್ವಯಂವರಮಂಟಪದಲ್ಲಿರಲು, ಶ್ರೀಮತಿಯು ಆ ಆಕೃತಿಗಳನ್ನು ಕಂಡು ಬೆದರಿ, ಕೈಯಲ್ಲಿದ್ದ ವರಣಮಾಲಿಕೆಯನ್ನು ಬಿಸಾಡಿದುದು. ಅದು ಅದೃಶ್ಯನಾಗಿ ಬಂದಿದ್ದ ವಿಷ್ಣುವಿನ ಕೊರಲಿಗೆ ಬಿದ್ದುದು. ವಿಷ್ಣುವು ಶ್ರೀಮತಿಯೊಡನೆ ತಿರುಗಿ ಅದೃಶ್ಯನಾದುದು.

(೯೨)

ಡುವೆನು. ಪೂರ್ವದಲ್ಲಿ ಸಾವಿತ್ರಿಗೆ ಅವಳ ಪುಣ್ಯಫಲದಿಂದ, ಅಲ್ಪಾಯುಸ್ಸುಳ್ಳ ಪತಿಯೇ ಯಮಪಾಶದಿಂದ ತಪ್ಪಿಸಿಕೊಂಡು ಚಿರಜೀವಿಯಾಗಲಿಲ್ಲವೆ? ಅದರಂತೆಯೇ ಈಗಲೂ ನನ್ನಲ್ಲಿ ಅಲ್ಪಸ್ವಲ್ಪಪುಣ್ಯಶೇಷವೇನಾದರೂ ಇದ್ದರೆ, ಆ ಪುಣ್ಯಫಲದಿಂದ, ಈ ಮಾಲೆಯನ್ನು ಧರಿಸಿದವನೇ ಲೋಕೋತ್ತರಗುಣವುಳ್ಳ ಪತಿಯಾಗಲಿ! ಮಾಲೆಯನ್ನು ಕೊಡು * (ಕೈಯಲ್ಲಿ ಮಾಲೆಯನ್ನೆತ್ತಿ ಹಿಡಿದು ಭಗವಂತನನ್ನು ಸ್ತುತಿಸುವಳು.)

ಓ ಪುರುಷೋತ್ತಮಾ! ತತ್ವಜ್ಞರಾದ ಮಹರ್ಷಿಗಳು, ನೀನೇ ಸಕಲಜೀವಾತ್ಮಕನೆಂದು ಹೇಳುವುದು ನಿಜವಾಗಿದ್ದರೆ, ಈ ಪುಷ್ಪಮಾಲಿಕೆಯು ಯಾರ ಕಂಠದಲ್ಲಿ ಬೀಳುವುದೋ, ಅವನು ನಿನ್ನಂತೆ ದಿವ್ಯಮಂಗಳವಿಗ್ರಹ ವಿಶಿಷ್ಟನಾಗಿ, ನಿನ್ನಂತೆಯೇ ಸಕಲ ಕಲ್ಯಾಣಗುಣಗಣ ಪರಿಪೂರ್ಣನಾಗಲಿ! ನಿನ್ನ ಅಂಶದಿಂದಲೇ ಅವನು ನನಗೆ ಪತಿಯಾಗಲಿ! ದೇವಾ! ಈ ಪುಷ್ಪಮಾಲಿಕೆಯು ನಿನಗೇ ಅರ್ಪಿತವು! (ಎಂದೆಸೆಯುವಳು. ಮಾಲೆಯು ಅದೃಶ್ಯವಾಗುವುದು, ದಿವ್ಯತೇಜಸ್ವಿಯಾದ ತರುಣನೊಬ್ಬನು ಅದೇ ಮಾಲಿಕೆಯನ್ನು ಕಂಠದಲ್ಲಿ ಧರಿಸಿ ವಿಮಾನದಿಂ

---

* ರಾಗ, ಭೂಪಾಳಿ. ತಾಳೆ.

ಹರಿಹರಿ ಪೊರೆಯೆನ್ನ। ಪರಮಕೃಪಾಕರ। ಶರಣಾರ್ತಿಹರಣ ಶ್ರೀ। ಶೌರೇ ॥
ನಿರವಧಿಕರುಣಾ। ಭರಣ ನಾರಾಯಣ ॥
ಸುರಗಣಶರಣ ಶ್ರೀ ಸರಸಿಜನಯನ ॥
ಮುನಿಗಳೀರ್ವರುಮೆನ್ನ। ಮನವ ಪರೀಕ್ಷಿಸಿ। ಲನುವಗೆಯ್ದುದರೊ ನಾ। ನರಿಯೇ
ವನಜಾಕ್ಷ ನಿನ್ನಯ। ಘನಲೀಲೆಯೋ ಇದು।
ದನುಜರ ಮಾಯೆಯೋ। ಎನಗಿದೆ ವಿಧಿಯೋ ಹಾ॥ ೧॥
ಪರಮಪುರುಷ ನಿನ್ನ। ಚರಣಕರ್ಪಿತವೆಂದು। ವರಣಮಾಲೆಯನಿದ। ನಿಡುವೆ।
ಸರವಿದು ಯಾವನ। ಕೊರಲೊಳು ಬೀಳ್ವುದೊ।
ವರನವನೆಂದು ನಾಂ। ಕರಣಶುದ್ಧಿಯಿಂ ಭಜಿಪೆ ॥ ೨॥

ಧಿಳಿದು ಬಂದು ಶ್ರೀಮತಿಯ ಕೈಯನ್ನು ಹಿಡಿದುಕೊಂಡು.)
ಎಲೆ ಭದ್ರೆ! ಇದೋ! ನೀನು ಹಾಕಿದ ಪುಷ್ಪಮಾಲೆಯು ನನ್ನ ಕಂಠದಲ್ಲಿ ಬಿದ್ದಿತು! ನೀನು ನನ್ನ ಪತ್ನಿ ! ಬಾ ಹೋಗುವೆವು! (ವಿಮಾನವನ್ನೇರಿಸಿ ಕರೆದುಕೊಂಡು ಹೋಗುವನು). ಪುಷ್ಪ ವೃಷ್ಟಿಯಾಗುವುದು. ಎಲ್ಲರೂ ಸ್ತಬ್ಧರಾಗಿ ನೋಡುತ್ತಿರುವರು.)

ರಾಜಂ.—(ದುಃಖಾಶ್ಚರ್ಯದಿಂದ) ಆಹಾ! ಏನೀವಿಪರೀತವು ! ಕುಮಾರೀ! ಕುಮಾರೀ! ಎಲ್ಲಿ ಹೋದೆ ! ಅತ್ತಿತ್ತ ! ತತ್ತಳಿಸಿ ನೋಡುವನು. (ನಾರದಪರ್ವತರಿಬ್ಬರೂ ಕೋಪದಿಂದ ರಾಜನನ್ನು ದುರದುರನೆ ನೋಡುತ್ತ ಹಲ್ಲುಕಡಿಯುತ್ತಿರುವರು.)

ನಾರದಂ—ಎಲೆ ರಾಜಾಧಮಾ ! ಈ ಇಂದ್ರಜಾಲದಿಂದ ನಮ್ಮನ್ನು ವಂಚಿಸುವುದಕ್ಕಾಗಿಯೇ ಇದುವರೆಗೆ ಕಾಲಹರಣಮಾಡಿದೆಯಲ್ಲವೆ ?

ಪರ್ವತಂ—ಮಿತ್ರನೆ!ಇವನು ನಮ್ಮನ್ನು ಸ್ವಯಂವರಕ್ಕೆಂದು ಕರೆಸಿ, ನಾವು ಬಂದಮೇಲೆ ಏನೇನೋ ಯೋಚಿಸುವನೆವದಿಂದ ಕಾಲ ಹರಣವನ್ನು ಮಾಡಿದಾಗಲೇ ನನಗೆ ಸಂದೇಹವು ಹುಟ್ಟಿತು. ತನ್ನ ಮಗಳನ್ನು ಬೇರೆ ಯಾರೋ ಅಪಹರಿಸಿದಂತೆ ದುಃಖವನ್ನೂ ನಟಿಸುವನು ನೋಡು !

ರಾಜಂ.—(ದೈನ್ಯದಿಂದ) ಪೂಜ್ಯರೆ ! ಸತ್ಯವಾಗಿಯೂ ಈ ವಿಷಯದಲ್ಲಿ ನಾನು ಅಪರಾಧಿಯಲ್ಲ ! ನಾನು ಯಾವ ಸಂಗತಿಯನ್ನೂ ಕಾಣೆನು.

ನಾರದಂ—ಎಲೆಲ, ನೃಪಾಧಮಾ! ಈ ತಂತ್ರಗಳೆಲ್ಲವನ್ನೂ ನಾನು ಬಲ್ಲೆನು ಸಾಕು ಸುಮ್ಮನಿರು!

ರಾಜಂ—ಪೂಜ್ಯರೆ ! ನಿಷ್ಕಾರಣವಾಗಿ ನನ್ನನ್ನು ತಮ್ಮ ಆಗ್ರಹಕ್ಕೆ ಗುರಿಮಾಡಬಾರದು!ತಾವು ಹೀಗೆ ರೂಪಾಂತರದಿಂದಬಂದುದನ್ನೂ, ನನ್ನ ಕುಮಾರಿಯು ಅದೃಶ್ಯವಾದುದನ್ನೂ ನೋಡಿದರೆ, ತಾವೇ ನನ್ನನ್ನು ಅನೇಕವಿಧದಿಂದ ಪರೀಕ್ಷಿಸುವಹಾಗಿದೆ! ಸರ್ವವಿಧದಲ್ಲಿ

ಯೂ ತಮ್ಮ ಆಜ್ಞಾಧಾರಕನಾದ ನನ್ನಲ್ಲಿ ಪ್ರಸನ್ನರಾಗಿ ನನ್ನಕು ಮಾರಿಯನ್ನು ತೋರಿಸಿಕೊಡಬೇಕು.(ಎಂದುನಮಸ್ಕರಿಸುವನು)

*ನಾರದಂ—ಎಲೆಲೆ ವಂಚಕಾ! ಸಾಕು ನಿನ್ನ ನಟನವನ್ನು ಬಲ್ಲೆನು ಸುಮ್ಮನಿರು.

ಪರ್ವತಂ—ಮಿತ್ರನೆ! ಕಪಟಿಯಾದ ಇವನ ವಂಚನೆಗೆ ಈಗಲೇ ನಾವು ಫಲವನ್ನು ತೋರಿಸಬೇಕು.

ರಾಜಂ—ಪೂಜ್ಯರೆ! ತಮಗೆ ಅಷ್ಟುಶ್ರಮವೇಕೆ? ಮಹಾತ್ಮರಾದ ನಿಮ್ಮಂತವರ ವಿಷಯದಲ್ಲಿ ನಾನು ಅಪರಾಧಿಯಾಗಿದ್ದರ,ಆಕ್ಷಣವೇ ನನ್ನ ಕೈಯಲ್ಲಿರುವ ಈ ವಿಷ್ಣುಚಕ್ರವೇ ನನ್ನ ತಲೆಯನ್ನು ಸಹಸ್ರ ಭಾಗವಾಗಿ ಭೇದಿಸುತಿತ್ತಲ್ಲವೆ ? ನಾನು ಮನಸ್ಸಾಕ್ಷಿಯಾಗಿ ನಿಮ್ಮಲ್ಲಿ ಅಪರಾಧಿಯಲ್ಲವೆಂಬುದು ನಿಜವಾಗಿದ್ದರೆ, ಈ ವಿಷ್ಣುಚಕ್ರವೇ ತಮ್ಮ ಕೋಪಾಗ್ನಿಯಿಂದ ನನ್ನನ್ನು ರಕ್ಷಿಸಲಿ! ಪೂಜ್ಯರೆ!ಈಗಲೂ ಹೇಳುವೆನು. ನಿಜವಾಗಿ ನಾನು ಅಪರಾಧಿಯಲ್ಲ! ನಿಮ್ಮನ್ನು ವಂಚಿಸಬೇಕೆಂಬ ಉದ್ದೇಶದಿಂದ ನಾನು ಕಾಲಹರಣ ಮಾಡಿದವನಲ್ಲ! ನಾನು ನಿಮ್ಮಆಜ್ಞಾಧಾರಕನಾಗಿ ನಿಷ್ಕಪಟವಾದ ಹೃದಯದಿಂದ ನಿಮಗಾಗಿಯೇ ಈ ಸ್ವಯಂವರವನ್ನೇರ್ಪಡಿಸಿರುವಾಗಲೂ, ನೀವಿಬ್ಬರೂ ಹೀಗೆ ರೂಪಾಂತರದಿಂದ ಬಂದರೆ, ನಿಮ್ಮ ನಿಜಸ್ಥಿತಿಯನ್ನು ನಾನು ಹೇಗೆ ತಿಳಿಯಬಲ್ಲೆನು? ಈ ಸಂದರ್ಭದಲ್ಲಿ ನನ್ನ ಮಗಳನ್ನು ಯಾರೋ ಅಪಹ

ನಾರದಂ:— ರಾಗ. ತಾಳ.

*ನಾರದ :—ಎಲೆಲೇ । ದುರುಳಾ । ಸಾಕೀ ನಟನವು । ಬಲ್ಲೆ ನಿನ್ನಾಟವನು ॥
ನಿಲ್ಲಿಸೀ ನುಡಿಗಳನು । ಸೊಲ್ಲ ಮುರಿಯುವೆ ನಾನು ।
ಖುಲ್ಲನೆ ನಮ್ಮನು । ನಲ್ಲೆಮಾತಿನಲಿ । ವಂಚಿಪೆಯಲ । ನೀನು॥ ೧ ॥

ಪರ್ವತಂ :—ಛೀ ಛೀ।ಮೂರ್ಖಾ।ಯಾರೆಂದರಿಯುವೆ।ಪರ್ವತ ನಲ್ಲವೆ ನಾನು।
ತೋರುವೆನೆನ್ನಯ ತಪದ । ಸಾರವನೆಲ್ಲವ ನಿನಗೆ । ಕ್ರೂರನೆ ನಿನ್ನಯ ।
ಮೀರಿದ ಗರ್ವಕೆ। ಫಲವನು ನೋಡೀಗ ॥ ೨ ॥ ಛೀ । ಛೀ। ಮೂರ್ಖಾ॥

ರಿಸಿಕೊಂಡು ಹೋದುದಲ್ಲದೆ, ನಿಮ್ಮ ಕೋಪಕ್ಕೂ ಗುರಿಯಾದೆನು.

ನಾರದಂ—ಎಲೆ ವಾಚಾಲಕಾ ! ಇರಲಿ ! ನನ್ನ ಶಕ್ತಿಯನ್ನಾದರೂ ನೋಡು !

ಕಂ|| ಮದುವೆಯ ನೆವದಿಂದಮ್ಮಂ
ಮುದವೇರಿಸಿ ಸುತೆಯ ತೋರಿ ವಂಚಿಪೆಯಲ! ನೀಂ !
ಇದೊ! ನೋಡೆನ್ನ ಪದಾಂಗು
ಷ್ಠದೆ ಸೃಜಿಪೆಂ ನಿನಗೆ ಮೃತ್ಯುದೇವತೆಯೊಂದಂ ||

(ಕಾಲಿಂದ ನೆಲವನ್ನು ಗುದ್ದುದೊಡನೆ ಭಯಂಕರರೂಪವುಳ್ಳ ದೇವತೆಯು ನೆಲದಿಂದ ಮೇಲಕ್ಕೆದ್ದು)

ದೇವತೆ—(ನಾರದನಿಗೆ ತಲೆಬಗ್ಗಿ) ಮುನೀಂದ್ರಾ ! ನನ್ನಿಂದಾಗಬೇಕಾದ ಕಾರ್ಯವೇನು ?

ನಾರದಂ—ಎಲೆ ಮಾಯೆ ! ಈ ರಾಜನು ನಮ್ಮನ್ನು ವಂಚಿಸಿರುವನು. ಇವನ ಸೇನಾಪರಿಕರಗಳನ್ನು ಧ್ವಂಸಮಾಡಿ, ಇವನನ್ನು ಬಂಧಿಸು!

*ದೇವತೆ —ಮಹರ್ಷೀ! ನನ್ನ ಶಕ್ತಿಯನ್ನು ಕೇಳಬೇಕೆ ! ಇದೋ ! ಹೋಗುವೆನು !

ರಾಗ. ಹಂಸಧ್ವನಿ. ಆದಿತಾಳ.

*ಇದೋ!ಪೋಗುವೆ!!ಮದಿಸಿದ ರಾಜನ । ಮದವುಡುಗಿಸ ॥ ಲಿದೊ । ಪೋಗುವೆ!!ಅ!!
ವಿಧವಿಧದೀ । ಸದೆದವನಾ । ಪದಕೆರಗಿಸ ॥ ಲಿದೊ! ಪೋಗುವೆ ॥
ಉಗ್ರಕರಾಯುಧದಿಂದ । ಮುಗ್ಗುವ ರಿಪುಭಟವೃಂದ ।
ದೊಗ್ಗನು । ನೆಗ್ಗಿ ಮ । ಹೋಗ್ರ । ರಣಾಗ್ರದೆ ।
ಬಗೆಬಗೆಮಾಯೆಯ । ಮಿಗೆ ತೋರಿಸ ॥ ಲಿದೊ! ಪೋಗುವೆ ॥ ೧ ॥
ಫಡಫಡ ರಿಪುಗಳನೀಗ । ಕಡಿಕಡಿದೊಟ್ಟುತೆ ಬೇಗ ।
ಘುಡಿಘುಡಿ । ಸುತ ಧರೆ । ಗಡಗಡ । ನಡುಗುವೊ ।
ಲೊಡನೊಡ । ನಡಿಯಿಡು । ತಲಿ ಬೇಗನೆ ॥ ಇದೊ! ಪೋಗುವೆ ॥

ಆಶಾಭಂಗಹೊಂದಿದ ನಾರದಪರ್ವತರು, ಕೋಪದಿಂದ ಮಾಯಾದೇವತೆಯನ್ನು ಸೃಷ್ಟಿಸಿ, ಅಂಬರೀಷನಮೇಲೆ ಪ್ರೇರಿಸಿದುದು. ವಿಷ್ಣುಚಕ್ರವು ಆ ದೇವತೆಯನ್ನು ದಹಿಸಲಾರಂಭಿಸಿದುದು ಮಹಾವಿಷ್ಣುವು ಶ್ರೀಮತಿಯೊಡನೆ ವಿಮಾನದಲ್ಲಿ ಪ್ರತ್ಯಕ್ಷನಾದುದು.

(೯೭)

(ಆರ್ಭಟಿಸುತ್ತ!ರಾಜನಮೇಲೆ ಬಿಳುವುದಕ್ಕೆ ಬರುವಳು. ಚಕ್ರಾಯುಧವು ಮಾಯೆಯನ್ನು ಬೆನ್ನಟ್ಟುವುದು. ಮಾಯೆಯು ಚಕ್ರಜ್ವಾಲೆಗೆ ಹೆದರಿ ಹಿಂತಿರುಗಿ ಓಡಿಬಂದು) ಮಹರ್ಷೀ! ರಕ್ಷಿಸು ಯಾವುದೋ ಅದ್ಭುತತೇಜಸ್ಸು ನನ್ನನ್ನು ದಹಿಸುತ್ತ ಬೆನ್ನಟ್ಟಿ ಬರುವುದು. (ನಾರದನನ್ನು ಮರೆಹುಗುವಳು.)

ನಾರದಂ —(ಮುಂದೆ ನೋಡಿ)ಓಹೋ! ಇದು ವಿಷ್ಣುಚಕ್ರದ ತೇಜಸ್ಸು! ಇದು ನಮ್ಮನ್ನೇ ದಹಿಸುತ್ತಿರುವುದಲ್ಲಾ! ಇನ್ನೇನು ಗತಿ!ಪರ್ವತಾ! ಈಗ ಮಾಡುವುದೇನು !

ಪರ್ವತಂ —ಮಾಡುವುದೇನು? ನಾವು ನಿರ್ಭಯವಾದ ವಿರಕ್ತಿಮಾರ್ಗದಿಂದ ದಾರಿತಪ್ಪಿ ಕಾಮಮಾರ್ಗದಲ್ಲಿ ಸಿಕ್ಕಿದಮೇಲೆ, ಅದರಿಂದುಂಟಾಗುವ ಅನರ್ಥಗಳಿಗೆಲ್ಲಾ ಗುರಿಯಾಗಲೇಬೇಕು. ಸ್ವಯಂ ಕೃತಾಪರಾಧಕ್ಕೆ ತಕ್ಕಫಲವು ತೋರುತ್ತಿರುವುದು. ಆಶಾಭಂಗವೊಂದು! ಅವಮಾನವೊಂದು ! ಕೊನೆಗೆ ಪ್ರಾಣಾಂತಕರವಾದ ಈ ಅನರ್ಥವೂ ಬಂದೊದಗಿತು.

ನಾರದಂ—ರಾಜನು ನಿಜವಾಗಿ ಅಪರಾಧಿಯಾಗಿದ್ದಪಕ್ಷದಲ್ಲಿ, ಈ ವಿಷ್ಣುಚಕ್ರವು ಅವನಿಗೆ ಸಹಾಯವಾಗಿ ನಮ್ಮನ್ನು ಬಾಧಿಸುತ್ತಿರಲಿಲ್ಲ? ಬೇರೆ ಯಾರೋ ಮಾಯಾವಿಗಳಿಂದ ಈ ಕಾರ್ಯವು ನಡೆದಿರಬೇಕು.

ಪರ್ವತಂ—ಹಾಗಿದ್ದರೆ ಈಗ ನಾವು ರಾಜನಲ್ಲಿಯೇ ಶರಣಾಗತರಾಗುವುದು ಮೇಲೆಂದು ತೋರುವುದು.

ನಾರದಂ—ನಿಜ! ಹಾಗೆಯೇ ಮಾಡುವೆವು.

(ನಾರದಪರ್ವತರೂ, ಮಾಯೆಯೂ ಕೈಮುಗಿದು ನಿಲ್ಲುವರು.)

ನಾರದಂ—ರಾಜೇಂದ್ರಾ! ನಾವು ತಿಳಿಯದೆ ಮಾಡಿದ ತಪ್ಪನ್ನು ಮನ್ನಿಸಿ ನಮ್ಮನ್ನು ಈ ಚಕ್ರತಾಪದಿಂದ ರಕ್ಷಿಸಬೇಕು. (ಎಂದು ಕಾಲ ಮೇಲೆ ಬಿಳುವುದಕ್ಕೆ ಹೋಗುವರು.)

ರಾಜಂ—(ಅವರನ್ನು ಕೈಹಿಡಿದೆತ್ತಿ) ಪೂಜ್ಯರೆ! ಸರ್ವಲೋಕಪೂಜಿತರಾದ ನೀವು ನಿಮ್ಮ ಪಾದಸೇವಕನಾದ ನನಗೆ ನಮಸ್ಕರಿಸುವುದರಿಂದ ನನ್ನನ್ನು ದೋಷಕ್ಕೆ ಗುರಿಮಾಡಬೇಡಿರಿ! ಈ ಚಕ್ರಕ್ಕೆ ನಾನು ಅಧೀನನೇಹೊರತು ಇದು ನನ್ನ ಅಧೀನವಲ್ಲ. ಆ ಶ್ರೀಹರಿಯ ಸಂಕಲ್ಪಾನುಸಾರವಾಗಿ ಅದು ನಡೆಯುತ್ತಿರುವುದೇ ಹೊರತು, ಅದನ್ನು ತಡೆಯುವುದಕ್ಕಾಗಲಿ ಬಿಡುವುದಕ್ಕಾಗಲಿ ನಾನು ಶಕ್ತನಲ್ಲ! ಆದರೆ ನನ್ನ ಮನೆಗೆ ಅತಿಥಿಗಳಾಗಿ ಬಂದ ನೀವು ಈ ಅಪಾಯಕ್ಕೆ ಗುರಿಯಾಗದಂತೆ, ನಾನೇ ನಿಮಗಾಗಿ ಆ ಭಗವಂತನನ್ನು ಪ್ರಾರ್ಥಿಸುವೆನು.

*(ಎಂದು ಕೈಮುಗಿದು ನಿಂತು ಪ್ರಾರ್ಥಿಸುವನು)

(ತೆರೆಯು ಒಡೆಯುವುದು. ಶ್ರೀಮತಿಯೊಡನೆ ಭಗವಂತನು ಪ್ರತ್ಯಕ್ಷನಾಗಿ)

ವಿಷ್ಣು—ಭಕ್ತೋತ್ತಮಾ! ಅಂಬರೀಷಾ! ನಿನ್ನ ಭಕ್ತಿಗೆ ಮೆಚ್ಚಿದೆನು ನಿನ್ನ ಕುಮಾರಿಯ ವಿಷಯವಾಗಿ ನೀನು ಚಿಂತಿಸಬೇಕಾದುದಿಲ್ಲ.

---

* ರಾಗ. ತಾಳ.

ದೇವದೇವ । ದಯಾನಿಧೇ । ಸುಜನಪಾಲ । ಶ್ರೀನಿಧೇ ।
ಪಾವನಾತ್ಮ । ವೈಭವಾ । ಪಾಲಿಸೈ ಕೃ । ಪಾರ್ಣವಾ ॥
ಕನ್ಯೆಯನ್ನು । ನಾನಗಲಿ । ಖಿನ್ನಮಾನಸನಾಗಿರೆ ।
ಮಾನ್ಯರಾದ । ಮೌನಿವರರ । ಕೋಪಕೀಡಾದೆನೇ ॥
ದೀನಬಂಧೋ । ದಯಾಸಿಂಧೋ । ದಾನವಾರಿ । ಶ್ರೀಹರೀ ।
ಮಾನದಿಂದ । ಪಾಲಿಸೆನ್ನ । ದೀನನಾಗಿ । ಬೇಡುವೆ ॥

ಇದೋ! ನಿನ್ನ ಮಗಳು ಇಲ್ಲಿರುವಳು ನೋಡು! ಇವಳು ಪೂರ್ವ ಜನ್ಮದಲ್ಲಿ ತಪಸ್ಸಿನಿಂದ ನನ್ನನ್ನು ಮೆಚ್ಚಿಸಿ ನಾನೇ ತನಗೆ ಪತಿಯಾಗಬೇಕೆಂದು ವರವನ್ನು ಪಡೆದಿರುವಳು. ಆದರಂತೆ ನಾನೇ ಅವಳನ್ನು ವರಿಸಿರುವೆನು. ನೀನು ಚಿಂತಿಸಬೇಡ !

ರಾಜಂ—ಪುರುಷೋತ್ತಮಾ! ಈಗ ನಾನು ನನ್ನ ಮಗಳವಿಷಯವಾಗಿಯೂ ಅಷ್ಟಾಗಿ ಚಿಂತಿಸುವವನಲ್ಲ. ನನ್ನ ಮನೆಗೆ ಅತಿಥಿಗಳಾಗಿ ಬಂದ ಈ ಮಹರ್ಷಿಗಳು ನನ್ನನ್ನು ಅಪರಾಧಿಯೆಂದು ತಿಳಿದು ಕುಪಿತರಾಗಿರುವರು. ನೀನು ಅವರ ಸಂದೇಹವನ್ನು ನೀಗಿಸಬೇಕಲ್ಲದೆ ಈ ಚಕ್ರವು ಇವರಿಗೆ ಯಾವ ಅಪಾಯವನ್ನೂ ಉಂಟುಮಾಡದಂತೆ ರಕ್ಷಿಸಬೇಕು.

ವಿಷ್ಣು—ರಾಜೇಂದ್ರಾ! ಇದೋ! ಆ ಚಕ್ರವನ್ನು ಪ್ರತಿಗ್ರಹಿಸಿಕೊಂಡೆನು. ಇವರಿಗೆ ನಿಜವಾಗಿಯೂ ಅಪಾಯವನ್ನುಂಟುಮಾಡಬೇಕೆಂಬುದು ನನ್ನ ಉದ್ದೇಶವಲ್ಲ! ಕಾಮಿಗಳು ಅನೇಕವಿಧದಲ್ಲಿ ಹಾಸ್ಯಾಸ್ಪದರಾಗುವರೆಂಬುದನ್ನು ಲೋಕಕ್ಕೆ ತೋರಿಸುವುದಕ್ಕಾಗಿ ನಾನು ಈ ಸಂವಿಧಾನಗಳನ್ನು ನಡೆಸಬೇಕಾಯಿತು. ಎಲೈ ನಾರದಪರ್ವತರೆ! ನಿಮ್ಮಲ್ಲಿ ರಾಜನು ಯಾವವಿಧದಲ್ಲಿಯೂ ಅಪರಾಧಿಯಲ್ಲ! ನೀವಿಬ್ಬರೂ ಕಾಮಮೋಹಿತರಾಗಿ ಒಬ್ಬರನ್ನೊಬ್ಬರು ವಂಚಿಸಬೇಕೆಂಬ ಬುದ್ಧಿಯಿಂದ ನನ್ನಲ್ಲಿ ಪ್ರಾರ್ಥಿಸಿದಿರಿ! ನೀವುನೀವು ಕೇಳಿದಂತೆ ನಾನು ವರವನ್ನು ಕೊಟ್ಟೆನು ... ನಿಮ್ಮಿಬ್ಬರ ಮುಖವೂ ವಾನರಭಲ್ಲೂಕಗಳಂತೆ ವಿರೂಪವಾಗಿ ಕಂಡುದು ನಿಜವು. ಆದರಿಂದಲೇ ರಾಜನು ನಿಮ್ಮನ್ನು ನೋಡಿ ಭ್ರಮಿಸಬೇಕಾಯಿತು.

ನಾರದಂ—(ಬೆಜ್ಜರದಿಂದ) ಏನು ನನ್ನಮುಖವೂ ವಿರೂಪವಾಗಿರುವುದೆ ?

ಪರ್ವತಂ—ನಾನು ಕಪಿಯಹಾಗೆ ಕಾಣುವೆನೆ ?

ವಿಷ್ಣು—ಹೌದು!

ಪರ್ವತಂ—ದೇವಾ!ಹಾಗಿದ್ದರೆ ನಾವು ಈ ಅವಮಾನವನ್ನನುಭವಿಸಿಬದುಕಿರುವುದಕ್ಕಿಂತಲೂ, ನಿನ್ನ ಚಕ್ರಜ್ವಾಲೆಯಿಂದ ಆಗಲೇ ದಗ್ಧರಾಗಿದ್ದರೆ ಉತ್ತಮವಾಗಿದ್ದಿತು. ಇನ್ನುಮೇಲೆ ನಾವು ಭೂಮಿಯಲ್ಲಿ ನಾಚಿಕೆಯಿಲ್ಲದೆ ತಲೆಯೆತ್ತಿ ತಿರುಗುವುದು ಹೇಗೆ! ಲೋಕದಲ್ಲಿ ನಮ್ಮಸ್ಥಿತಿಯು ಕೇವಲಹಾಸ್ಯಾಸ್ಪದವಾಯಿತು. ನಮ್ಮ ಶಾಪವೂ ಈ ರಾಜನಲ್ಲಿ ವಿಫಲವಾಯಿತು. ಇನ್ನು ನಮ್ಮನ್ನು ಯಾರು ಗೌರವಿಸುವರು ?

ವಿಷ್ಣು.—ಓ ಮಹರ್ಷಿಗಳೇ! ಈಗಲೂ ನಿಮ್ಮ ಗೌರವಕ್ಕೂ, ತಪಶ್ಶಕ್ತಿಗೂ ಏನೂ ಕೊರತೆಯಿಲ್ಲ. ನನ್ನ ಮಾಯೆಯು ಎಂತವರಿಗಾದರೂ ದುರತಿಕ್ರಮವು. ನಿಮ್ಮ ·ಯತ್ನವೇನಿದೆ ? ಇನ್ನುಮೇಲೆ ನೀವು ಮೊದಲಿನಂತೆಯೇ ಲೋಕಕ್ಕೆ ಜ್ಞಾನೋಪದೇಶಕರಾಗಿ ಸಂಚರಿಸಬಹುದು. ಈ ರಾಜನಲ್ಲಿ ನಿಮ್ಮಶಾಪವು ವಿಫಲವಾಯಿತೆಂದು ಹೇಳಿದಿರಲ್ಲವೆ ? ಒಂದುವೇಳೆ ನಾನಾದರೂ ನಿಮ್ಮ ಶಾಪವನ್ನು ಪ್ರತಿಗ್ರಹಿಸುವೆನೇ ಹೊರತು, ಭಕ್ತನಾದ ಈ ಅಂಬರೀಷನ ಅಪಾಯವನ್ನು ಸಹಿಸಲಾರೆನು. ನಿಮ್ಮ ಗೌರವಕ್ಕೂ, ನಿಮ್ಮ ತಪಶ್ಶಕ್ತಿಗೂ ಇದರಿಂದ ಕುಂದಕವಿಲ್ಲವೆಂಬ ವಿಷಯದಲ್ಲಿ ಲೋಕಕ್ಕೆ ನಂಬಿಕೆಯುಂಟಾಗುವಂತೆ ನಾನೇ ನಿಮ್ಮ ಶಾಪಕ್ಕೆ ಗುರಿಯಾಗುವೆನು.

ನಾರದಂ—ನಮ್ಮ ಬುದ್ಧಿಮೋಹಕ್ಕೂ ನಿನ್ನ ಮಾಯೆಯೇ ಕಾರಣವೆಂದು ಹೇಳಿದೆಯಲ್ಲವೆ? ನೀನೇ ನಮಗೆ ಈ ಮೋಹವನ್ನುಂಟುಮಾಡಿ ನಾವು ಕಾಮಿಸಿದ ಕನ್ಯೆಯನ್ನಪಹರಿಸಿದುದರಿಂದ, ನೀನೂ ಈ ಶ್ರೀಮತಿಯೊಡನೆ ಮನುಷ್ಯನಾಗಿ ಹುಟ್ಟಿ, ಈ ನಿನ್ನ ಪತ್ನಿಯ

ನ್ನು ಬೇರೊಬ್ಬರು ಅಪಹರಿಸಿಕೊಂಡುಹೋಗುವುದರಿಂದ ನೀನೂ ಕೆಲವುಕಾಲದವರಿಗೆ ನಮ್ಮಂತೆ ವಿಯೋಗದುಃಖವನ್ನನುಭವಿಸಬೇಕು. ನೀನು ನಮ್ಮಲ್ಲಿ ವಾತ್ಸಲ್ಯವುಳ್ಳವನಾಗಿ, ಈ ಶಾಪವನ್ನು ಪ್ರತಿಗ್ರಹಿಸಿದರೆ, ಲೋಕಕ್ಕೆ ನಮ್ಮಲ್ಲಿ ಗೌರವಬುದ್ಧಿಯು ತಪ್ಪಲಾರದು-

ವಿಷ್ಣು.—ನಾರದಾ! ಸಂತೋಷಪೂರ್ವಕವಾಗಿ ಪರಿಗ್ರಹಿಸುವೆನು. ನಾನು ಇದಕ್ಕೆ ಮೊದಲೇ ಲೋಕಕ್ಷೇಮಕ್ಕಾಗಿ ಮನುಷ್ಯರೂಪದಿಂದ ಅವತರಿಸಬೇಕೆಂದು ಸಂಕಲ್ಪಿಸಿದ್ದೆನು. ನಿನ್ನ ಶಾಪವು ಅದಕ್ಕೆ ಸಹಕಾರಿಯಾಗಲಿ! ಕೇಳು.

ಸೀಸ|| ರಘುವಂಶದಲಿ ನಾನು | ರಾಮರೂಪದಿ ಪುಟ್ಟಿ |
ಸಕಲರಾಕ್ಷಸರನ್ನು | ಸಂಹರಿಪೆನು ||
ಜನಕಾತ್ಮಭವೆಯಾಗಿ | ಜನಿಸಿ ತೋರುವಳೀಕೆ |
ಧರೆಗೆ ಪಾತಿವ್ರತ್ಯಧರ್ಮಗಳನು |
ಈ ಸುದರ್ಶನಚಕ್ರ | ವೆನ್ನ ಕೈಗಣೆಯಾಗಿ |
ದಶಕಂಠಕಂಠಭೇ | ದನಗೆಯ್ವುದು |
ನಿಖಿಲರಾಕ್ಷಸವಂಶ | ನಿರ್ಮೂಲನಕ್ಕೆ ತಾ |
ನೀಪಾಯ ಶೂರ್ಪಣಖಿ | ಯಾಗಿ ಬಹಳು ||

ಗೀ || ಸುಗಮುನಿಪ | ನಿನ್ನ ಶಾಪೋಕ್ತಿ ಸಕಲಧರೆಗೆ
ಪರಮಮಂಗಳಾವಹಮಾಗಿ ತೋರಿ ಮೆರೆಗೆ |
ವರಗುಣಾಗ್ರಣಿಯೀ ಯಂಬರೀಷನೃಪನಾ |
ನಿರುಪಮಯಶೋರಾಶಿ | ಚಿರಕಾಲಮಾಳ್ಗೆ ನೆಲನಾ ||

ಎಲ್ಲರೂ—ದೇವಾ ! ಧನ್ಯರಾದೆವು.

ಮಂಗಳಂ.

ಕ್ಷೀರಾಂಭೋಧಿ ವಿಹಾರ । ಭಕ್ತಾ । ಧಾರ ಭವಭಯತಾರಕಾ ।
ಸಾರಸಲೋಚನ । ವಾರಣಮೋಚನ । ಶ್ರೀರಮಣೀ ಪರಿತೋಷಕಾ ।
ವೀರ ಧೀರ ಗಂ । ಭೀರ ಸದಾಗಮ । ಸಾರ ನಿಜಾಶ್ರಿತಪಾಲಕಾ ।
ಮಾರಜನಕ ವರ । ಕಾರಣಪೂರುಷ । ಪಾಲಿಸು ಜಗದಧಿ । ನಾಯಕಾ ॥

ತೆರೆಯು ಬಿಳುವುದು.

ಇದು ಪಂಚಮಾಂಕವು.

ಶ್ರೀ ಶ್ರೀ ಶ್ರೀ.